# ಅಧ್ಯಾಯ 5

# ಒಂದು ಸೇತುವೆ: ಸಮಾಧಾನದ ಆಶೀರ್ವಾದ

ಪೌಲನ ವಿಚಾರಧಾರೆಯ ಮುಂದುವರೆದ ಭಾಗದಲ್ಲಿ ರೋಮಾ 5ನೇ ಅಧ್ಯಾಯವು ಹೇಗೆ ಸರಿ ಹೊಂದುತ್ತದೆ? ಈ ಅಧ್ಯಾಯವು ನಂಬಿಕೆಯಿಂದ ನೀತಿನಿರ್ಣಯದ ಮೇಲಿನ ಪೌಲನ ಉಪದೇಶವನ್ನು ಪರಾಕಾಷ್ಠೆಗೆ ತೆಗೆದುಕೊಂಡು ಹೋಗುತ್ತದೆಂದು ಕೆಲವರು ಭಾವಿಸುತ್ತಾರೆ, ಇನ್ನು ಕೆಲವರು ಇದನ್ನು ಶುದ್ಧೀಕರಣದ ವಿಷಯವಾಗಿ ಮಾತಾಡುವ ಮುಂದಿನ ಅಧ್ಯಾಯಗಳೊಂದಿಗೆ ಸೇರ್ಪಡೆಗೊಳಿಸುತ್ತಾರೆ. ನನ್ನ ವಿವೇಚನೆಯ ಪ್ರಕಾರ, ರೋಮಾ 5ನೇ ಅಧ್ಯಾಯವು ನೀತಿನೀರ್ಣಯ ಮತ್ತು ಶುದ್ಧೀಕರಣದ ವಿಷಯಗಳ ನಡುವೆ ಒಂದು ಸೇತುವೆಯಾಗಿ ಪಾತ್ರವಹಿಸುತ್ತದೆ.

3:21-4:25 ರಲ್ಲಿ, ನೀತಿನಿರ್ಣಯವು ನಂಬಿಕೆಯ ಅಧಾರದಲ್ಲಿಯೇ ಎಂಬದಾಗಿ ತೋರ್ಪಡಿಸಲು ಪೌಲನು ವಾಕ್ಯಗಳನ್ನು ಮತ್ತು ತಾರ್ಕಿಕತೆಯನ್ನು ಉಪಯೋಗಿಸಿದನು. ಈಗ, ಆ ನಿಯಮವನ್ನು ಸ್ಥಾಪಿಸಿಯಾದ ಬಳಿಕ, ಆತನು ನೀತಿನಿರ್ಣಯದಿಂದಾಗುವ ಆಶೀರ್ವಾದಗಳ ಪಟ್ಟಿಯನ್ನು ಮಾಡುವದಕ್ಕೆ ಆತನು ಸಿದ್ಧನಾಗಿದ್ದನು. William Barclay ಬರೆದದ್ದೇನೆಂದರೆ ರೋಮಾ 5ರ ಮೊದಲ ಭಾಗವು ಪೌಲನ "ಭಾವಗೀತಾತ್ಮಕವಾದ ವಾಕ್ಯಭಾಗಗಳಲ್ಲೊಂದಾಗಿದ್ದು ಅದರಲ್ಲಿ ಆತನು ದೇವರಲ್ಲಿನ ತನ್ನ ದೃಢವಿಶ್ವಾಸದ ಆಪ್ತಸಂತೋಷವನ್ನು ಬಹುತೇಕ ಹಾಡಿ ತೋರಿಸುತ್ತಾನೆ."[1] R. C. Bell ಹೇಳಿದ್ದೇನೆಂದರೆ, "ಕ್ರೈಸ್ತತ್ವದ ಅಪರಿಮಿತವಾದ ಸಂಪನ್ಮೂಲಗಳಿಂದ ತುಂಬಿರುವ ವಾಕ್ಯಭಾಗವು ಮತ್ತೊಂದು ಸಿಕ್ಕುವದು ವಿರಳ."[2]

## ಯೇಸು ಕ್ರಿಸ್ತನ ಮುಖಾಂತರ ದೇವರೊಂದಿಗೆ ಸಮಾಧಾನ (5:1-11)

ಪೌಲನು ಹೇಗೆ ಅಷ್ಟೊಂದು ಸಂಕಷ್ಟಗಳನ್ನು ಎದುರಿಸಿ ಬದುಕುವವನಾದನೆಂಬದನ್ನು ಅರ್ಥಮಾಡಿಕೊಳ್ಳಲು ಈ ವಾಕ್ಯಭಾಗವು ನಮಗೆ ಸಹಾಯ ಮಾಡುತ್ತದೆ (ನೋಡಿರಿ 2 ಕೊರಿಂಥ 11:23-29)—ಅವುಗಳನ್ನು ಸೈರಿಸಿಕೊಳ್ಳುವದು ಮಾತ್ರವಲ್ಲ, ಆದರೆ ಅವುಗಳ ಮೇಲೆ ಜಯಗೊಳ್ಳುವದು (ನೋಡಿರಿ 8:37). ಆತನು ಯಾವ ಕಷ್ಟಗಳನ್ನು ಎದುರಿಸಿದರೂ ಅವನಲ್ಲಿ ಸಮಾಧಾನ ಮತ್ತು ನಿರೀಕ್ಷೆಯಿತ್ತು (5:1, 2, 4, 5). ದೇವರು ಆತನನ್ನು ಪ್ರೀತಿಸುತ್ತಾನೆಂದು ಅವನಿಗೆ ಗೊತ್ತಿತ್ತು (5:5-9), ಅವನ ವೈರಿಗಳು ಆತನನ್ನು ಕೊಂದರೂ, ತಾನು ನಿತ್ಯವಾಗಿ ರಕ್ಷಿಸಲ್ಪಡುವೆನೆಂದು, ತಾನು ಮಹಿಮೆಯಲ್ಲಿ ದೇವರ ಸಂಗಡವಿರುವೆನೆಂದು, ಅವನಿಗೆ ಗೊತ್ತಿತ್ತು (5:2, 9, 10).

## ನಂಬಿಕೆಯಿಂದ ನೀತಿವಂತರೆಂಬ ನಿರ್ಣಯ (5:1-5)

**[1]ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ. [2]ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ. [3]ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. [4]ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ, ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು. [5]ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ; ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ.**

**ವಚನ 1.** ಪೌಲನು ಹೀಗೆ ಆರಂಭಿಸಿದನು, **ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ . . . ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ.** ಆತನು "ಹೀಗಿರಲಾಗಿ" ಎಂಬದನ್ನು ಉಪಯೋಗಿಸುವದು ತೋರ್ಪಡಿಸುವದೇನೆಂದರೆ ಆತನು ಈಗ ಮುಂದಕ್ಕೆ ಹೇಳಲಿಕ್ಕೆ ಹೊರಟಿರುವದೆಲ್ಲವೂ ತಾನು ಈ ಮುಂಚೆ ಮಾಡಿದ ನೀತಿನಿರ್ಣಯದ ಕುರಿತ ಚರ್ಚೆಯ ಮೇಲೆ ಆಧಾರವಾಗಿರುತ್ತದೆಂಬದೇ. ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯು ಹತಾಶೆ ಮತ್ತು ಸಂಶಯವನ್ನು ಉಂಟುಮಾಡುತ್ತದೆ ಯಾಕೆಂದರೆ ನಾವು ಧರ್ಮಶಾಸ್ತ್ರವನ್ನು ದೋಷವಿಲ್ಲದೆ ಕೈಕೊಂಡು ನಡೆಯಲು ಸಾಧ್ಯವಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ದೇವರ ಕೃಪೆ/ನಂಬಿಕೆಯ ವ್ಯವಸ್ಥೆಯಿಂದ ಸಮಾಧಾನ ಉಂಟಾಗುತ್ತದೆ.

ಅನೇಕ ಪ್ರಾಚೀನ ಹಸ್ತಪ್ರತಿಗಳಲ್ಲಿ "ನಾವು ಸಮಾಧಾನದಲ್ಲಿ ಇರೋಣ" ಎಂಬುದರ ಬದಲಿಗೆ "ನಾವು ಸಮಾಧಾನ ಹೊಂದೋಣ" ಎಂದಿರುತ್ತದೆ. "ನಾವು . . . ಹೊಂದೋಣ" ಎಂಬುದು ಸಂಭಾವನಾರ್ಥಕ ἔχωμεν (*echōmen*)ಎಂಬದರ ಅನುವಾದವಾಗಿದೆ, ಆದರೆ "ಹೊಂದಿದ್ದೇವೆ" ಎಂಬುದು ἔχομεν (*echomen*) ಎಂಬ ನಿಶ್ಚಯಾರ್ಥಕವನ್ನು ಸೂಚಿಸುತ್ತದೆ. ಈ ಎರಡು ಪದಗಳಲ್ಲಿನ ವ್ಯತ್ಯಾಸವು ಏಕೈಕ ಪದವಾಗಿದೆ: ಒಂದು omega (ω, *ō*) ಮತ್ತು ಅದಕ್ಕೆ ಎದುರಾಗಿ ಒಂದು omicron (ο, *o*). ಸನ್ನಿವೇಶದ ಪ್ರಕಾರ ಇದೊಂದು ಪ್ರಬೋಧನೆಯ ಬದಲಾಗಿ ಒಂದು ಹೇಳಿಕೆ ಆಗಿರುತ್ತದೆಂದು ಬಹಪಾಲು ಅನುವಾದಕರು ಭಾವಿಸುತ್ತಾರೆ.

"ದೇವರೊಂದಿಗೆ ಸಮಾಧಾನ" ಎಂಬ ಪದವು ಒಂದು ಸ್ವಂತಿಕೆಯ ಭಾವನೆಯನ್ನು ಸೂಚಿಸವದಿಲ್ಲ ಬದಲಿಗೆ ಒಂದು ವಸ್ತುನಿಷ್ಠತ್ವದ ಸತ್ಯವನ್ನು ಸೂಚಿಸುತ್ತದೆ: ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವದರಿಂದ ದೇವರೊಂದಿಗೆ ಸಮಾಧಾನಗೊಂಡಿದ್ದೇವೆ (ನೋಡಿರಿ 5:10, 11). ನಾವು ಇನ್ನು ಮೇಲೆ ದೇವರ ವೈರಿಗಳಲ್ಲ, ಆದರೆ ಆತನ ಮಿತ್ರರಾಗಿದ್ದೇವೆ. "ವೈಷಮ್ಯವು ಮುಗಿದುಹೋಯಿತು; ಸಮಾಧಾನ ಒಪ್ಪಂದವು ಸಹಿ

ಹಾಕಲ್ಪಟ್ಟಿತು.”[3]

ನಾವು “ದೇವರ ಸಂಗಡ ಸಮಾಧಾನ” ಹೊಂದಿರುವದರಿಂದ, ನಾವು “ದೇವರ ಸಮಾಧಾನದಲ್ಲಿ” ಆನಂದಿಸಬಹುದು, ಅದು “ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿ” ಯ ಅನುಭವವಾಗಿರುತ್ತದೆ (ಫಿಲಿಪ್ಪಿ 4:7), ಅದು “ಮಾನವ ಬುದ್ಧಿಗೆ ನಿಲುಕಲಾರದ್ದಾಗಿದೆ” (Phillips). ಈ ಸಮಾಧಾನವು ಲೋಕದಲ್ಲಿ ಎಲ್ಲವೂ ಸರಿಯಾಗಿರುವದರ ಮೇಲೆ ಅವಲಂಭಿತ ಆಗಿರುವದಿಲ್ಲ; ಅದು ಭಾವನಾತ್ಮಕ ಸಂತೃಪ್ತಿಗಿಂತಲೂ ಹೆಚ್ಚಿನದ್ದಾಗಿದೆ. ಅಂಥ ಸಮಾಧಾನದ ಮೂಲವು ದೇವರೊಂದಿಗಿನ ಸಾಮರಸ್ಯದ ಸಂಬಂಧವೇ ಆಗಿದೆ, ಅದು ಹೊರಗಿನ ಪರಿಸ್ಥಿತಿಗಳು ಏನೇ ಇದ್ದರೂ ಒಂದು ಸಂತೃಪ್ತಿಭಾವನೆಯನ್ನು ಉಂಟುಮಾಡಬಲ್ಲದು (ನೋಡಿರಿ 5:3, 4). ನಾವು ಕ್ರೈಸ್ತರಾಗಿದ್ದು ನಮ್ಮಲ್ಲಿ ದೇವರ ಶಾಂತಿಯ ಕೊರತೆಯಿರುವದಾದಲ್ಲಿ, ಬಹುಶಃ ಅದಕ್ಕೆ ಕಾರಣ, ನಾವು ದೇವರೊಂದಿಗೆ ಸಮಾಧಾನ ಹೊಂದಿರುವದೇನೆಂಬದರ ಅರ್ಥವನ್ನು ಗ್ರಹಿಸದಿರುವದೇ ಆಗಿದೆ.

ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ದೇವರೊಂದಿಗೆ ಸಮಾಧಾನ ಉಂಟಾಗುತ್ತದೆ. ಯೇಸು ನಮ್ಮನ್ನು ತನ್ನ ತಂದೆಯೊಂದಿಗೆ ಸಂಧಾನಗೊಳಿಸುವದಕ್ಕಾಗಿ ಮರಣಿಸಿದ್ದರ ಕಾರಣದಿಂದ ನಮಗೆ ದೇವರ ಸಂಗಡ ಸಮಾಧಾನ ಉಂಟಾಯಿತು (5:6-8, 10, 11). ಈ ವಾಕ್ಯಭಾಗದಲ್ಲಿ, ಪೌಲನು ಸತತವಾಗಿ ನಮ್ಮ ಆತ್ಮೀಕ ಆಶೀರ್ವಾದಗಳು ಕ್ರಿಸ್ತನ “ಮುಖಾಂತರವಾಗಿ” ಎಂಬದನ್ನು ಹೇಳುತ್ತಾನೆ (5:1, 2, 9-11).

**ವಚನ 2.** ಈ ವಚನವು ಅಪೊಸ್ತಲನ ಇನ್ನೊಂದು “ಮುಖಾಂತರವಾಗಿ” ಹೇಳಿಕೆಯೊಂದಿಗೆ ಆರಂಭವಾಗುತ್ತದೆ: ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. “ಆತನ” ಎಂಬುದು ವಚನ 1 ರಲ್ಲಿನ “ಕರ್ತನಾದ ಯೇಸು ಕ್ರಿಸ್ತನು” ಎಂಬದನ್ನು ಸೂಚಿಸುತ್ತದೆ. “ಸಹ” ಎಂಬುದು ಹೆಚ್ಚಿನ ಆಶೀರ್ವಾದಗಳನ್ನು ಸೂಚಿಸುತ್ತದೆ.

“ಪ್ರವೇಶವಾಯಿತು” ಎಂಬ ಪದಗುಚ್ಛವು ಗ್ರೀಕ್ ನ προσαγωγή (*prosagōgē*) ಎಂಬ ಪದದ ಅನುವಾದವಾಗಿದೆ. ಸಂಬಂಧಿತ ಸಂಯುಕ್ತ ಕ್ರಿಯಾಪದ προσάγω (*prosagō*)—ಅದು πρός (*pros*, “ಗೆ”) ಮತ್ತು ἄγω (*agō*, “ನಡಿಸು”) ಗಳನ್ನು ಜೋಡಿಸುತ್ತದೆ. ಅದರ ಅರ್ಥವೇನೆಂದರೆ “ಒಬ್ಬನ ಸನ್ನಿಧಾನದೊಳಗೆ ಕರೆತರುವದು.” ಲೌಕಿಕ ಸಾಹಿತ್ಯದಲ್ಲಿ, ಅದು ಕೆಲವು ಸಾರಿ “ಮಹಾ ಅರಸನ ಭೇಟಿಗೆ ಅಂಗೀಕಾರ” ಎಂಬದಕ್ಕೆ ಉಪಯೋಗಿಸಲ್ಪಡುತ್ತಿತ್ತು.[4] ನಾವು ಈ ರೀತಿಯಾಗಿ ಯೋಚಿಸಬಹುದು, ಏನೆಂದರೆ ಯೇಸು ನಮ್ಮನ್ನು ದೇವರ ಸಿಂಹಾಸನದ ಕೋಣೆಯೊಳಗೆ ಕರೆದೊಯ್ದು ಮುಖದಲ್ಲಿ ಮುಗುಳ್ನಗೆಯೊಂದಿಗೆ ದೇವರಿಗೆ “ನಾನು ನಿನಗೆ ನನ್ನ ಮಿತ್ರನನ್ನು ಪರಿಚಯಿಸುತ್ತೇನೆ” ಎಂದು ಹೇಳುವನು!

“ನಮ್ಮ ಪರಿಚಯ” ದ ಬದಲಾಗಿ ಹಲವಾರು ತರ್ಜುಮೆಗಳು *prosagōgē* ಯನ್ನು “ಪ್ರವೇಶ” ಎಂದು ಅನುವಾದಿಸುತ್ತವೆ (KJV; NKJV; NIV; NRSV; ESV). ಇದು Bauerನ ನಿಘಂಟು ಈ ನಾಮಪದವನ್ನು “ಸಮೀಪವಾಗುವ ದಾರಿ” ಎಂದು ಅರ್ಥವಿವರಣೆ ಕೊಟ್ಟಿದ್ದಕ್ಕೆ ಅನುಗುಣವಾಗಿರುತ್ತದೆ.[5] ಇದು ಸರಿ ಆಗಿರುವದಾದರೆ, ಯೇಸು ದೇವರ ಬಳಿಗೆ

ಸಂಪರ್ಕದ ದಾರಿಯಾಗಿ ಚಿತ್ರಿಸಲ್ಪಟ್ಟಿದ್ದಾನೆ ("ಬಾಗಲು"; ಯೋಹಾನ 10:7, 9).

ಪೌಲನು ಹೇಳಿದ್ದೇನೆಂದರೆ ನಾವು "ಕೃಪಾಶ್ರಯದಲ್ಲಿ ನಂಬಿಕೆಯಿಂದ" ಪರಿಚಯಿಸಲ್ಪಟ್ಟಿದ್ದೇವೆ (ಅಥವಾ ಪ್ರವೇಶ ಪಡೆದಿದ್ದೇವೆ). ಕೆಲವು ಗ್ರೀಕ್ ಹಸ್ತಪ್ರತಿಗಳಲ್ಲಿ "ನಂಬಿಕೆಯಿಂದ" ಎಂಬುದಿರುವದಿಲ್ಲ, ಅದು ಹೇಳಲ್ಪಟ್ಟಿಲ್ಲ ಆದರೆ ಆ ಪದಗುಚ್ಛವನ್ನು ಅರ್ಥಮಾಡಿಕೊಳ್ಳಬಹುದು. "ಕೃಪೆ" ಎಂಬ ಪದವು (χάρις, *charis*) ಒಂದು ಅಸಹಜವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ.[6] ಸಾಮಾನ್ಯವಾಗಿ ನಾವು ಕೃಪೆಯ ವಿಷಯವಾಗಿ, ನಾವು ಕ್ರೈಸ್ತರಾಗುವಾಗ ಅದು ನಮ್ಮನ್ನು ನಮ್ಮ ಪಾಪದ ಅಪರಾಧಭಾವನೆಯಿಂದ ರಕ್ಷಿಸುವ ಸಂಗತಿಯೆಂದು ಯೋಚಿಸುತ್ತೇವೆ. ಹೇಗೂ, ಇಲ್ಲಿ "ಈಗ ನಾವು ನೆಲೆಗೊಂಡಿರುವ ಕೃಪಾಶ್ರಯ" ಎಂಬುದು ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಾಗ ಪರಿಚಯಿಸಲ್ಪಡುವ *ಕೃಪೆಯ ಸ್ಥಿತಿ*ಯನ್ನು ಸೂಚಿಸುತ್ತದೆ. NEB ಯಲ್ಲಿ, "ದೇವರ ಕೃಪೆಯ ವಲಯದಲ್ಲಿ" ಎಂದಿದ್ದರೆ, AB ಯು ಇದನ್ನು "ದೇವರ ದಯೆಯ ಸ್ಥಿತಿ" ಎಂದು ಕರೆಯುತ್ತದೆ.

ನಮಗೆ ರಕ್ಷಿಸಲ್ಪಡುವದಕ್ಕೆ ಕೃಪೆಯ ಅಗತ್ಯವಿರುವದು ಮಾತ್ರವಲ್ಲದೆ, ನಮಗೆ ರಕ್ಷಿಸಲ್ಪಟ್ಟವರಾಗಿ ಉಳಿಯುವದಕ್ಕೂ ಕೃಪೆಯ ಅಗತ್ಯವಿರುತ್ತದೆ. ನಾವು ಕ್ರೈಸ್ತರಾಗಿ ಆನಂದಿಸುವ ಯಾವದೇ ಆಶೀರ್ವಾದವನ್ನು ಸಂಪಾದಿಸಿಕೊಳ್ಳಲು ಅಥವಾ ಅರ್ಹತೆಪಡೆಯಲು ಸಾಧ್ಯವಿಲ್ಲ. ನಮಗೆ ಅನುದಿನದ ಒದಗಿಸುವಿಕೆಯು ಕೃಪೆಯಿಂದಲೇ ಆಗಿರುತ್ತದೆ. ನಾವು ಪಾಪ ಮಾಡುತ್ತಲಿರುತ್ತೇವೆ ಮತ್ತು ನಮ್ಮ ಪಾಪಗಳ ಕ್ಷಮಾಪಣೆಯು ಕೃಪೆಯಿಂದಲೇ ಆಗುತ್ತದೆ. ಅನುದಿನವೂ ಜೀವಿಸುವದಕ್ಕೆ ಬಲವು ಕೃಪೆಯಿಂದಲೇ ಸಿಕ್ಕುವದಾಗಿದೆ. John Newton ಹಾಡಿನಲ್ಲಿ ಬರೆದನು, "ಈ ಕೃಪೆ ನನ್ನನ್ನು ಇದುವರೆಗೂ ಸುರಕ್ಷಿತವಾಗಿ ನಡಿಸಿರುತ್ತದೆ, ಮತ್ತು ಕೃಪೆಯು ನನ್ನನ್ನು ಮನೆಗೆ ಸೇರಿಸುವದು."[7]

ನೀತಿನಿರ್ಣಯವು ನಮ್ಮನ್ನು ಈ ಅತಿಶಯವಾದ ಕೃಪೆಯೊಳಗೆ ಕರೆತರುವದಾಗಿದೆ, "ಅದರಲ್ಲಿ ನಾವು ನೆಲೆಗೊಂಡಿದ್ದೇವೆ" (ἵστημι, *histēmi*) ಎಂದು ಪೌಲನು ಹೇಳಿದನು. ಕೆಲವರು ಈ ಪದಗುಚ್ಛವನ್ನು "ಅದರಲ್ಲಿ ನಾವು ನಿಂತಿದ್ದೇವೆ" ಎಂದು ತಿರುಚಿ ಪೌಲನು ಹೇಳಲಿಚ್ಛಿಸಿದ್ದಕ್ಕಿಂತಲೂ ಅಧಿಕವಾದದ್ದನ್ನು ಹೇಳಲು ಪ್ರಯತ್ನಿಸುತ್ತಾರೆ. ಅವರು ಕೃಪೆಯಲ್ಲಿ ನಮ್ಮ ಸ್ಥಾನವು ಶಾಶ್ವತವಾದದ್ದು, ಅಂದರೆ "ಕೃಪೆಯಿಂದ ಬಿದ್ದು ಹೋಗುವದು ಅಸಾಧ್ಯ" ಎಂಬ ಅರ್ಥಬರುವ ರೀತಿಯಲ್ಲಿ "ನಾವು ನೆಲೆಗೊಂಡಿದ್ದೇವೆ" ಎಂಬದನ್ನು ವ್ಯಾಖ್ಯಾನಿಸುತ್ತಾರೆ. ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಕೆಲವರು "ಕೃಪಾಶ್ರಯದೊಳಗಿಂದ ಬಿದ್ದುಹೋಗಿದ್ದಾರೆ" ಎಂಬದಾಗಿ ಬರೆದಿದ್ದರೂ ಇವರು ಈ ರೀತಿಯ ವ್ಯಾಖ್ಯಾನವನ್ನು ಪ್ರತಿಪಾದಿಸುತ್ತಾರೆ (ಗಲಾತ್ಯ 5:4; ನೋಡಿರಿ 1 ಕೊರಿಂಥ 10:12).

"ನೆಲೆಗೊಂಡು" ಎಂಬುದು ಅನೇಕ ವೇಳೆ ಸ್ಥಿರವಾಗಿ ನೆಲೆಗೊಳ್ಳುವ ಅಗತ್ಯತೆಯನ್ನು ಸೂಚಿಸುತ್ತದೆ (ನೋಡಿರಿ ಎಫೆಸ 6:13, 14). ನಾವು ದೇವರ ಕೃಪೆಯನ್ನು ಸ್ವೀಕರಿಸುವ ಮುಂಚೆ ನಾವು ಸ್ವತಂತ್ರ ನೈತಿಕ ಪ್ರತಿನಿಧಿಗಳಾಗಿದ್ದೆವು, ಮತ್ತು ಆತನ ಕೃಪೆಯಿಂದ ರಕ್ಷಿಸಲ್ಪಟ್ಟ ಮೇಲೆಯೂ ಸಹ ಸ್ವತಂತ್ರ ನೈತಿಕ ಪ್ರತಿನಿಧಿಗಳಾಗಿ ಉಳಿಯುತ್ತೇವೆ. ನಾವು

ಕ್ರೈಸ್ತರಾಗುವ ಮುನ್ನ ದೇವರ ಕೃಪೆಯನ್ನು ಸ್ವೀಕರಿಸುವದಕ್ಕೆ ಅಥವಾ ತಿರಸ್ಕರಿಸುವದಕ್ಕೆ ಸಾಧ್ಯವುಳ್ಳವರಾಗಿದ್ದರೆ, ನಾವು ಕ್ರೈಸ್ತರಾದ ಮೇಲೆ ಸಹ ಅದನ್ನು ಸ್ವೀಕರಿಸಬಲ್ಲೆವು ಅಥವಾ ತಿರಸ್ಕರಿಸಬಲ್ಲೆವು. ಆದ್ದರಿಂದ ಪೌಲನು ತಿಮೊಥೆಯನಿಗೆ "ನೀನು ಕ್ರಿಸ್ತಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು" ಎಂದು ಬೇಡಿಕೊಳ್ಳುತ್ತಾನೆ (2 ತಿಮೊಥೆ 2:1). ಪೇತ್ರನು ತನ್ನ ವಾಚಕರಿಗೆ ಹೇಳಿದ್ದೇನೆಂದರೆ, "ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ" (2 ಪೇತ್ರ 3:18).

ನಾವು "ಈಗ ನಾವು ನೆಲೆಗೊಂಡಿರುವ" ಎಂಬ ಪದಗುಚ್ಛವನ್ನು ಅದು ಹೇಳುವದಕ್ಕಿಂತಲೂ ಅಧಿಕವಾದದ್ದನ್ನು ತಿಳಿಸುವ ರೀತಿಯಲ್ಲಿ ತಿರುಚಲು ಪ್ರಯತ್ನಿಸಬಾರದು, ಆದರೆ ಅದು ಕಡಿಮೆಯಾಗಿ ಹೇಳುವಂತೆ ಸಹ ನಾವು ಮಾಡಬಾರದು. ಮಾತುಗಳು ನಿಶ್ಚಿತತೆ ಮತ್ತು ದೃಢವಿಶ್ವಾಸದಿಂದ ತುಂಬಿರುತ್ತವೆ. AB ಯಲ್ಲಿ, "ನಾವು (ದೃಢವಾಗಿ ಮತ್ತು ಸುರಕ್ಷಿತವಾಗಿ) ನೆಲೆಗೊಂಡಿರುವ" ಎಂದಿರುತ್ತದೆ. ರೋಮಾ 8:31 ರಲ್ಲಿ, ಪೌಲನು "ದೇವರು ನಮ್ಮ ಕಡೆ ಇದ್ದರೆ" ಎಂದು ಒತ್ತಿ ಹೇಳಿದನು; ಆತನು ನಮ್ಮ ಪರವಾಗಿ ಪೂರ್ವಸಂಕಲ್ಪ ಹೊಂದಿದ್ದಾನೆ. ಆತನು ನಮ್ಮನ್ನು ನಾಶಗೊಳಿಸಲು ಬಯಸುವದಿಲ್ಲ ಆದರೆ ನಮ್ಮನ್ನು ವಿಮೋಚಿಸಲು ಬಯಸುತ್ತಾನೆ. ನಾವು ದೇವರಿಗೆ ನಮ್ಮ ಬೆನ್ನು ತಿರುಗಿಸಬಹುದು ಮತ್ತು, ದುಃಖಕರವಾಗಿ ಕೆಲವರು ಹಾಗೆ ಮಾಡುವರು. ಹೇಗೂ, ನಾವು ಯೇಸುವಿನಲ್ಲಿ ನಂಬಿಕೆಯಿಟ್ಟಿರುವವರೆಗೂ, ವಿಧೇಯತೆಯ ಮೂಲಕ ನಂಬಿಕೆಯನ್ನು ವ್ಯಕ್ತಗೊಳಿಸುವಷ್ಟು ಕಾಲ ನಾವು "ದೇವರ ಕೃಪೆಯ ವಲಯದಲ್ಲಿ" ನೆಲೆಗೊಂಡಿರುತ್ತೇವೆ, "ದೇವರ ದಯೆಯ ಸ್ಥಿತಿಯಲ್ಲಿ" ನೆಲೆಗೊಂಡಿರುತ್ತೇವೆ! ಅದು ನಮ್ಮ ಹೃದಯಗಳಿಗೆ ಶಾಂತಿಯನ್ನು ತರುವದಿಲ್ಲವಾದರೆ, ಬೇರೆ ಇನ್ನಾವದೂ ತರಲಾರದು.

ದೇವರ ಕೃಪೆಯ ಒಂದು ಫಲವಾಗಿ ಮತ್ತು ಅದು ತರುವ ಸಮಾಧಾನದಿಂದಾಗಿ, **ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ.** ರೋಮಾ 5:1-11 ರಲ್ಲಿ ಮೂರು ಸಾರಿ, ಪೌಲನು "ಉಲ್ಲಾಸವಾಗಿದ್ದೇವೆ" ಎಂದು ಹೇಳಿದನು (5:2, 3, 11). "ಉಲ್ಲಾಸ" ಎಂಬುದು ಇಂದು ಸಾಮಾನ್ಯ ಬಳಕೆಯಲ್ಲಿರುವ ಪದವಲ್ಲ. NIV ಯು ಈ ವಚನಗಳಲ್ಲಿ ಹೆಚ್ಚು ಸಾಮಾನ್ಯವಾದ "ಸಂತೋಷಿಸುವೆವು" ಎಂಬ ಪದವನ್ನು ಸೇರಿಸಿರುತ್ತದೆ. "ಉಲ್ಲಾಸ" ಮತ್ತು "ಸಂತೋಷಿಸು" ಎಂಬದಕ್ಕೆ ಇರುವ ಗ್ರೀಕ್ ಪದವು (καυχάομαι, *kauchaomai*) ಪತ್ರಿಕೆಯ ಆರಂಭದ ಭಾಗದಲ್ಲಿ "ಹೊಗಳಿಕೊಳ್ಳು" ಎಂದು ಅನುವಾದಿಸಲ್ಪಟ್ಟಿದೆ (2:17, 23; 3:27; 4:2), ಮತ್ತು ಕೆಲವು ತರ್ಜುಮೆಗಳು ಆ ಪದವನ್ನು ಇಲ್ಲಿ ಉಪಯೋಗಿಸಿರುತ್ತವೆ (NRSV; CJB; JB). ನಾವು ನಮ್ಮ ಸಾಧನೆಗಳ ಬಗ್ಗೆ ಬಡಾಯಿಕೊಚ್ಚಿಕೊಳ್ಳಬಾರದು, ಆದರೆ ದೇವರು ಮಾಡಿರುವ ಕಾರ್ಯದ ಬಗ್ಗೆ ಬಡಾಯಿಕೊಚ್ಚಿಕೊಳ್ಳುವದರಲ್ಲಿ ಯಾವ ತಪ್ಪಿರುವದಿಲ್ಲ (1 ಕೊರಿಂಥ 1:31). 5:11 ರಲ್ಲಿ, ಪೌಲನು ಹೇಳಿದ್ದೇನೆಂದರೆ, "ನಾವು ದೇವರಲ್ಲಿ ಹರ್ಷಗೊಳ್ಳುತ್ತೇವೆ (ಹೊಗಳಿಕೊಳ್ಳುತ್ತೇವೆ)." 15:17 ರಲ್ಲಿ, ಆತನು "ಕ್ರಿಸ್ತಯೇಸುವಿನಲ್ಲಿ" ತನಗೆ "ದೇವರ ಸೇವೆಯಲ್ಲಿ ಹೊಗಳಿಕೊಳ್ಳುವದಕ್ಕೆ ಕಾರಣವುಂಟು" ಎಂದು ಹೇಳಿದನು. ಹೇಗಿದ್ದರೂ,

ನಮ್ಮಲ್ಲಿ ಕೆಲವರಿಗೆ "ಸಂತೋಷಿಸು" ಎಂಬ ಪದಗಳಲ್ಲಿ ಹೆಚ್ಚು ಹಿತಕರವೆನಿಸುತ್ತದೆ, ಆದ್ದರಿಂದ ವ್ಯಾಖ್ಯಾನಗಳಲ್ಲಿ ಅದೇ ಪದವು ಉಪಯೋಗಿಸಲ್ಪಡುವದು.

ನಾವು "ಭರವಸದಿಂದ" (ἐλπίς, *elpis*) ಸಂತೋಷಿಸುವೆವು ಎಂದು ಪೌಲನು ಹೇಳುತ್ತಾನೆ. ಸತ್ಯವೇಧಾರಿತ ಭರವಸವು ಕೇವಲ ಒಂದು ಆಶಾಭಾವನೆ ಮಾತ್ರವಾಗಿರುವದಿಲ್ಲ, ಆದರೆ ಬಯಕೆಯ ಜೊತೆಗೆ ಎದುರು ನೋಡುವಿಕೆ ಆಗಿರುತ್ತದೆ. William Barclay ಯು ನೀಡಿದ ವಿವರಣೆ ಇಲ್ಲಿದೆ: "ಕ್ರೈಸ್ತ ನಿರೀಕ್ಷೆಯು ದೇವರ ವಾಗ್ದಾನಗಳು ಸತ್ಯವಾಗಬಹುದು ಎಂಬ ನಡುಗುವ, ಸಂಕೋಚದ ನಿರೀಕ್ಷೆಯಾಗಿರುವದಿಲ್ಲ. ಅವು ಸತ್ಯವಲ್ಲದೆ ಬೇರೆ ಇನ್ನೇನೂ ಆಗಿರಲಾರವು ಎಂದು ದೃಢವಾಗಿ ಎದುರುನೋಡುವದೇ ಆಗಿದೆ."[8] ಇಬ್ರಿಯ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ "ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ (soul) ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ" (ಇಬ್ರಿಯ 6:19).

ಪೌಲನು ತನ್ನ ವಿಚಾರವನ್ನು ಮುಂದುವರೆಸುತ್ತಾ ಹೇಳಿದ್ದೇನೆಂದರೆ, ನಮ್ಮ ಭರವಸವು "ದೇವರ ಮಹಿಮೆಯನ್ನು [δόξα, *doxa*] ಹೊಂದುವೆವು" ಎಂಬದರಲ್ಲಿ. ಇದು ಒಂದು ದಿನ ದೇವರ ಮಹಿಮೆಯನ್ನು ನೋಡುತ್ತೇವೆಂಬ ನಮ್ಮ ನಿರೀಕ್ಷೆಯನ್ನು ಸೂಚಿಸಬಹುದಾಗಿದೆ (ನೋಡಿರಿ ಮಾರ್ಕ 13:26; ತೀತನು 2:13). ಅದು ಪರಲೋಕದಲ್ಲಿ ಆತನ ದೈವಿಕ ಮಹಿಮೆಯಲ್ಲಿ ಪಾಲುಗಾರರಾಗುವದನ್ನು ಸೂಚಿಸಬಹುದಾಗಿದೆ (ನೋಡಿರಿ RSV; REB; CJB). ರೋಮಾ 8:17 ರಲ್ಲಿ, ಪೌಲನು ಹೇಳಿದ್ದೇನೆಂದರೆ, "ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" (ನೋಡಿರಿ 8:18; 9:23). ಇನ್ನೊಂದೆಡೆಯಲ್ಲಿ, "ದೇವರ ಮಹಿಮೆಯು" ನಾವು ಇಲ್ಲಿ ಭೂಮಿಯ ಮೇಲೆ ದೇವರ ಮಹಿಮೆಯನ್ನು ಪ್ರತಿಬಿಂಭಿಸುವ ನಿರೀಕ್ಷೆಯನ್ನು ತಿಳಿಸಬಹುದಾಗಿದೆ. ಮನುಷ್ಯರು "ದೇವರ ಪ್ರತಿರೂಪವೂ ಪ್ರಭಾವವೂ" ಆಗಿ ಉಂಟುಮಾಡಲ್ಪಟ್ಟಿದ್ದಾರೆ (1 ಕೊರಿಂಥ 11:7; ನೋಡಿರಿ ಆದಿಕಾಂಡ 1:26, 27; 9:6; ಯಾಕೋಬ 3:9), ಆದರೆ ಮಾನವರು "ಮುರಿದ ಪ್ರತಿರೂಪ" ವಾಗಿ ಮಾರ್ಪಟ್ಟರು. ಪಾಪಿಗಳಾದ ಮನುಷ್ಯರು "ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು" (1:23). ಹಾಗಿದ್ದರೂ, ಕ್ರಿಸ್ತನ ಮುಖಾಂತರವಾಗಿ, ನಾವು "ನಮ್ಮ ವಿಷಯವಾಗಿ ದೇವರು ಮನಸ್ಸಿನಲ್ಲಿ ಅಂದುಕೊಂಡಂತೆಯೇ" ಆಗಬಲ್ಲೆವು (LB). ಮೇಲಿನವುಗಳನ್ನೆಲ್ಲಾ "ದೇವರ ಮಹಿಮೆಯು" ಆಕ್ರಮಿಸಿಕೊಳ್ಳಲು ಸಾಧ್ಯವಿರುತ್ತದೆ.

**ವಚನ 3.** ಪೌಲನ ವಾಚಕರು "ದೇವರೊಂದಿಗೆ ಉಂಟಾದ ಸಮಾಧಾನ" (5:1) ಹೊಂದುವ ಕುರಿತ ಆತನ ಮಾತುಗಳನ್ನು ಆಲೋಚಿಸಿದಾಗ, ಬಹುಶಃ ಅವರು ಹೀಗೆ ಯೋಚಿಸಿರಬಹುದಾಗಿದೆ, "ಓ, ಎಲ್ಲವೂ ಉತ್ತಮವಾಗಿ ಸಾಗುತ್ತಿರುವಾಗ ಖಂಡಿತವಾಗಿಯೂ ನಮಗೆ ಸಮಾಧಾನ, ಸಂತೋಷ ಮತ್ತು ಆನಂದ ಹಾಗೂ ನಿರೀಕ್ಷೆಗಳಿರಬಲ್ಲವು. ಆದರೆ ಕೆಟ್ಟ ದಿನಗಳು ಬಂದಾಗ ಏನು ಮಾಡುವದು?" ಕೆಟ್ಟ ದಿನಗಳು ಬರುವದು ಸಹಜವೆಂಬುದು ಪೌಲನಿಗೆ ಗೊತ್ತಿತ್ತು. ಆತನು ಸ್ವತಃ ಅಂಥ ದಿನಗಳನ್ನು

ಅನುಭವಿಸಿದ್ದನು. ಆತನು ಹೊಸ ವಿಶ್ವಾಸಿಗಳಿಗೆ ಹೇಳಿದ್ದೇನೆಂದರೆ, "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕು" (ಅಪೊಸ್ತಲರ ಕೃತ್ಯಗಳು 14:22). ಯೇಸು ತನ್ನ ಶಿಷ್ಯರಿಗೆ ಹೇಳಿದನು, "ಲೋಕದಲ್ಲಿ ನಿಮಗೆ ಸಂಕಟ ಉಂಟು" (ಯೋಹಾನ 16:33). ರೋಮಾಪುರದಲ್ಲಿರುವ ಕ್ರೈಸ್ತರು ಇನ್ನೂ ಸಂಕಟಗಳನ್ನು ಎದುರಿಸಿರಲಿಲ್ಲವಾದ್ದರಿಂದ, ಮುಂದಿನ ದಿನಗಳಲ್ಲಿ ಎದುರಿಸುವದು ಖಚಿತವಾಗಿತ್ತು (ನೋಡಿರಿ 2 ತಿಮೊಥೆ 3:12).

ವಚನ 3 ಹೀಗೆ ಆರಂಭಗೊಳ್ಳುತ್ತದೆ, **ಇದು ಮಾತ್ರವಲ್ಲದೆ** (ನಾವು ಒಳ್ಳೇ ದಿನಗಳಲ್ಲಿ ಸಂತೋಷಿಸುವುದು ಮಾತ್ರವಲ್ಲದೆ), **ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ** (ಸಂತೋಷವಾಗಿದ್ದೇವೆ). ಈ ಅನುವಾದಿತ ಗ್ರೀಕ್ ಪದ "ಉಪದ್ರವಗಳು" ಎಂಬುದು θλῖψις (*thlipsis*) ಎಂಬ ಬಹುವಚನದಿಂದ ಬಂದದ್ದಾಗಿದ್ದು ಅದರ ಅಕ್ಷರಶಃ ಅರ್ಥವು "ಒತ್ತುವಿಕೆ, ಒತ್ತಡ" ಎಂದಾಗಿರುತ್ತದೆ.[9] ಇದು ಒಲೀವ್ ಎಣ್ಣೆಯನ್ನು ತುಳಿಯುವ ಅಥವಾ ದ್ರಾಕ್ಷೆಗಳಿಂದ ರಸವನ್ನು ತೆಗೆಯುವದನ್ನು ಬಣ್ಣಿಸಲು ಉಪಯೋಗಿಸುತ್ತಿದ್ದ ಪದವಾಗಿದೆ. *Thlipsis* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ "ಯಾತನೆಯನ್ನುಂಟು ಮಾಡುವ ಸಂಕಷ್ಟ" ದ ಅರ್ಥ ನೀಡುವ ರೂಪಕವಾಗಿ ಉಪಯೋಗಿಸಲ್ಪಟ್ಟಿದೆ.[10] "ಉಪದ್ರವಗಳು" ಎಂಬದರ ಬದಲಾಗಿ AB ಯು "ಒತ್ತಡ ಮತ್ತು ಯಾತನೆ ಮತ್ತು ಸಂಕಷ್ಟಗಳು" ಎಂದು ಅನುವಾದಿಸಿರುತ್ತದೆ. ಒಬ್ಬ ಕ್ರೈಸ್ತನ ಮೇಲೆ ಅನೇಕ ಸಂಗತಿಗಳು ಒತ್ತಡ ಹಾಕಬಲ್ಲವು, ಉದಾಹರಣೆಗೆ: ಏಕಾಂಗಿತನ, ಅಪಖ್ಯಾತಿ, ಕಷ್ಟ, ಬಡತನ, ಮತ್ತು ಹಿಂಸೆ.[11] ಲೋಕದ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ, "ಉಪದ್ರವ" ಎಂಬ ಪದದಲ್ಲಿ ಮರಣ ಬೆದರಿಕೆ ಸಹ ಸೇರ್ಪಡೆಗೊಂಡಿ ರುತ್ತದೆ.

ಪೌಲನು ಘಟನಾವಳಿಗಳನ್ನು ಎಳೆಎಳೆಯಾಗಿ ವಿವರಿಸುವ ಮೂಲಕ ಉಪದ್ರವಗಳಲ್ಲಿ ನಾವು ಹೇಗೆ ಸಂತೋಷಿಸಬಹುದೆಂಬದನ್ನು ತಿಳಿಸುತ್ತಾನೆ. ಆತನು ಹೇಳಿದನು, **ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ.** "ತಾಳ್ಮೆ" ಎಂಬದು ὑπομονή (*hupomonē*) ಎಂಬದರಿಂದ ಬಂದದ್ದಾಗಿದ್ದು ಅದೊಂದು ಸಂಯುಕ್ತ ಪದವಾಗಿದೆ, ಅದರಲ್ಲಿ ὑπό (*hupo*, "ಕೆಳಗೆ") ಮತ್ತು μένω (*menō*, "ಉಳಿದುಕೊ") ಎಂಬ ಪದಗಳು ಸೇರಿರುತ್ತವೆ. ಈ ಪದವು ಕಠಿಣ ಪರಿಸ್ಥಿತಿಗಳ "ಕೆಳಗೆ ಉಳಿದುಕೊಳ್ಳುವ" ವಿಚಾರವನ್ನು ವ್ಯಕ್ತಪಡಿಸುತ್ತದೆ. ಅದು ಏನೇ ಸಂಭವಿಸಿದರೂ ನಿರಂತರ ಮತ್ತು ದೃಢವಾಗಿ ನಿಲ್ಲುವದನ್ನು, ಮುನ್ನಡೆಯುತ್ತಲೇ ಇರುವದನ್ನು ಸೂಚಿಸುತ್ತದೆ. Barclay ಈ ಪದವನ್ನು "ಸ್ಥೈರ್ಯ" ಎಂದು ಅನುವಾದಿಸಿರುತ್ತಾನೆ ಮತ್ತು ಆತನು ಹೇಳಿದ್ದೇನೆಂದರೆ, "ಇದು ಸುಮ್ಮನೆ ಸಹಿಸಿಕೊಳ್ಳುವ ಮನೋಭಾವವಲ್ಲ ಆದರೆ ಸಕ್ರಿಯವಾಗಿ ಜೀವನದ ಪರೀಕ್ಷೋಧನೆಗಳನ್ನು ಮತ್ತು ಉಪದ್ರವಗಳನ್ನು ಜಯಿಸುವದಾಗಿದೆ."[12]

**ವಚನ 4.** ಮುಂದೆ, ಪೌಲನು ಹೇಳಿದ್ದೇನೆಂದರೆ **ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ.** "ಅನುಭವಸಿದ್ಧಿ" ಎಂಬುದು δοκιμή (*dokimē*) ಎಂಬದರಿಂದ ಬಂದದ್ದಾಗಿದ್ದು, "ಹೊಸ ಒಡಂಬಡಿಕೆಯಲ್ಲಿ ಇದು ಅಪ್ಪಟ ಪೌಲನು ಬಳಸಿದ ಪದವಾಗಿದೆ, ಅದು δοκιμάζω (*dokimazō*), 'ಪರಿಶೋಧಿಸು' ಎಂಬದರೊಂದಿಗೆ ಜೋಡಿಸುತ್ತದೆ, ಮತ್ತು

ಇದು ಪರೀಶೋಧನೆಗಳನ್ನು ಎದುರಿಸಿ ನಿಂತ ಗುಣವನ್ನು ಹೊಂದಿರುವದಾಗಿದೆ."[13] ಒಬ್ಬ ಕ್ರೈಸ್ತನು ನಿಜವಾಗಿಯೂ ಗಂಭೀರ ಸಮಸ್ಯೆಯನ್ನು ಎದುರಿಸಿಲ್ಲವಾದ್ದರಿಂದ ಆತನು ಪರಿಶೋಧಿಸಲ್ಪಡದ ಕ್ರೈಸ್ತನಾಗಿರುತ್ತಾನೆ. ಒಬ್ಬನು ಅವನ (ಅಥವಾ ಅವಳ) ಪರೀಶೋಧನೆಗಳನ್ನು ದೇವರ ಸಹಾಯದಿಂದ ಯಶಸ್ವಿಯಾಗಿ ಎದುರಿಸಿ ನಿಂತವನೇ "ಪರಿಶೋಧಿತ" ಮತ್ತು "ನಿರೂಪಿಸಲ್ಪಟ್ಟ" ಕ್ರೈಸ್ತನು. ಇಲ್ಲಿ ವ್ಯತ್ಯಾಸವು ಹೊಸ ನೇಮಕಾತಿ ಅಭ್ಯರ್ಥಿ ಮತ್ತು ಒಬ್ಬ ಯುದ್ಧ-ಪರೀಕ್ಷೆಗೊಂಡು ಅನುಭವಶಾಲಿಯಾದ ಅಭ್ಯರ್ಥಿಗಳ ನಡುವಿನದ್ದಾಗಿದೆ. ಕ್ರಿಸ್ತನಲ್ಲಿ ಒಬ್ಬ "ಕೂಸಾಗಿರುವದು" ಮತ್ತು "ಪ್ರಾಯಸ್ಥ" ದೇವರ ಮಕ್ಕಳ ನಡುವಿನ ವ್ಯತ್ಯಾಸ ಇದಾಗಿರುತ್ತದೆ (ಇಬ್ರಿಯ 5:13, 14). ಒಬ್ಬ "ಅನುಭವಸಿದ್ಧಿ" ಯುಳ್ಳ ಕ್ರೈಸ್ತನೇ ವಿಶ್ವಾಸಾರ್ಹನು ಮತ್ತು ಅವಲಂಬನೆಗೆ ಯೋಗ್ಯನಾದವನು. ಸಹೋದರರು ಆ ವ್ಯಕ್ತಿಯ ಮೇಲೆ ಅವಲಂಭಿಸುವದಕ್ಕೆ ಹೆದರುವದಿಲ್ಲ ಯಾಕೆಂದರೆ ಆತನು ಗತಕಾಲದಲ್ಲಿ ತನ್ನನ್ನು ನಂಬಿಗಸ್ತನೆಂದು ಸಾಭಿತುಪಡಿಸಿಕೊಂಡವನು.

ಪೌಲನು ತನ್ನ ಅನುಕ್ರಮಣಿಕೆಯನ್ನು **ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆ** ಎಂದು ಹೇಳಿ ಸಂಪೂರ್ಣಗೊಳಿಸುತ್ತಾನೆ. ನಾವು ಕರ್ತನಲ್ಲಿ ನಂಬಿಕೆಯುಳ್ಳವರಾಗಿ ಉಪದ್ರವಗಳನ್ನು ಎದುರುಗೊಳ್ಳುವಾಗ, ನಾವು ತಾಳ್ಮೆಯಿಂದ ಸಹಿಸಿಕೊಳ್ಳಲು ಶಕ್ತರಾಗುತ್ತೇವೆ. ತಾಳ್ಮೆಯಿಂದ, ನಾವು "ಪರೀಕ್ಷೆಯನ್ನು ಎದುರಿಸುತ್ತೇವೆ" ಮತ್ತು ಆತ್ಮೀಕವಾಗಿ ಪಕ್ವಗೊಳ್ಳುತ್ತೇವೆ. ಇದೆಲ್ಲವೂ ನಮ್ಮಲ್ಲಿ ದೇವರ ವಾಗ್ದಾನಗಳು ಖಚಿತ (ಹೌದು) ಎಂಬ ಮನವರಿಕೆಯನ್ನು ಉಂಟು ಮಾಡುತ್ತದೆ (ನೋಡಿರಿ 2 ಕೊರಿಂಥ 1:20). ದೇವರು ನಮ್ಮನ್ನು ಎಂದಿಗೂ ಕೈಬಿಡುವದಿಲ್ಲ ಮತ್ತು ತೊರೆಯುವದಿಲ್ಲ ಎಂದು ವಾಗ್ದಾನ ಮಾಡಿದ್ದಾನೆ (ಇಬ್ರಿಯ 13:5), ಮತ್ತು ಆತನು ಕೈಬಿಟ್ಟಿಲ್ಲ. ನಮಗೆ ಸಹಿಸಿಕೊಳ್ಳುವದಕ್ಕೆ ಆಗದಷ್ಟರ ಮಟ್ಟಿಗೆ ಆತನು ನಮ್ಮನ್ನು ಶೋಧನೆಗೆ ಒಳಪಡಿಸುವದಿಲ್ಲ ಎಂದು ದೇವರು ವಾಗ್ದಾನ ಮಾಡಿದ್ದಾನೆ (1 ಕೊರಿಂಥ 10:13), ಮತ್ತು ಆತನು ಬಿಡುವದಿಲ್ಲ. ಆತನು ನಮ್ಮ ಜೀವಿತಗಳಲ್ಲಿ ತೊಡಗಿಸಿಕೊಂಡು ಎಲ್ಲವನ್ನೂ ನಮ್ಮ ಹಿತಕ್ಕಾಗಿ ಕಾರ್ಯಸಾಧಿಸು ವೆನೆಂದು ಆತನು ವಾಗ್ದಾನ ಮಾಡಿದನು (ರೋಮಾ 8:28), ಮತ್ತು ಆತನ ತನ್ನ ಮಾತಿಗೆ ಬದ್ಧನಾಗಿದ್ದಾನೆ. ಹೀಗೆ ನಮ್ಮ ನಿರೀಕ್ಷೆ (ಭರವಸವು) ದೇವರಲ್ಲಿದೆ ಮತ್ತು ಆತನ ವಾಗ್ದಾನಗಳು ದಿನೇ ದಿನೇ ಬೆಳೆಯುತ್ತವೆ.

ಪೌಲನ ಅನುಕ್ರಮಣಿಕೆಯು ಭರವಸದಿಂದ ಪರಿಚಯಗೊಂಡಿತು (5:2), ಮತ್ತು ಅದು ಭರವಸದೊಂದಿಗೆ (ನಿರೀಕ್ಷಣ) ಮುಕ್ತಾಯಗೊಳ್ಳುತ್ತದೆ (5:4). ನಾವು ಈ ಪದ್ಧತಿಯನ್ನು "ಒಂದಕ್ಕೊಂದು ಜೋಡಣೆಯಾಗಿರುವ ಪ್ರಯೋಜನಗಳ ವೃತ್ತ" ಎಂದು ಆಲೋಚಿಸಬಹುದು.[14] ನಮಗೆ ಉಪದ್ರವಗಳು ಬಂದಾಗ ನಿರೀಕ್ಷೆಯು ಸಹಾಯ ಮಾಡುತ್ತದೆ; ಉಪದ್ರವಗಳು ತಾಳ್ಮೆಯನ್ನು ತರುತ್ತದೆ; ತಾಳ್ಮೆಯು ಅನುಭವಸಿದ್ಧಿಯನ್ನು ಉಂಟುಮಾಡುತ್ತದೆ; ಮತ್ತು ಅನುಭವಸಿದ್ಧಿಯು ನಿರೀಕ್ಷೆಯನ್ನು ಉಂಟುಮಾಡುತ್ತದೆ.

**ವಚನ 5.** ಪೌಲನು ಇನ್ನೂ ಹೇಳಿದ್ದೇನೆಂದರೆ, **ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ**. "ಭಂಗಪಡಿಸುವದಿಲ್ಲ" ಎಂಬುದು καταισχύνω (*kataischunō*) ಎಂಬ ಪದದಿಂದ ಬಂದದ್ದು, ಇದರ ಅರ್ಥವು "ಅವಮಾನಗೊಳ್ಳ ವಂತೆ ಮಾಡು"

(ನೋಡಿರಿ KJV). ಅದೊಂದು ಸಂಯುಕ್ತ ಪದವಾಗಿದ್ದು ಅದರಲ್ಲಿ αἰσχύνω (*aischunō*, "ನಾಚಿಕೆಪಡು") ಎಂಬದರ ಜೊತೆಗೆ ಬಲಗೊಳಿಸುವ κατά (*kata*) ಎಂಬ ಪದವಿರುತ್ತದೆ. ಈ ಪದವು 1:16 ರಲ್ಲಿನ "ನಾಚಿಕೊಳ್ಳು" ಎಂಬದಕ್ಕೆ ಸಂಬಂಧಿಸಿರುತ್ತದೆ.

ನಮ್ಮ ನಿರೀಕ್ಷೆಯು ಎಂದಿಗೂ ನಮ್ಮನ್ನು ದಿಗ್ಭ್ರಾಂತಿಗೆ ಗುರಿಮಾಡುವದಿಲ್ಲ; ಅದು ನಮ್ಮನ್ನು ತಲೆತಗ್ಗಿಸುವಂತೆ ಮಾಡುವದಿಲ್ಲ. ಏನನ್ನೋ ಪಡೆಯುತ್ತೇವೆಂದು ನಿರೀಕ್ಷಿಸುತ್ತಿದ್ದೇವೆ ಮತ್ತು ಎದುರುನೋಡಿ ಕಾಯುತ್ತಿದ್ದೇವೆ ಎಂದು ಹೇಳುತ್ತೇವೆ ಮತ್ತು ನಂತರದಲ್ಲಿ ಅದನ್ನು ಹೊಂದದೆ ಹೋಗುತ್ತೇವೆ. ಆದರೆ ರೋಮಾ 5 ರಲ್ಲಿ ನಿರೀಕ್ಷೆಯು ಆ ರೀತಿಯದ್ದಾಗಿರುವದಿಲ್ಲ. ದೇವರು ವಾಗ್ದಾನ ಮಾಡಿದ್ದು ನೆರವೇರುವದು ಖಚಿತ. ಕರ್ತನಲ್ಲಿರುವ ನಮ್ಮ ನಿರೀಕ್ಷೆಯು ನಮ್ಮನ್ನು ನಿರಾಶೆಗೊಳಿಸುವದಿಲ್ಲ ಯಾಕೆಂದರೆ ಕರ್ತನು ನಮ್ಮನ್ನು ನಿರಾಶೆಗೊಳಿಸಲಾರನು.

ಕ್ರಿಸ್ತನಲ್ಲಿ ನಮ್ಮ ನಿರೀಕ್ಷೆಯು "ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ" ಯಾಕೆಂದರೆ **ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ.** "ದೇವರ ಪ್ರೀತಿ" ಎಂಬುದು ದೇವರಿಗಾಗಿರುವ ಪ್ರೀತಿಯನ್ನು ಸೂಚಿಸಬಹುದಾಗಿದೆ, ಆದರೆ ಸನ್ನಿವೇಶವು ತೋರ್ಪಡಿಸುವ ಪ್ರಕಾರ ಪೌಲನು ಇಲ್ಲಿ ನಮ್ಮ ಮೇಲಿರುವ ದೇವರ ಪ್ರೀತಿಯ ಬಗ್ಗೆ ಮಾತಾಡುತ್ತಿದ್ದಾನೆ. "ದೇವರಿಗೆ ಪ್ರಿಯರು" ಎಂಬ ಪದಗುಚ್ಛವು ಆರಂಭಿಕ ವಂದನೆಗಳಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ಪೌಲನ ಕ್ರೈಸ್ತ ವಾಚಕರನ್ನುದ್ದೇಶಿಸಿ ಹೇಳಲ್ಪಟ್ಟಿರುತ್ತದೆ (1:7). ಹೇಗೂ, ಇದೇ ಮೊದಲ ಬಾರಿಗೆ ಪತ್ರದ ಮುಖ್ಯಭಾಗದಲ್ಲಿ ದೇವರ ಪ್ರಿತಿಯು ಉಲ್ಲೇಖಿಸಲ್ಪಟ್ಟಿದೆ. ರೋಮಾಪುರ ಪತ್ರಿಕೆಯು ದೇವರು ನಮಗಾಗಿ ಕೃಪೆಯಿಂದ ಮಾಡಿದ್ದೆಲ್ಲದರ ಬಗ್ಗೆ ಮಾತಾಡುತ್ತದೆ, ಆದರೆ ದೇವರು ಅದನ್ನು *ಏಕೆ* ಮಾಡಿದನೆಂಬದನ್ನು ಈಗ ಬಹಿರಂಗಗೊಳಿಸುತ್ತದೆ: ಯಾಕೆಂದರೆ ಆತನು ನಮ್ಮನ್ನು *ಪ್ರೀತಿಸುತ್ತಾನೆ.*

"ಪ್ರೀತಿ" ಎಂಬದಕ್ಕಿರುವ ಪದವು ἀγάπη (*agapē*): ಶರತ್ತುರಹಿತ ಪ್ರೀತಿ, ಆ ಪ್ರೀತಿಗೆ ಪಾತ್ರರಾಗಿರುವವರಿಗೆ ಅತ್ಯುತ್ತಮವಾದದ್ದನ್ನೇ ಕೋರುವಂಥ ಪ್ರೀತಿ. ಈ ಪ್ರೀತಿಯು "ನಮ್ಮ ಹೃದಯಗಳಲ್ಲಿ ಸುರಿಸಲ್ಪಟ್ಟಿದೆ." "ಸುರಿಸಲ್ಪಟ್ಟಿದೆ" ಎಂಬದು ಗ್ರೀಕ್‌ನ ἐκχέω (*ekcheō*) ಎಂಬ ಪದದ ಅಕ್ಷರಶಃ ಅನುವಾದವಾಗಿದೆ, ಅದು ἐκ (*ek*, "ಹೊರಗೆ") ಎಂಬದರ ಜೊತೆಗೆ χέω (*cheō*, "ಸುರಿಸು") ಎಂಬ ಪದವನ್ನೊಳಗೊಂಡಿರುತ್ತದೆ. ಇದೇ ಪದವು ಅಪೊಸ್ತಲರ ಕೃತ್ಯಗಳು 2:33 ರಲ್ಲಿ ಉಪಯೋಗಿಸಲ್ಪಟ್ಟಿದೆ, ಅಲ್ಲಿ ಅದು ಅಪೊಸ್ತಲರಿಗೆ ಕೊಡಲ್ಪಟ್ಟಿರುವ ಅದ್ಭುತವಾದ ಸಾಮರ್ಥ್ಯಗಳನ್ನು ಸೂಚಿಸುತ್ತದೆ. ಇಲ್ಲಿ, ಅದು ಪ್ರತಿ ಕ್ರೈಸ್ತನ ಮೇಲೆ ಸುರಿಸಲ್ಪಟ್ಟಿರುವ ದೇವರ ಪ್ರೀತಿಯನ್ನು ಸೂಚಿಸುತ್ತದೆ. "ಸುರಿಸಲ್ಪಟ್ಟಿದೆ" ಎಂಬದು ದೇವರು ತನ್ನ ಪ್ರೀತಿಯ ವಿಷಯದಲ್ಲಿ ಜಿಪುಣನಲ್ಲ ಎಂಬದನ್ನು ಒತ್ತಿ ಹೇಳುತ್ತದೆ. James D. G. Dunn ಪ್ರಕಾರ, ಪೌಲನು "ಒಣಗಿದ ಗ್ರಾಮದ ಭೂಮಿಯಲ್ಲಿ ಮೇಘಸ್ಫೋಟಗೊಳ್ಳುವ ಒಂದು ಉಜ್ವಲ ರೂಪಕಯೋಕ್ತಿಯನ್ನು ಉಪಯೋಗಿಸುತ್ತಾನೆ."[15]

ಪೌಲನು ಹೇಳಿದ್ದೇನೆಂದರೆ ಈ ಪ್ರೀತಿಯು **ನಮಗೆ ಕೊಟ್ಟಿರುವ ಪವಿತ್ರಾತ್ಮನ**

**ಮೂಲಕವಾಗಿ** "ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸಲ್ಪಟ್ಟಿದೆ." ಒಂದು ಹರಿಯುವಿಕೆಯ ಬರದಲ್ಲಿ ಪವಿತ್ರಾತ್ಮನು ಈ ಪತ್ರಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ (1:4; 2:29), ಆದರೆ ಕ್ರೈಸ್ತರ ಜೀವಿತದಲ್ಲಿ ಪವಿತ್ರಾತ್ಮನ ಕ್ರಿಯೆಯ ಕುರಿತ ಪ್ರಥಮ ಉಲ್ಲೇಖ ಇದಾಗಿರುತ್ತದೆ.[16] ಒಬ್ಬನು ನೀತಿವಂತನೆಂದು ನಿರ್ಣಯಿಸಲ್ಪಟ್ಟಾಗ, ಆತನು ಕ್ರಿಸ್ತನವನಾಗಿ ಮಾರ್ಪಟ್ಟಾಗ, ಆತ್ಮನು ಅವನನ್ನು ಪ್ರವೇಶಿಸುತ್ತಾನೆ. "ಪವಿತ್ರಾತ್ಮನು ಎಲ್ಲಾ ವಿಶ್ವಾಸಿಗಳಿಗೆ ಕೊಡಲ್ಪಟ್ಟಿದ್ದಾನೆ-ಅವರು ಪುನರ್ಜನ್ಮ ಹೊಂದುವ ಸಂದರ್ಭದಲ್ಲಿ,"[17] "ಅವರು ಕ್ರಿಸ್ತನೊಳಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆಯಲ್ಲಿ ಆತ್ಮನು ಕೊಡಲ್ಪಡುತ್ತಾನೆ (ಅಪೊಸ್ತಲರ ಕೃತ್ಯಗಳು 2:38)."[18]

ಪವಿತ್ರಾತ್ಮನ ಕೆಲಸದ ಬಗ್ಗೆ ರೋಮಾ 8ನೇ ಅಧ್ಯಾಯದಲ್ಲಿ ಚರ್ಚಿಸಲಾಗುವದು. ಇಲ್ಲಿ, ಆತ್ಮನ ಕೆಲಸದ ಒಂದು ಆಯಾಮವು ಉಲ್ಲೇಖಿಸಲ್ಪಟ್ಟಿದೆ: ದೇವರ ಪ್ರೀತಿಯು "ನಮ್ಮ ಹೃಯದಗಳೊಳಗೆ ಪವಿತ್ರಾತ್ಮನ ಮೂಲಕವಾಗಿ ಸುರಿಸಲ್ಪಟ್ಟಿದೆ." ಆತ್ಮನು ಇದನ್ನು ಹೇಗೆ ಮಾಡುತ್ತಾನೆಂಬ ಬಗ್ಗೆ ಮೊಂಡುವಾದ ಮಾಡಲಾಗದು. ಆತ್ಮನ ಅದ್ಭುತಕರವಲ್ಲದ ಕ್ರಿಯೆಯ ವಿಷಯದಲ್ಲಿ ನೋಡುವದಾದರೆ, ಪವಿತ್ರಾತ್ಮನು ಕಾರ್ಯಮಾಡುವ ಮುಖ್ಯ ವಿಧಾನವೆಂದರೆ, ಆತನ ಪ್ರೇರಿತ ವಾಕ್ಯದ ಮೂಲಕವಾಗಿಯೇ (ಎಫೆಸ 6:17; 2 ಪೇತ್ರ 1:21). ಆತನು ಕ್ರೈಸ್ತನೊಳಗೆ ವಾಸಿಸುತ್ತಾನೆಂಬದನ್ನು ಅನೇಕ ವಾಕ್ಯಗಳು ಒತ್ತಿ ಹೇಳುತ್ತವೆ (ಉದಾಹರಣೆಗೆ, ನೋಡಿರಿ 8:9-11). ಅಷ್ಟು ಮಾತ್ರವಲ್ಲದೆ, ಪೌಲನು ರೋಮಾ 8:26-28 ರಲ್ಲಿ ಪವಿತ್ರಾತ್ಮನ ಕಾರ್ಯವನ್ನು ದೇವರ ಒದಗಿಸುವಿಕೆಯೊಂದಿಗೆ ನಿಕಟವಾಗಿ ಜೋಡಿಸಿದ್ದರಿಂದ, ಆತ್ಮನು ಒದಗಿಸುವವನಾಗಿ ಕೆಲಸ ಮಾಡುತ್ತಾನೆಂದು ಸಹ ನಾವು ಹೇಳಬಹುದು. ಆತನು ನಮ್ಮ ಜೀವಿತಗಳನ್ನು ಆಶೀರ್ವದಿಸುವದಕ್ಕೋಸ್ಕರ ಘಟನೆಗಳನ್ನು ಅನುಶಾಸನಗೊಳಿಸುತ್ತಾನೆ.

ಹಾಗಾದರೆ, ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಸುರಿಸಲ್ಪಟ್ಟಿದೆ ಎಂದು ಪೌಲನು ಹೇಳಿದಾಗ. ಆತನ ತಾತ್ಪರ್ಯವೇನಾಗಿತ್ತು? ಆತನು ನಮಗೆ ದೇವರು ಪವಿತ್ರಾತ್ಮನನ್ನು ಅನುಗ್ರಹಿಸಿರುವದು ಆತನ ಹೇರಳವಾದ ಪ್ರೀತಿಗೆ ಸಾಕ್ಷಿಯಾಗಿದೆ ಎಂಬದನ್ನು ಸೂಚಿಸಿ ಹೇಳಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 2:38; 5:32). ಪೌಲನ ಪ್ರಕಾರವಾಗಿ, ಪವಿತ್ರಾತ್ಮನ ವರವು ನಾವು ದೇವರ ಪುತ್ರರೆಂಬದಕ್ಕೆ ಸಾಕ್ಷಿಯಾಗಿದೆ (ಗಲಾತ್ಯ 4:6). "ಆತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ" (ಎಫೆಸ 1:14)-ನಮ್ಮ ಬಾಧ್ಯತೆಗೆ ಒಂದು "ಮುಂಗಡ ಹಣ" ಮತ್ತು ಆ ಬಾಧ್ಯತೆಗೆ "ಖಾತರಿ" ಆಗಿ ಕೊಡಲ್ಪಟ್ಟಿರುತ್ತಾನೆ. ಆದ್ದರಿಂದ 5ನೇ ವಚನವು ಈ ರೀತಿಯಲ್ಲಿ ಹೇಳಲ್ಪಟ್ಟರೆ ಸೂಕ್ತವೇನಿಸುತ್ತದೆ, "ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ [ನಮಗಿರುವ ಪವಿತ್ರಾತ್ಮನ ಮಹತ್ವದ ಪ್ರಜ್ಞೆಯ ಮೂಲಕ] ಸುರಿಸಲ್ಪಟ್ಟಿದೆ." ಈ ವಿವರಣೆಯು ಪೌಲನು ಒತ್ತು ನೀಡುವ "ನಿರೀಕ್ಷೆ" ಗೆ ಅನುಗುಣವಾಗಿರುತ್ತದೆ.

ಇನ್ನೊಂದು ಸಾಧ್ಯತೆಯೇನೆಂದರೆ, 5ನೇ ವಚನವನ್ನು ಮುಂದಿನ ವಚನಗಳ ಬೆಳಕಿನಲ್ಲಿ ಅರ್ಥಮಾಡಿಕೊಳ್ಳತಕ್ಕದ್ದಾಗಿದೆ. ದೇವರ ಪ್ರೀತಿಯ ಉತ್ಕೃಷ್ಟವಾದ

ಉದಾಹರಣೆಯೆಂದರೆ ಆತನು ತನ್ನ ಮಗನನ್ನು ತ್ಯಾಗ ಮಾಡಿದ್ದು (5:6-8). ನಾವು ಇದರ ಬಗ್ಗೆ ಆತ್ಮನಿಂದ ಪ್ರೇರಿಸಲ್ಪಟ್ಟ ವಾಕ್ಯಗಳಿಂದ ತಿಳಿದುಕೊಂಡಿದ್ದೇವೆ. ಆದ್ದರಿಂದ ಪೌಲನು ಹೇಳುತ್ತಿರುವದೇನೆಂದರೆ "ನಮ್ಮ ಹೃದಯಗಳೊಳಗೆ ದೇವರ ಪ್ರೀತಿಯು [ವಾಕ್ಯದಲ್ಲಿ ಪ್ರಕಟವಾಗಿರುವ ಆತನ ಪ್ರೀತಿಯ ಬಗ್ಗೆ ನಾವು ತಿಳಿಯುವ ಪ್ರಕಾರ] ನಮಗೆ ಕೊಡಲ್ಪಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ಸುರಿಸಲ್ಪಟ್ಟಿದೆ."

ಈಗಷ್ಟೆ ಕೊಡಲಾಗಿರುವಂತಹ ವ್ಯಾಖ್ಯಾನಗಳಿಂದ ಅನೇಕ ವ್ಯಾಖ್ಯಾನಕಾರರು ದಿಗಿಲುಗೊಳ್ಳುತ್ತಾರೆ. ಅವರು ವಾದಿಸುವದೇನೆಂದರೆ "ಹೃದಯಗಳಲ್ಲಿ" ಎಂಬದು ಆತ್ಮನ ಕಡೆಯಿಂದ ಹೆಚ್ಚಿನ ವೈಯಕ್ತಿಕ ಹಾಗೂ ನೇರವಾದ ಚಟುವಟಿಕೆಯನ್ನು ಸಕ್ರಿಯಗೊಳಿಸುತ್ತದೆ ಎಂಬದಾಗಿ. ಅವರು ತಮ್ಮ ಹೃದಯಗಳನ್ನು ಆತ್ಮನು ಪ್ರವಾಹದಂತೆ "ಬೆಚ್ಚನೆಯ ಅನುಭವಗಳಿಂದ ತುಂಬಿಸುವ ಕುರಿತು ಬರೆಯುತ್ತಾರೆ" ; ಕೆಲವರು ಭಾವ ಗೀತೆಗೆ ಇಳಿಯುತ್ತಾರೆ. ದೇವರು ನಮ್ಮ ಮೇಲಿಟ್ಟಿರುವ ಪ್ರೀತಿಯ ಬಗ್ಗೆ ತಿಳಿಯುವಾಗ ಅದು ನಮ್ಮ ಹೃದಯವನ್ನು ಬೆಚ್ಚಗೆ ಮಾಡುವ ಭಾವನೆಗಳಿಂದ ತುಂಬಿಸತಕ್ಕದ್ದೆಂಬದನ್ನು ನಾವು ನಿರಾಕರಿಸುತ್ತಿಲ್ಲ-ಆದರೆ ನಾವು "ಬೆಚ್ಚನೆಯ ಭಾವನೆಗಳಿಂದ" ಉಕ್ಕಿ ಹರಿಯದಂಥ ಆ ಸಮಯಗಳ ವಿಷಯವೇನು? ಅದರ ಅರ್ಥವು ದೇವರು ಇನ್ನು ನಮ್ಮನ್ನು ಪ್ರೀತಿಸುತ್ತಿಲ್ಲ ಎಂದಾಗುತ್ತದೋ? ಖಂಡಿತವಾಗಿಯೂ ಇಲ್ಲ. ಭಾವನೆಗಳು ಏರಿಳಿತಕ್ಕೊಳಗಾಗುತ್ತವೆಂದು ಅದರ ಅರ್ಥ, ಭಾವನೆಗಳು ನಮ್ಮ ಆತ್ಮೀಕ ಸ್ಥಿತಿಗತಿಗಳ ಮೇಲೆ ಅವಲಂಭಿತವಾಗಿರುವದಿಲ್ಲ ಎಂದು ಅದರ ಅರ್ಥವಾಗಿರುತ್ತದೆ.

## ಕ್ರಿಸ್ತನ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (5:6-11)

**6ನಾವು ಆಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. 7ನೀತಿವಂತನಿಗೋಸ್ಕರ ಯಾರಾದರೂ ಪ್ರಾಣ ಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. 8ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. 9ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ. 10ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತೂ ನಿಶ್ಚಯವಲ್ಲವೇ. 11ಇಷ್ಟುಮಾತ್ರವೇ ಅಲ್ಲದೆ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸಮಾಧಾನಸ್ಥಿತಿ ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ.**

ಈ ವಾಕ್ಯಭಾಗವು, ವಿಶೇಷವಾಗಿ-6 ರಿಂದ 8 ವಚನಗಳು-" ವಾಕ್ಯದಲ್ಲಿ ಸಿಕ್ಕುವ ದೇವರ ಪ್ರೀತಿಯ ಕುರಿತ ಅತ್ಯಂಥ ಆಗಾಧವಾದ ಬಣ್ಣನೆಗಳಲ್ಲೊಂದನ್ನು"[19] ನಮ್ಮ

ಮುಂದಿಡುತ್ತದೆ.

**ವಚನ 6.** ಈ ವಾಕ್ಯಭಾಗವು ಕ್ರಿಸ್ತನಿಲ್ಲದ ಮಾನವರ ಆತ್ಮೀಕ ಪರಿಸ್ಥಿತಿಯ ಬಣ್ಣನೆಯೊಂದಿಗೆ ಆರಂಭಗೊಳ್ಳುತ್ತದೆ: **ನಾವು ಅಶಕ್ತರಾಗಿದ್ದಾಗಲೇ.** "ಅಶಕ್ತರು" ಎಂಬ ಪದವು ἀσθενής (*asthenēs*) ಎಂಬದರ ಅನುವಾದವಾಗಿದ್ದು ಎರಡು ಪದಗಳನ್ನೊಳಗೊಂಡಿದೆ, ನಕಾರಾತ್ಮಕ α (*a*, "ಇಲ್ಲದೆ") ಮತ್ತು σθενός (**sthenos**, "ಬಲ") ಎಂಬ ಪದಗಳು ಸೇರಿವೆ. KJV ಯು ಈ ಪದವನ್ನು "ಬಲವಿಲ್ಲದೆ" ಎಂದು ಅನುವಾದಿಸುತ್ತದೆ. *Asthenēs* ಎಂಬ ಪದವು ಕೆಲವು ಸಾರಿ ನಿತ್ರಾಣಗೊಳಿಸುವ ವ್ಯಾದಿಯನ್ನು ಸೂಚಿಸುತ್ತದೆ (ಮತ್ತಾಯ 25:43, 44; ಲೂಕ 10:9; ಅಪೊಸ್ತಲರ ಕೃತ್ಯಗಳು 4:9; 5:15, 16). ಈ ಸನ್ನಿವೇಶದಲ್ಲಿ, ಅದು "ಮನುಷ್ಯನು ವ್ಯಾಧಿಗ್ರಸ್ಥನಾಗಿದ್ದಾನೆ-ಪಾಪದ ರೋಗದಿಂದ ಕುರೂಪಗೊಂಡು ಬಲವಿಲ್ಲದವನಾಗಿದ್ದು ಅದು ಆತನ ಜೀವಿತವನ್ನು ವ್ಯರ್ಥಗೊಳಿಸುತ್ತಿರುವದನ್ನು. . . . ಅವನ ವ್ಯಾಧಿಯು ದೇವರ ಸ್ವಸ್ಥತೆಯ ಶಕ್ತಿಯಿಲ್ಲದೆ ಅಂತಿಮ ಘಟ್ಟದಲ್ಲಿರುತ್ತದೆ."[20] ಒಂದು ಹಳೆಯ ನಾಣ್ಣುಡಿ ಹೀಗೆ ಹೇಳುತ್ತದೆ, "ತಮಗೆ ಸಹಾಯ ಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುತ್ತಾನೆ,"[21] ಆದರೆ ರೋಮಾ 5:6 ಹೇಳುವದೇನೆಂದರೆ ತಮಗೆ ತಾವು ಸಹಾಯ ಮಾಡಿಕೊಳ್ಳಲು *ಸಾಧ್ಯವಿಲ್ಲದವರಿಗೆ* ದೇವರು ಸಹಾಯ ಮಾಡುತ್ತಾನೆ. ಕ್ರಿಸ್ತನಿಲ್ಲದೆ, ಜನರು "ಸಹಾಯವಿಲ್ಲದವರು," ನಿರೀಕ್ಷೆಯಿಲ್ಲದವರು ಮತ್ತು ಕಳೆದುಹೋದವರಾಗಿದ್ದಾರೆ.

ಲೋಕವು ಅಂಥ ನಿಸ್ಸಹಾಯಕ ಸ್ಥಿತಿಯಲ್ಲಿರುವಾಗ, **ಕ್ರಿಸ್ತನು ನೇಮಿತ** (ತಕ್ಕ) **ಕಾಲದಲ್ಲಿ ಪ್ರಾಣಕೊಟ್ಟನು.** "ನೇಮಿತ ಕಾಲ" ಎಂಬುದು καιρός (*kairos*) ಎಂಬ ಪದದಿಂದ ಬಂದದ್ದು, ಅದು ಕಾಲಘಟ್ಟದಲ್ಲಿ "ಬಹಳ ನಿರ್ಣಾಯಕ ಸಮಯದಲ್ಲಿ" ಎಂಬದನ್ನು ಸೂಚಿಸುತ್ತದೆ.[22] "ನೇಮಿತಕಾಲ" ಎಂಬುದು "ದೇವರ ಯೋಜನೆಗಳು ಮತ್ತು ಸಂಕಲ್ಪಗಳಲ್ಲಿರುವ ಸರಿಯಾದ ಕಾಲದಲ್ಲಿ" ಎಂದಾಗಿರಬಹುದು (ನೋಡಿರಿ ಗಲಾತ್ಯ 4:4), ಅಥವಾ ಅದು "ಮಾನವನು ಸಂಪೂರ್ಣ ನಿರ್ಗತಿಕತೆಯ ಹಂತವನ್ನು ತಲುಪಿದ ಒಂದು ಕಾಲವನ್ನು" ಸೂಚಿಸಬಹುದಾಗಿದೆ.[23] Leon Morris ಹೇಳುವದೇನೆಂದರೆ, "ನೇಮಿತಕಾಲ" ಎಂಬುದು ಎರಡೂ ಆಲೋಚನೆಗಳನ್ನು ಆವರಿಸಿಕೊಂಡಿರುತ್ತದೆ: "ನಾವು ಇನ್ನೂ ಪಾಪಿಗಳಾಗಿದ್ದಾಗಲೇ ಆತನು ಮರಣಿಸಿದನು ಮತ್ತು ಅದು ದೇವರ ಉದ್ದೇಶಕ್ಕೆ ಸರಿಹೊಂದುವ ಸಮಯವೂ ಆಗಿತ್ತು."[24]

"ಅಶಕ್ತರಿಗಾಗಿ" ಮರಣಿಸುವದರ ಜೊತೆಗೆ, ವಚನ 6 ಇದನ್ನು ಸಹ ಹೇಳುತ್ತದೆ, ಕ್ರಿಸ್ತನು **ಭಕ್ತಿಹೀನರಿಗೋಸ್ಕರ** ಪ್ರಾಣಕೊಟ್ಟನು ಎಂಬದಾಗಿ. ಅನುವಾದಿಸಲ್ಪಟ್ಟ ಗ್ರೀಕ್ ಪದ "ಭಕ್ತಿಹೀನರು" ಎಂಬದಕ್ಕೆ ἀσέβεια (*asebeia*) ಎಂದಾಗಿರುತ್ತದೆ. σέβομαι (*sebomai*) ಎಂಬದರೊಂದಿಗೆ ಉಪಸರ್ಗ α (*a*) ಸೇರ್ಪಡೆಗೊಂಡು ನಕಾರಾತ್ಮಕ ಅರ್ಥವನ್ನು ಕೊಡುತ್ತದೆ. *Sebomai* ಅಂದರೆ "ಬೆರಗುಗೊಂಡು ನಿಲ್ಲು," "ಭಯಭಕ್ತಿ," "ಆರಾಧನೆ" ಎಂದಾಗಿರುತ್ತದೆ. ಹೀಗೆ *asebeia* ದೇವರ ಬಗ್ಗೆ ಭಯಭಕ್ತಿಯಿಂದ ನಿಲ್ಲದವರನ್ನು ಸೂಚಿಸುತ್ತದೆ, ಆತನನ್ನು ಗೌರವಿಸದವರನ್ನು, ಆತನನ್ನು ಆರಾಧಿಸಲು ನಿರಾಕರಿಸುವವರನ್ನು ಸೂಚಿಸುತ್ತದೆ. ಅದು ಸ್ವತಃ ದೇವರ ವ್ಯಕ್ತಿತ್ವಕ್ಕೆ ಅಸಡ್ಡೆ,

ಕೆಣಕುವಿಕೆಯನ್ನು ತೋರುವದಾಗಿದೆ. ನಮ್ಮಲ್ಲಿ ಕೆಲವರು, "ಖಂಡಿತವಾಗಿಯೂ, ಅದು ನನ್ನ ಕುರಿತಾಗಿ ಮಾತಾಡುತ್ತಿಲ್ಲ!" ಎಂದು ಯೋಚಿಸಬಹುದು .ಹೇಗೂ, "ಕ್ರಿಸ್ತನು ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು" (5:6) ಎಂಬ ಹೇಳಿಕೆಯು "ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟನು" ಎಂಬ ಹೇಳಿಕೆಗೆ ಸಮಾನಾರ್ಥವುಳ್ಳದ್ದಾಗಿದೆ (5:8). ಬೇರೆ ಮಾತುಗಳಲ್ಲಿ ಹೇಳುವದಾದರೆ, "ಭಕ್ತಿಹೀನರು" ಎಂಬದು "ನಮಗೋಸ್ಕರ" ಎಂಬದಕ್ಕೆ ಸಮಾನವಾಗುತ್ತದೆ!

**ವಚನ 7.** ದೇವರ ಪ್ರೀತಿಯ ಆಶ್ಚರ್ಯವಾದ ಸ್ವಭಾವವು 7 ಮತ್ತು 8 ವಚನಗಳಲ್ಲಿ ಒತ್ತಿ ಹೇಳಲ್ಪಟ್ಟಿದೆ. 7ನೇ ವಚನವು ಹೀಗೆ ಹೇಳುತ್ತದೆ, **ನೀತಿವಂತನಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣ ಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು.** ಜನರು "ನೀತಿವಂತನು" (δίκαιος, *dikaios*) ಮತ್ತು "ಉಪಕಾರಿ" (ἀγαθός, *agathos*) ವ್ಯಕ್ತಿಗಳ ನಡುವೆ ಏನಾದರೂ ವ್ಯತ್ಯಾಸವಿದೆಯೋ ಇಲ್ಲವೋ ಎಂಬ ಗೊಂದಲ್ಲಕ್ಕಿಡಾಗು ತ್ತಾರೆ-ಮತ್ತು ಇರುವದೇ ಆದಲ್ಲಿ ಆ ವ್ಯತ್ಯಾಸ ಯಾವದು. ಕೆಲವರು ಯಾವದೇ ವ್ಯತ್ಯಾಸವಿಲ್ಲ ಎಂದು ಭಾವಿಸುತ್ತಾರೆ. ಅವರು ಸಲಹೆ ಮಾಡುವದೇನೆಂದರೆ, ಪೌಲನು ತೆರ್ತ್ಯನಿಗೆ ಹೇಳಿ ಪತ್ರವನ್ನು ಬರೆಸುತ್ತಿದದ್ದರಿಂದ (16:22), ಒಂದು ಹೇಳಿಕೆಯನ್ನು ನೀಡಿದ ನಂತರ ಅದನ್ನು ಅರ್ಹತೆಗೊಳಿಸಲು ನಿರ್ಧರಿಸಿರಬೇಕು ಅನ್ನುತ್ತಾರೆ: "ನೀತಿವಂತನಿಗೋಸ್ಕರ [ಉಪಕಾರಿ] ಗೋಸ್ಕರ ಸಾಯುವವನನ್ನು ಕಾಣುವದು ಕಷ್ಟಕರ. . . . ಆದಾಗ್ಯೂ, ಯಾವನಾದರೂ ಉಪಕಾರಿಗೋಸ್ಕರ [ನೀತಿವಂತ] ನಿಗೋಸ್ಕರ ಮರಣಿಸಲು ಮುಂದೆ ಬಂದರೂ ಬರಬಹುದು. . . . ಆದರೆ. . . ."

ಹೇಗೂ, ಬಹುಪಾಲು ಲೇಖಕರು ನಂಬುವದೇನೆಂದರೆ, ಎರಡು ಪದಗಳ ನಡುವೆ ಸ್ವಲ್ಪ ವ್ಯತ್ಯಾಸ ಮಾಡುವದು ಅಗತ್ಯವಿರುತ್ತದೆ. ಒಂದು ಸಾಧ್ಯತೆಯೇನೆಂದರೆ, "ನೀತಿವಂತನು" ನೀತಿಯ ಜೀವಿತವನ್ನು ನಡಿಸಲು ಪ್ರಯತ್ನಿಸುವನು, ಆದರೆ ಆತನು ಅಷ್ಟಾಗಿ ಮೆಚ್ಚಿಕೆಯಾಗಲಾರನು. ದುರದೃಷ್ಟಕರವೆಂದರೆ, "ಉಪಕಾರಿ" ಜನರೆಲ್ಲರೂ (ಪೌಲನ ಪದವನ್ನು ಬಳಸುವದಾದರೆ, "ನೀತಿವಂತ" ಜನರೆಲ್ಲರೂ) ಉತ್ತಮರಾಗಿರು ವದಿಲ್ಲ. ಪೌಲನು ಈ ರೀತಿಯಾಗಿ ವ್ಯತ್ಯಾಸದ ಹೋಲಿಕೆಗಳನ್ನು ಮಾಡುವ ಉದ್ದೇಶ ಹೊಂದಿದ್ದರೆ, "ಒಳ್ಳೆಯ ಮನುಷ್ಯನು" ಕೇವಲ "ಒಳ್ಳೆಯವನು" ಮಾತ್ರವಲ್ಲದೆ "ದಯಾಪರ" ಸಹ ಆಗಿರುವವನಾಗಿದ್ದನು- ಮೆಚ್ಚಿಕೆಗೆ ಮತ್ತು ಪ್ರೀತಿಗೆ ಎರಡಕ್ಕೂ ಪಾತ್ರನು. ನಮಗೆ ಹಾಗೆ ಪ್ರಾಣ ಕೊಡುವದಕ್ಕೆ ಕರೆ ಬಂದರೆ, ನಮ್ಮಲ್ಲಿ ಬಹು ಮಂದಿ ಮೊದಲ ರೀತಿಯ ವ್ಯಕ್ತಿಗಿಂತಲೂ ಎರಡನೆಯ ರೀತಿಯ ವ್ಯಕ್ತಿಗೋಸ್ಕರ ನಮ್ಮನ್ನು ತ್ಯಾಗಮಾಡಿಕೊಳ್ಳಲು ಹೆಚ್ಚು ಮನಸ್ಸುಳ್ಳವರಾಗಿರುತ್ತೇವೆ.

ಎರಡು ಪದಗಳ ನಡುವೆ ವ್ಯತ್ಯಾಸವನ್ನು ಮಾಡಬೇಕೋ ಬೇಡವೋ ಎಂಬುದು ಪ್ರಾಮುಖ್ಯವಾಗಿರುವದಿಲ್ಲ. ಯಾವ ರೀತಿಯಲ್ಲಿ ನೋಡಿದರೂ ಪೌಲನ ತಾತ್ಪರ್ಯವು ಏಕರೀತಿಯಾಗಿದೆ: ಕೆಲವರು ಇತರರಿಗೋಸ್ಕರ ತಮ್ಮ ಪ್ರಾಣಗಳನ್ನು ಕೊಡುತ್ತಾರೆಂಬುದು ನಿಜವೇ ಆಗಿದೆ. ಇಂದು, ಸೇನೆಯಲ್ಲಿರುವ ಪುರುಷರು ಮತ್ತು

ಸ್ತ್ರೀಯರು ತಮ್ಮ ಸ್ನೇಹಿತರು, ಕುಟುಂಬ ಮತ್ತು ದೇಶಕ್ಕಾಗಿ ತಮ್ಮ ಪ್ರಾಣಗಳನ್ನು ಅರ್ಪಿಸುತ್ತಾರೆ. ಪೋಲಿಸರು, ಅಗ್ನಿದಳದವರು, ಮತ್ತು ಇತರ ತುರ್ತುಪರಿಸ್ಥಿತಿ ಕೆಲಸಗಾರರು ಸತತವಾಗಿ ಬೇರೆಯವರನ್ನು-ಅವರಲ್ಲಿ ಅನೇಕರು ಅವರಿಗೆ ಪರಿಚಯವೇ ಇರುವದಿಲ್ಲ-ರಕ್ಷಿಸುವದಕ್ಕೋಸ್ಕರ ತಮ್ಮ ಪ್ರಾಣಗಳನ್ನು ಅಪಾಯಕ್ಕೊಳಪಡಿಸಿಕೊಳ್ಳುತ್ತಾರೆ. ಹೇಗೂ, ಒಂದು ನಿಯಮದ ಪ್ರಕಾರ, ಜನರು ತಮ್ಮ ಹೃದಯಕ್ಕೆ "ಅಚ್ಚುಮೆಚ್ಚು" ಆಗಿರುವವರಿಗೋಸ್ಕರ ಮಾತ್ರವೇ ಸಾಯುವದಕ್ಕೆ ಸಿದ್ಧರಿರುತ್ತಾರೆ.

**ವಚನ 8.** ಈ ವಚನವು ಹೀಗೆ ಹೇಳುತ್ತದೆ **ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.** "ತನಗಿರುವ ಪ್ರೀತಿ" ಯು ದೇವರಿಗೆ ವಿಶಿಷ್ಟವಾದ ಪ್ರೀತಿಯಾಗಿದೆ-ಅದು ಮಾನವ ಪ್ರೀತಿಗೆ ತದ್ವಿರುದ್ಧವಾದದ್ದು, ನಾವು ನಮ್ಮನ್ನು ಪ್ರೀತಿಸುವವರಿಗೆ ಮಾತ್ರವೇ ಆ ಪ್ರೀತಿಯನ್ನು ಕಾಯ್ದಿರಿಸಲು ನೋಡುತ್ತೇವಷ್ಟೆ. ದೇವರು ಯೇಸುವಿನ ಮರಣದಲ್ಲಿ ಒಂದು ವಿಶೇಷ ಪ್ರೀತಿಯನ್ನು ತೋರ್ಪಡಿಸಿದನು. ಅದು "ಆತನಗಿರುವ ಪ್ರೀತಿ" ಎಂಬರ್ಥದಲ್ಲಿ ತನ್ನ ಸ್ವಂತ ಮಗನನ್ನು ಅರ್ಪಿಸಿದನು, ಆದರೆ ಅದು ಅದಕ್ಕಿಂತಲೂ ಹೆಚ್ಚಿನದ್ದಾಗಿದೆ. ತಂದೆ ಮತ್ತು ಮಗನು ಒಂದೇ ಆಗಿರುವದರಿಂದ (ಯೋಹಾನ 10:30), ಅವರಲ್ಲೊಬ್ಬರು ಏನಾದರೂ ಮಾಡಿದರೆ ಮತ್ತೊಬ್ಬರೂ ಅದನ್ನು ಮಾಡಿದಂತಾಗುತ್ತದೆ. ಹೀಗೆ, ದೇವರು ತನ್ನ ಮಗನನ್ನು ಕೊಡುವದರಲ್ಲಿ ತನ್ನನ್ನೇ ಅರ್ಪಿಸಿಕೊಂಡನು.[25] "ಸಿದ್ಧಾಂತಪಡಿಸಿದನು" ಎಂಬದರ ಅನುವಾದಿಸಲ್ಪಟ್ಟ ಗ್ರೀಕ್ ಪದವು συνίστησιν (*sunistēsin*) ವರ್ತಮಾನ ಕಾಲದಲ್ಲಿರುತ್ತದೆ, ಅದು ಅನುದಿನವೂ ದೇವರ ತನ್ನ ಪ್ರೀತಿ ತೋರಿಸುವದನ್ನು *ಮುಂದುವರೆಸುತ್ತಾನೆ* ಎಂಬದನ್ನು ಒತ್ತಿ ಹೇಳುತ್ತದೆ.

ನಮ್ಮ ಪ್ರೀತಿ ಮತ್ತು ದೇವರ ಪ್ರೀತಿಯ ನಡುವಿನ ಕಠಿಣವಾದ ವ್ಯತ್ಯಾಸವೇನೆಂಬುದು ವಚನದ ಆರಂಭದಲ್ಲಿ ಸಿಕ್ಕುತ್ತದೆ: **ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟನು.** "ಪಾಪಿಗಳು" ಎಂಬುದು ἁμαρτία (*hamartia*) ಎಂಬದರಿಂದ ಬರುತ್ತದೆ, ಅದರರ್ಥವು "ಗುರಿಯನ್ನು ಮೀರುವದು/ತಪ್ಪುವದು." ಈ ಪದವು ಸಾರುವದೇನೆಂದರೆ ದೇವರು ಇಚ್ಚೈಸಿದ ರೀತಿಯಲ್ಲಿ ಇರುವದಕ್ಕೆ ನಾವು ವಿಫಲರಾಗಿದ್ದೇವೆ ಎಂಬದೇ.

ಯೇಸು ನಮಗೋಸ್ಕರ "ಪ್ರಾಣಕೊಟ್ಟದ್ದರಿಂದ" ನಾವು ರಕ್ಷಿಸಲ್ಪಡಬಲ್ಲೆವು. "ನಮಗೋಸ್ಕರ" ಎಂಬುದು "ನಮ್ಮ ಬದಲಾಗಿ" ಅಥವಾ "ನಮ್ಮ ಪರವಾಗಿ" ಎಂಬ ಅರ್ಥವನ್ನು ಕೊಡಬಲ್ಲದು (ನೋಡಿರಿ 1 ಕೊರಿಂಥ 15:3). ಕ್ರಿಸ್ತನು ತನ್ನ ಮೇಲೆ ನಮ್ಮ ಪಾಪಗಳ ಅಪರಾಧವನ್ನು ಹೊತ್ತುಕೊಂಡನು-ಮತ್ತು ಹೀಗೆ ದಂಡನೆಯನ್ನು ವಹಿಸಿಕೊಂಡನು; ಆತನು ನಮಗೆ "ಕೃಪಾಧಾರವಾದನು" (3:25). ಅದರ ಫಲಿತವಾಗಿ, ನಾವು ಯೇಸುವಿನಲ್ಲಿ ನಂಬಿಕೆಯಿಡುವಾಗ ಮತ್ತು ವಿಧೇಯತೆಯಲ್ಲಿ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವಾಗ (1:5; 16:26), ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ (4:7) ಮತ್ತು ನಮ್ಮನ್ನು ನೀತಿವಂತರೆಂದು ಎಣಿಸುತ್ತಾನೆ (4:22-24).

**ವಚನ 9.** ಪೌಲನು ಮುಂದುವರೆಸುತ್ತಾನೆ, **ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ**

**ನಿಶ್ಚಯವಲ್ಲವೇ.** "ಮತ್ತೂ" ಎಂಬ ಪದವು ಈ ವಾಕ್ಯಭಾಗದಲ್ಲಿ ಎರಡು ಸಾರಿ ಕಾಣಿಸಿಕೊಳ್ಳುತ್ತದೆ (5:9, 10). ದೇವರು ನಮ್ಮನ್ನು ಹಿಂದಿನ ಪಾಪದ ಅಪರಾಧದಿಂದ ರಕ್ಷಿಸುವದಕ್ಕಿಂತಲೂ "ಮತ್ತೂ" ಅಧಿಕವಾದದ್ದನ್ನು ನಮಗಾಗಿ ಮಾಡುತ್ತಾನೆ; ಆತನು ಅನುದಿನವೂ ನಮಗೆ ಸಹಾಯ ಮಾಡುವದನ್ನು ಮುಂದುವರೆಸುತ್ತಾನೆ (ಇಬ್ರಿಯ 13:5, 6). "ತಪ್ಪಿಸಿಕೊಳ್ಳುವದು" (σωθησόμεθα, *sōthēsometha*) ಎಂಬುದು ಭವಿಷ್ಯತ್ಕಾಲ ದಲ್ಲಿರುವದರಿಂದ, ಅಧಿಕವಾದವರು ಒಪ್ಪಿಕೊಳ್ಳುವದೇನೆಂದರೆ ಈ ವಚನದಲ್ಲಿರುವ "ದೇವರ ಕೋಪವು" ನ್ಯಾಯತೀರ್ಪಿನ ದಿನದಂದು ಅನೀತಿವಂತರ ವಿರುದ್ಧ ತೋರಿಬರುವ ದೇವರ ಕೋಪವಾಗಿರುತ್ತದೆ ಎಂಬದಾಗಿ. 9ನೇ ವಚನವು ದೇವರ ಕೃಪೆಯ ಎರಡು ಆಯಾಮಗಳನ್ನು ವ್ಯಕ್ತಪಡಿಸುತ್ತದೆ. ಆತನ ಕೃಪೆಯ ಕಾರಣದಿಂದ, ನಾವು ಯಾವದಕ್ಕೆ ಯೋಗ್ಯರಾಗಿರಲಿಲ್ಲವೋ ಅದನ್ನು ಆತನು ನಮಗೆ ಕೊಟ್ಟನು: ನೀತಿವಂತರೆಂಬ ನಿರ್ಣಯ. ಆತನ ಕೃಪೆಯ ಕಾರಣದಿಂದ, ನಮಗೆ ಯೋಗ್ಯವಾಗಿರು ವದನ್ನು ಆತನು ಕೊಡಲಿಲ್ಲ: ಕೋಪ.

ಇನ್ನೊಂದು ಸಾರಿ, ಪೌಲನು ಒತ್ತಿ ಹೇಳಿದ್ದೇನೆಂದರೆ ನಾವು "ಆತನ ಮುಖಾಂತರವಾಗಿ . . . ರಕ್ಷಿಸಲ್ಪಟ್ಟೆವು" -ಅಂದರೆ, ಕ್ರಿಸ್ತನ ಮೂಲಕವಾಗಿ (ನೋಡಿರಿ 5:1, 2, 10, 11). ನಾವು ಗತಕಾಲದ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದೇವೆ, ದಿನದಿಂದ ದಿನಕ್ಕೆ ರಕ್ಷಿಸಲ್ಪಡುತ್ತೇವೆ, ಮತ್ತು ಅಂತಿಮವಾಗಿ ಕುರಿಯಾದಾತನ ರಕ್ತದಿಂದ ನಿತ್ಯತ್ವಕ್ಕೂ ರಕ್ಷಿಸಲ್ಪಡುತ್ತೇವೆ! ಪ್ರಕಟಣೆ 7ನೇ ಅಧ್ಯಾಯವು ರಕ್ಷಿಸಲ್ಪಟ್ಟವರು ಸಿಂಹಾಸನದ ಸುತ್ತಲೂ ಇರುವ ಒಂದು ರೋಮಾಂಚಕಾರಿ ದೃಶ್ಯವನ್ನು ಚಿತ್ರಿಸುತ್ತದೆ, ಮತ್ತು ಅವರು ಬಿಳಿ ನಿಲುವಂಗಿಗಳನ್ನು ಧರಿಸಿಕೊಂಡವರಾಗಿರುತ್ತಾರೆ. ಅವರು "ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರ ಮಾಡಿದ್ದಾರೆ" ಎಂಬದಾಗಿ ಬಣ್ಣಿಸಲ್ಪಟ್ಟಿದ್ದಾರೆ (ಪ್ರಕಟನೆ 7:14).

**ವಚನ 10. ನಾವು ವೈರಿಗಳಾಗಿದ್ದಾಗ** ದೇವರ ಪ್ರೀತಿಯು ನಮ್ಮ ಮೇಲೆ ತೋರಿಬಂದಿತು. "ವೈರಿಗಳು" ಎಂಬುದು ἐχθρός (*echthros*) ನಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದು ἔχθος (*echthos*) ದೊಂದಿಗೆ ಸಂಬಂಧ ಹೊಂದಿದೆ, ಅದು "ದ್ವೇಷ" ಎಂಬ ಅರ್ಥ ಕೊಡುವ ಪದವಾಗಿದೆ. *Echthros* ಒಂದು ಬಲವಾದ ಪದವಾಗಿದೆ. ಅದು ಸ್ನೇಹಿತನಾಗಿರುವದಕ್ಕೆ ಸ್ವಲ್ಪ ಕೊರತೆ ಹೊಂದಿರುವ ವ್ಯಕ್ತಿಯನ್ನು ಸೂಚಿಸುವದಿಲ್ಲ. ಬದಲಾಗಿ, ಅದು ವಿರೋಧಿ ಪಕ್ಷದಲ್ಲಿರುವ ಒಬ್ಬನನ್ನು ಸೂಚಿಸುತ್ತದೆ.[26] C. S. Lewis ಹೇಳಿದ್ದೇನೆಂದರೆ, "ನಾವು ಸುಮ್ಮನೆ ಸುಧಾರಿಸಲ್ಪಡಬೇಕಾಗಿರುವ ಅಪರಿಪೂರ್ಣರಾದ ಜೀವಿಗಳಷ್ಟೇ ಆಗಿರುವದಿಲ್ಲ; ನಾವು ಬಂಡಾಯಗಾರರಾಗಿದ್ದು ನಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕಾಗಿರುತ್ತದೆ."[27] ನಾವು ಅಶಕ್ತರು (5:6) ಆದರೆ ಶತ್ರುಗಳಾಗಿದ್ದೇವೆ (8:7; ಕೊಲೊಸ್ಸೆ 1:21). ಈ ಪರಿಸ್ಥಿತಿಯನ್ನು ಗಾಯಗೊಂಡ ಪ್ರಾಣಿಯು ತನಗೆ ಸಹಾಯ ಮಾಡಲು ಪ್ರಯತ್ನಿಸುವವರನ್ನು ಕಚ್ಚಿ, ಪರಚುವ ರೀತಿಗೆ ಹೋಲಿಸಬಹುದು.

"ಅಶಕ್ತರು," "ಭಕ್ತಿಹೀನರು," "ಪಾಪಿಗಳು," "ವೈರಿಗಳು" : ಇವುಗಳಂತೂ ಪೂರಕವಾದ ಪದಗಳಲ್ಲ! ಹಾಗಿದ್ದರೂ, ದೇವರು ಆಗಲೂ ನಮ್ಮನ್ನು ಪ್ರೀತಿಸಿ ನಮಗೋಸ್ಕರ

ಮರಣಿಸುವದಕ್ಕಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟನು. Morris ಹೇಳಿದ್ದೇನೆಂದರೆ ದೇವರು "ತಾನು ಯಾರಾಗಿದ್ದಾನೆಂಬದಕ್ಕಾಗಿ ನಮ್ಮನ್ನು ಪ್ರೀತಿಸುತ್ತಾನೆಯೇ ಹೊರತು ನಾವು ಯಾರಾಗಿದ್ದೇವೆಂಬದಕ್ಕಾಗಿ ಅಲ್ಲ."[28] John R. W. Stott ಹೀಗೆ ಬರೆಯುತ್ತಾನೆ, "ಕೊಡುವವನಿಗೆ ಉಡುಗೊರೆ ಹೆಚ್ಚು ದುಬಾರಿಯಾದಷ್ಟು ಅದನ್ನು ಸ್ವೀಕರಿಸುವವನ ಸ್ವೀಕರಿಸುವ ಯೋಗ್ಯತೆ ಕಡಿಮೆಯಾಗುತ್ತದೆ, ಅದರಲ್ಲಿ ಮಹಾ ದೊಡ್ಡ ಪ್ರೀತಿಯು ತೋರಿಬರುತ್ತದೆ. ಈ ಮಾನದಂಡಗಳಿಂದ ಅಳೆಯುವದಾದರೆ, ಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರೀತಿಯು ಸಂಪೂರ್ಣವಾಗಿ ವಿಭಿನ್ನವಾದದ್ದು."[29]

ವಚನ 10 ಮುಂದೆ ಹೇಳುವದೇನೆಂದರೆ, **ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿದ್ದೇವೆ.** ಪೌಲನು ಈ ಅದ್ಭುತವಾದ ಆತ್ಮೀಕ ವ್ಯವಹಾರದ ಬಗ್ಗೆ ಚರ್ಚಿಸುತ್ತಾ ಸಾಗಿದಂತೆ, ಆತನು ರೋಮಾಪುರ ಪತ್ರಿಕೆಯಲ್ಲಿ "ಸಮಾಧಾನ ವಾಗಿದ್ದೇವೆ" ಎಂಬ ಪದವನ್ನು ಪರಿಚಯಿಸುತ್ತಾನೆ. ಆತನು ಈ ಮುಂಚೆ ಹೇಳಿದ್ದೇ ನೆಂದರೆ, ನಾವು ಕ್ರೈಸ್ತರಾಗುವಾಗ, "ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ" (5:1); ಈಗ ಆತನು ಹೇಳುವದೇನೆಂದರೆ ನಾವು "ಸಮಾಧಾನವಾಗಿದ್ದೇವೆ." "ನೀತಿವಂತರೆಂಬ ನಿರ್ಣಯ" ಮತ್ತು "ಸಮಾಧಾನವಾಗಿದ್ದೇವೆ" ಎಂಬ ಪದಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಎರಡೂ ಪದಗಳು ದೇವರ ಮಕ್ಕಳಾಗುವದನ್ನು ಸೂಚಿಸುತ್ತವೆ, ಆದಾಗ್ಯೂ ಈ ಒಂದೊಂದು ಪದವು ಸಹ ಕರ್ತನು ನಮಗಾಗಿ ಮಾಡಿರುವ ಕಾರ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಒದಗಿಸುತ್ತವೆ.

"ಸಮಾಧಾನವಾಗಿದ್ದೇವೆ" ಎಂಬದರ ಅನುವಾದಿತ ಪದವು καταλλάσσω (*katallassō*) ಎಂಬುದು. ಅದು ἀλλάσσω (*allassō*, "ಬದಲಾವಣೆ") ಎಂಬ ಕ್ರಿಯಾಪದದೊಂದಿಗೆ ಬಲಗೊಳಿಸುವ κατά (*kata*) ಎಂಬ ಪದವನ್ನು ಒಳಗೊಂಡಿರುತ್ತದೆ. ಈ ಪದವು "ಶತ್ರುತ್ವವನ್ನು ಸ್ನೇಹದ ಸಂಬಂಧವಾಗಿ ಬದಲಾಯಿಸಿಕೊಳ್ಳುವದನ್ನು" ಸೂಚಿಸುತ್ತದೆ.[30] "Reconcile" ಎಂಬ ಆಂಗ್ಲ ಪದವು "re" ("ಪುನಃ") ಎಂಬ ಉಪಸರ್ಗವನ್ನು "conciliate" ("ಒಬ್ಬನನ್ನು ಮಿತ್ರನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸು") ಎಂಬದರೊಂದಿಗೆ ಜೋಡಿಸಿರುತ್ತದೆ. "ಸಮಾಧಾನವಾಗುವಿಕೆಯ" ಒಂದು ಉತ್ತಮ ವ್ಯಾಖ್ಯಾನವೆಂದರೆ, "ಪುನಃ ಸ್ನೇಹಿತರಾಗುವದು." ಇದರ ಅರ್ಥವನ್ನು ಜಗಳವಾಡಿದ ಇಬ್ಬರು ಸ್ನೇಹಿತರ ದೃಷ್ಟಾಂತದಿಂದ ಅರ್ಥೈಸಬಹುದು. ಅವರು ದಿನಗಳವರೆಗೆ ಒಬ್ಬರೊಂದಿಗೊಬ್ಬರು ಮಾತಾಡುವದಿಲ್ಲ; ಅವರು ಬೇರ್ಪಡುತ್ತಾರೆ. ನಂತರ, ಒಂದು ದಿನ, ಅವರು ಕುಳಿತುಕೊಂಡು ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಈಗ ಅವರು *ಸಮಾಧಾನವಾಗಿದ್ದಾರೆ*; ಅವರು ಪುನಃ ಸ್ನೇಹಿತರಾದರು.

"ಸಮಾಧಾನವಾಗಿದ್ದೇವೆ" ಎಂಬ ಪದವು ಒಂದು ಕಾಲದಲ್ಲಿ ನಾವು ದೇವರ ಸ್ನೇಹಿತರಾಗಿದ್ದೆವು ಎಂಬ ಅಂಶವನ್ನು ನೆನಪಿಗೆ ತರುತ್ತದೆ, ಆದರೆ ನಂತರ ನಾವು ಪಾಪ ಮಾಡಿ ಕರ್ತನಿಂದ ದೂರವಾಗಿ ಹೋದೆವು. ನಾವು ಆತನಿಂದ ಬೇರ್ಪಟ್ಟೆವು. ಯೆಶಾಯನು ಹೀಗೆ ಬರೆದನು,

ಇಗೋ, ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ. ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ (ಯೆಶಾಯ 59:1, 2).

ದೇವರು ತನ್ನನ್ನು ಜನರಿಂದ ಬೇರ್ಪಡಿಸಿಕೊಳ್ಳುವದಿಲ್ಲ, ಆದರೆ ಜನರೇ ತಮ್ಮ ಪಾಪದ ಮೂಲಕವಾಗಿ ತಮ್ಮನ್ನು ದೇವರಿಂದ ಬೇರ್ಪಡಿಸಿಕೊಳ್ಳುತ್ತಾರೆ. ಇದೇ ಸತ್ಯವಾಗಿರುವದರಿಂದ, ಜನರೊಂದಿಗೆ ಸಮಾಧಾನಗೊಳ್ಳಬೇಕಾಗಿರುವದು ದೇವರಲ್ಲ, ಆದರೆ ಜನರೇ ದೇವರ ಸಂಗಡ ಸಮಾಧಾನ ಮಾಡಿಕೊಳ್ಳಬೇಕಿರುತ್ತದೆ. ಪೌಲನು ಹೀಗೆ ಬರೆದನು, "ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ" (2 ಕೊರಿಂಥ 5:20). ನಾವು ಸುವಾರ್ತೆಗೆ ಕಿವಿಗೊಡಬೇಕು, ಅದು "ಸಮಾಧಾನವಾಕ್ಯ" ಎಂದು ಕರೆಯಲ್ಪಟ್ಟಿದೆ (2 ಕೊರಿಂಥ 5:19). ನಾವು ನಂಬಿಕೆಯಿಟ್ಟು ವಿಧೇಯರಾಗುವಾಗ, ದೇವರು ನಮ್ಮನ್ನು ರಕ್ಷಿಸಲ್ಪಟ್ಟವರ ಸಮೂಹ (ದೇಹ)ದೊಳಗೆ ಸೇರ್ಪಡೆಗೊಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 2:38, 41, 47). ನಾವು "ಆ ಶಿಲುಬೆಯ ಮೂಲಕ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ" (ಎಫೆಸ 2:16). ಆ "ಒಂದೇ ದೇಹ" ವು "ಸಭೆ" ಆಗಿರುತ್ತದೆ (ಎಫೆಸ 1:22, 23).

ಪೌಲನು ಮುಂದೆ ಹೇಳಿದ್ದೇನೆಂದರೆ **ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು.** ಆ ಮಾತುಗಳಿಂದ ಆತನ ತಾತ್ಪರ್ಯವೇನಾಗಿತ್ತು? ಬಹುಶಃ ಆತನು ಯೇಸುವಿನ ಪುನರುತ್ಥಾನವನ್ನು ಸೂಚಿಸಿ ಹಾಗೆ ಹೇಳಿರಬೇಕು; ಯೇಸು ಜೀವಿತನಾಗಿರುವ ಕಾರಣದಿಂದ, ದೇವರು ಆತನ ಯಜ್ಞವನ್ನು ಅಂಗೀಕರಿಸಿದ್ದಾನೆಂದು ಬಲ್ಲೆವು ಮತ್ತು ಆ ಕಾರಣದಿಂದ ನಾವು ರಕ್ಷಣೆ ಹೊಂದಬಲ್ಲೆವು. 4:25 ರಲ್ಲಿ, ಕ್ರಿಸ್ತನು "ನಮಗೆ ನೀತಿವಂತರೆಂಬ ನಿರ್ಣಯ ಉಂಟಾಗುವ ನಿಮಿತ್ತ ಜೀವಿದಿಂದ" ಎಬ್ಬಿಸಲ್ಪಟ್ಟನು ಎಂಬದನ್ನು ಪೌಲನು ಒತ್ತಿ ಹೇಳಿದನು. AB ಯಲ್ಲಿ 10ನೇ ವಚನವು ಹೀಗೆ ಇರುತ್ತದೆ, "ನಾವು ಆತನ [ಪುನರುತ್ಥಾನದ] ಜೀವದಿಂದ ನಾವು [ಅನುದಿನವೂ ಪಾಪದ ದೊರೆತನದಿಂದ ಬಿಡಿಸಲ್ಪಡುವೆವು] ರಕ್ಷಿಸಲ್ಪಡುವೆವು."

ಇನ್ನೊಂದು ಸಾಧ್ಯತೆಯೇನೆಂದರೆ, ನಾವು "ಆತನ ಜೀವದಲ್ಲಿ ಪಾಲುಗಾರರಾಗುವ ಮೂಲಕ" ರಕ್ಷಿಸಲ್ಪಡುವೆವು ಎಂಬದು ಪೌಲನ ಅರ್ಥವಾಗಿರಬಹುದು (Goodspeed). 6:8 ರಲ್ಲಿ, ಪೌಲನು ಹೇಳಿದ್ದೇನೆಂದರೆ "ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ . . . ಆತನೊಡನೆ ಜೀವಿಸುವೆವು" (ನೋಡಿರಿ ಯೋಹಾನ 14:19). ಪೌಲನು ಗಲಾತ್ಯದವರಿಗೆ ಹೇಳಿದ್ದೇನೆಂದರೆ, "ಇನ್ನು ಜೀವಿಸುವವನು ನಾನಲ್ಲ, ಆದರೆ ಕ್ರಿಸ್ತನೇ ನನ್ನಲ್ಲಿ ಜೀವಿಸುತ್ತಾನೆ" (ಗಲಾತ್ಯ 2:20).

ಅನೇಕ ಲೇಖಕರು 5:10ನೇ ವಚನವನ್ನು ಪೌಲನು ಅನಂತರದಲ್ಲಿ 8:34 ರಲ್ಲಿ ಹೇಳುವ ಮಾತುಗಳೊಂದಿಗೆ ಜೋಡಿಸುತ್ತಾರೆ: "ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು *ನಮಗೋಸ್ಕರ ಬೇಡುವವನಾಗಿದ್ದಾನೆ"* (ಒತ್ತಿ ಹೇಳಿದ್ದು). ಇಬ್ರಿಯ 7:25ನ್ನು ರೋಮಾ 5:10 ರ ಮೇಲಿನ

ವ್ಯಾಖ್ಯಾನ ಎಂದು ಪರಿಗಣಿಸಲ್ಪಟ್ಟಿದೆ: "ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; *ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ*" (ಒತ್ತಿ ಹೇಳಿದ್ದು ನನ್ನದು).

ನಾವು ಪೌಲನ ಹೇಳಿಕೆಯನ್ನು ಯಾವ ಕೋನದಲ್ಲಿ ನೋಡಿದರೂ, 5:10 ಘೋಷಿಸುವದೇನೆಂದರೆ ಕರ್ತನ "ವಿಮೋಚನೆಯ ಕೆಲಸವು ಶಿಲುಬೆಯ ಮೇಲೆ ಮುಕ್ತಾಯಗೊಳ್ಳಲಿಲ್ಲ ಆದರೆ ಇಂದಿಗೂ ಮುಂದುವರೆದಿರುತ್ತದೆ."[31] ನಾವು ಯೇಸುವಿನ ವಾಕ್ಯದ ಬೆಳಕಿನಲ್ಲಿ ನಡೆಯುತ್ತಿರುವ ಹಾಗೆ ಯೇಸುವಿನ ರಕ್ತವು ನಿರಂತರವಾಗಿ ನಮ್ಮನ್ನು ನಮ್ಮ ಪಾಪಗಳಿಂದ ಬಿಡಿಸಿ ಶುದ್ಧ ಮಾಡುತ್ತದೆ (1 ಯೋಹಾನ 1:7; ನೋಡಿರಿ ಕೀರ್ತನೆ 119:105). ಯೇಸು ನಮ್ಮನ್ನು ಬಲಪಡಿಸಿ ನಮಗೆ ಸಹಾಯ ಮಾಡುವದಕ್ಕೆ ನಮ್ಮೊಂದಿಗೆ ಇರುತ್ತಾನೆ (ಮತ್ತಾಯ 11:28; 28:20). ಆತನು ಯಾವಾಗಲೂ ತನ್ನ ತಂದೆಯ ಮುಂದೆ ನಮಗೋಸ್ಕರ ವಿಜ್ಞಾಪನೆ ಮಾಡುತ್ತಾನೆ (ಇಬ್ರಿಯ 7:25; ನೋಡಿರಿ 2:18; 4:14-16).

ಪೌಲನ ವಾದವೇನಾಗಿತ್ತೆಂದರೆ, ನಾವು ವೈರಿಗಳಾಗಿದ್ದಾಗ ದೇವರು ನಮಗೋಸ್ಕರ ಅಷ್ಟೊಂದನ್ನು ಮಾಡಿರುವಾಗ, ನಾವು ಆತನ ಸ್ನೇಹಿತರಾಗಿರುವಾಗ **ಮತ್ತೂ** ಅಧಿಕವಾದದ್ದನ್ನು ಮಾಡುವನಲ್ಲವೇ! 8:32 ರಲ್ಲಿ, ಆತನು ಇದೇ ರೀತಿಯ ವಾದವನ್ನು ಉಪಯೋಗಿಸಿದನು: "ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?" ಅಂದರೆ, ದೇವರು ದೊಡ್ಡ ಕಾರ್ಯವನ್ನು ಮಾಡಿರುವಾಗ, ಆತನು ಚಿಕ್ಕ ಕಾರ್ಯವನ್ನು ಸಹ ಮಾಡುವದಿಲ್ಲವೋ? ಜೀವಿತದಲ್ಲಿ ಏನೇ ಸಂಭವಿಸಿದಾಗ್ಯೂ ಕರ್ತನು ಯಾವಾಗಲೂ ನಮ್ಮೊಂದಿಗೆ ಇರುವನು ಮತ್ತು ನಮಗೆ ಸಹಾಯ ಮಾಡುವನು ಎಂಬ ನಿಶ್ಚಿತತೆಯನ್ನು ಕೊಡುತ್ತಾ ಪೌಲನು 8ನೇ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತಾನೆ:

> ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ? . . . ಎಂಬದಾಗಿ ಬರೆದಿರುವಂತೆ ಆಗುತ್ತದಲ್ಲಾ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. ಹೇಗೆಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು (8:35-39).

**ವಚನ 11.** ಪೌಲನು ಒಮ್ಮೆಲೆ ಹರ್ಷೋದ್ಗಾರವನ್ನು ವ್ಯಕ್ತಪಡಿಸಲಾರಂಭಿಸುತ್ತಾನೆ, ಆತನು ಕರ್ತನಲ್ಲಿ ಹೊಂದಿದ ಆನಂದವನ್ನು ವ್ಯಕ್ತಪಡಿಸುತ್ತಾನೆ: **ಇಷ್ಟು ಮಾತ್ರವೇ ಅಲ್ಲದೆ, ನಾವು ದೇವರಲ್ಲಿ ಹರ್ಷಗೊಳ್ಳುತ್ತೇವೆ** [ಸಂತೋಷಿಸುತ್ತೇವೆ/ ಹೆಚ್ಚಳಪಡುತ್ತೇವೆ]. ಪೌಲನ

ಹರ್ಷಗೊಳ್ಳುವಿಕೆ/ಹೆಚ್ಚಳಪಟ್ಟುಕೊಳ್ಳುವಿಕೆಯು ತನ್ನಲ್ಲಿಯೇ ಆಗಿರಲಿಲ್ಲ, ಆದರೆ ದೇವರಲ್ಲಿ ಆಗಿತ್ತು. ವಚನ 2 ಮತ್ತು 3ರಲ್ಲಿ, ದೇವರು ಕ್ರೈಸ್ತರಿಗೆ *ಮಾಡುವಂತ* ಕಾರ್ಯಗಳಲ್ಲಿ ಆತನು ಹರ್ಷಿಸಿದನು, ಆದರೆ ಆತನ ಹರ್ಷಗೊಳ್ಳುವಿಕೆಯು ಕೇವಲ ಆಶೀರ್ವಾದಗಳಿಗೆ ಸಿಮೀತವಾಗಿರಲಿಲ್ಲ. ಆತನು ಸ್ವತಃ ದೇವರಲ್ಲಿಯೇ ಹರ್ಷಗೊಂಡನು: ದೇವರು ಯಾರು ಮತ್ತು ಏನಾಗಿದ್ದಾನೆಂಬದರಲ್ಲಿ ಹರ್ಷಗೊಂಡನು.

ಈ ಮುಂಚೆ ಪೌಲನು ಯೆಹೂದ್ಯರ ಕುರಿತು ಹೇಳುತ್ತಾ ಅವರು "ದೇವರ ವಿಷಯವಾಗಿ ಹೊಗಳಿಕೊಳ್ಳುವವರು" ಎಂದಿದ್ದನು (2:17). ಹೇಗೂ, ಅವರು ತಮ್ಮ ಜನಾಂಗವನ್ನು ದೇವರು ವಿಶೇಷ ಪ್ರಜೆಯಾಗಿ ಆರಿಸಿಕೊಂಡದ್ದರಲ್ಲಿಯೇ ಹೆಚ್ಚು ಹೊಗಳಿಕೊಳ್ಳುತ್ತಿದ್ದರೇ ಹೊರತು ಸ್ವತಃ ದೇವರಲ್ಲಿ ಅಷ್ಟಾಗಿ ಹೊಗಳಿಕೊಳ್ಳಲಿಲ್ಲ. ದೇವರಲ್ಲಿನ ಅವರ ಹೊಗಳಿಕೊಳ್ಳುವಿಕೆ (ಹರ್ಷಗೊಳ್ಳುವಿಕೆ/ಹೆಚ್ಚಿಸಿಕೊಳ್ಳುವಿಕೆ)ಯು ಕೇವಲ ಸ್ವಾರ್ಥ-ಕೇಂದ್ರಿತವಾಗಿತ್ತು, ಆದರೆ ಪೌಲನ ಹೊಗಳಿಕೊಳ್ಳುವಿಕೆಯು ದೇವರಲ್ಲಿ-ಕೇಂದ್ರಿತವಾಗಿತ್ತು.

ಪೌಲನು 5:1-11ರ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುತ್ತಾ, ಆತನು ಪುನಃ ಈ ವಾಕ್ಯಭಾಗದಲ್ಲಿನ ಆಶೀರ್ವಾದಗಳೆಲ್ಲವೂ **ಕರ್ತನಾದ ಯೇಸು ಕ್ರಿಸ್ತನ ಮುಖಾಂತರ** ಎಂಬದನ್ನು ಒತ್ತಿ ಹೇಳುತ್ತಾನೆ (5:1, 2, 9, 10). ಆತನ ಮೂಲಕ ಮಾತ್ರವೇ ನಾವು ದೇವರೊಂದಿಗೆ ಸಮಾಧಾನಗೊಳಿಸಲ್ಪಟ್ಟಿದ್ದೇವೆ!

11ನೇ ವಚನದ ಅಂತ್ಯದಲ್ಲಿ, **ಸಮಾಧಾನಗೊಳ್ಳುವಿಕೆ** ಬದಲಾಗಿ KJV ಯು "ಪ್ರಾಯಶ್ಚಿತ್ತ" ಎಂದು ಉಪಯೋಗಿಸಿರುತ್ತದೆ. ಬೋಧಕರು ಕೆಲವು ಸಾರಿ "Atonement (ಪ್ರಾಯಶ್ಚಿತ್ತ)" ಎಂಬದನ್ನು ಹೀಗೆ ಬರೆಯುತ್ತಾರೆ: at-one-ment." ಅವರು ಹೇಳುವದೇನೆಂದರೆ ಈ ಪದವು ಒಮ್ಮೆ ದೂರವಾಗಿದ್ದ ಇಬ್ಬರು ಮಿತ್ರರು ಈಗ ಒಂದಾಗಿದ್ದಾರೆ (at one) ಎಂಬದನ್ನು ಸೂಚಿಸುತ್ತದೆ. ನಾವು ಅದನ್ನು ಹೇಗೆ ಹೇಳಿದರೂ, "ಸಮಾಧಾನಗೊಂಡೆವು" ಎಂಬ ಪದವು ಒಂದು ಅದ್ಭುತವಾದ ಸತ್ಯವನ್ನು ಪ್ರಕಟಗೊಳಿ ಸುತ್ತದೇನೆಂದರೆ, ಯೇಸು ಮರಣಿಸಿದ್ದರಿಂದ, ದೇವರ ಸಂಗಡ *ಸ್ನೇಹವು* ಪುನಃ ಸ್ಥಾಪಿಸಲ್ಪಡಬಲ್ಲದು ಎಂಬದೆ. NCV ಯು ವಚನ 10 ಮತ್ತು 11 ವಚನಗಳನ್ನು ಹೀಗೆ ಅನುವಾದಿಸಿರುತ್ತದೆ: "ನಾವು ದೇವರ ವೈರಿಗಳಾಗಿದ್ದಾಗ, ಆತನು ತನ್ನ ಮಗನ ಮರಣದ ಮೂಲಕ ನಮ್ಮನ್ನು ತನ್ನ ಸ್ನೇಹಿತರನ್ನಾಗಿ ಮಾಡಿಕೊಂಡನು . . . ಆತನ ಮುಖಾಂತರ [ಯೇಸು] ಈಗ ನಾವು ಪುನಃ ದೇವರ ಸ್ನೇಹಿತರು."

## ಕ್ರಿಸ್ತನ ಯಜ್ಞವು ಸರ್ವಕ್ಕೂ ಸಾಕಾದದ್ದು (5:12-21)[32]

ರೋಮಾ 5:12-21 ನಮಗೆ ಕೊಡುವ ನಿಶ್ಚಯತೆಯೇನೆಂದರೆ ಆದಾಮನು ಮಾನವ ಜನಾಂಗದೊಳಗೆ ಬರಮಾಡಿದ ಎಲ್ಲಾ ಸಮಸ್ಯೆಗಳನ್ನೂ ಕ್ರಿಸ್ತನು ನೀಗಿಸಿದ್ದಾನೆ ಮತ್ತು ಅದಕ್ಕಿಂತ ಹೆಚ್ಚಿನದ್ದನ್ನು ಸಹ ನಿವಾರಿಸಿದ್ದಾನೆ. J. D. Thomas ಇದನ್ನು ಹೀಗೆ ಹೇಳುತ್ತಾರೆ, "ನಾವು ಆದಾಮನಲ್ಲಿ ಏನನ್ನು ಕಳಕೊಂಡೆವೋ . . . ಕ್ರಿಸ್ತನಲ್ಲಿ ಅದಕ್ಕಿಂತ ಹೆಚ್ಚು ಪಡೆದುಕೊಂಡೆವು."[33] ಇದು ರೋಮಾಪುರ 5ನೇ ಅಧ್ಯಾಯದ ಕಡೇ ಅರ್ಧ ಭಾಗದ ಮೂಲ ಸಂದೇಶವಾದೆ.

ಹೇಗೂ, ಈ ವಾಕ್ಯಭಾಗದ ವಿವರಗಳನ್ನು ವ್ಯಾಖ್ಯಾನಿಸುವದಕ್ಕೆ ಬಹಳ ಕಠಿಣವಾಗಿರುತ್ತದೆ. Moses E. Lard ಇದನ್ನು "ಈ ಪತ್ರಿಕೆಯಲ್ಲಿಯೇ ಅತ್ಯಂಥ ಕಷ್ಟಕರವಾದ ವಾಕ್ಯಭಾಗಗಳಲ್ಲೊಂದಾಗಿದೆ" ಎಂದು ಕರೆದನು.[34] Richard Rogers ಹೇಳಿದ್ದೇನೆಂದರೆ ಕೆಲವರು "ರೋಮಾ 5:12-21ನ್ನು ಇಡೀ ಬೈಬಲಿನಲ್ಲಿಯೇ ಅತ್ಯಂಥ ಕಠಿಣವಾದ ವಾಕ್ಯಭಾಗವೆಂದು ಪರಿಗಣಿಸುತ್ತಾರೆ."[35] ವಚನ 12ರ ಮೇಲೆ ವ್ಯಾಖ್ಯಾನ ಮಾಡುತ್ತಾ Douglas J. Moo ಪ್ರತಿಪಾದಿಸಿದ್ದೇನೆಂದರೆ "ಪ್ರತಿಯೊಂದು ಶಬ್ದವು-ನಿಜ ಹೇಳುವದಾದರೆ ಪ್ರತಿಯೊಂದು ವಿರಾಮ ಚಿನ್ಹೆ ಸಹ!-ತೀವ್ರ ವಿವಾದದ ವಿಷಯವಾಗಿರುತ್ತದೆ."[36]

ಹಲವಾರು ಕಾರಣಗಳಿಗಾಗಿ, ರೋಮಾ 5:12-21 ವಚನಗಳು ವ್ಯಾಖ್ಯಾನಕಾರರಿಗೆ ಸವಾಲುಗಳನ್ನೊಡ್ಡುತ್ತದೆ. ಅದಕ್ಕೆ ಒಂದು ಕಾರಣವೆಂದರೆ ಪೌಲನ ಶೈಲಿ. ಆಗಾಗ, ಆತನು ವಾಕ್ಯಸಾಲನ್ನು ಪೂರ್ತಿಗೊಳಿಸುವದಿಲ್ಲ, ವಚನ 12 ರಲ್ಲಿ ಇರುವ ರೀತಿಯಲ್ಲಿ ಇರುತ್ತದೆ. ಅಲ್ಲದೆ, ಆತನು ಒಂದು ವಿಚಾರದಿಂದ ಮತ್ತೊಂದು ವಿಚಾರಕ್ಕೆ ಅಲ್ಲಿಂದ ಇನ್ನೊಂದು ವಿಚಾರಕ್ಕೆ ಜಿಗಿಯುತ್ತಾನೆ; 12ನೇ ವಚನದಲ್ಲಿ ಆರಂಭವಾದ ಹೇಳಿಕೆಯು 18ನೇ ವಚನದ ತನಕವೂ ಮುಗಿಯುವದಿಲ್ಲ. ನಂತರ, ಆತನು ಕ್ರಿಯಾಪದಗಳನ್ನು ಮತ್ತು ಮುಖ್ಯ ಪದಗಳನ್ನು ಕೈಬಿಟ್ಟಿರುತ್ತಾನೆ, ವಿಶೇಷವಾಗಿ 16ನೇ ವಚನದಲ್ಲಿ.[37] ಅಷ್ಟುಮಾತ್ರವಲ್ಲದೆ, ಈ ವಾಕ್ಯಭಾಗದಲ್ಲಿ ಪೌಲನ ಉದ್ದೇಶವು ಹೆಚ್ಚುಕಡಿಮೆ ಆದಾಮ ಮತ್ತು ಕ್ರಿಸ್ತನ ನಡುವೆ ಸಾಮ್ಯತೆಯನ್ನು ಮುಂದಿಡುವದಾಗಿತ್ತು. ಕೆಲವು ಸಾರಿ ಅವರಿಬ್ಬರೂ ಹೇಗೆ ಹೋಲಿಕೆಯುಳ್ಳವರಾಗಿದ್ದಾರೆಂದು ತಿಳಿಸುತ್ತಾನೆ, ಇನ್ನು ಕೆಲವು ಸಾರಿ ಅವರು ಹೇಗೆ ವ್ಯತ್ಯಾಸವಾಗಿದ್ದಾರೆಂಬದನ್ನು ತೋರ್ಪಡಿಸುತ್ತಾನೆ. ಕೆಲವು ಸಂದರ್ಭಗಳಲ್ಲಿ, ಯಾವದೇ ಹೋಲಿಕೆಯನ್ನು ಮಾಡಲಾಗುವದಿಲ್ಲ.

ಈ ವಿಭಾಗವು ಬಹಳವಾಗಿ ಸಂಕ್ಷೀಪ್ತಗೊಳಿಸಲ್ಪಟ್ಟಿದೆ ಎಂಬದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.[38] ಪೌಲನ ತರ್ಕವು ಬಹಳ ಸಂಕುಚಿತವಾಗಿರುವದರಿಂದ, ಆತನ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಬೇಕೆಂದರೆ ಆ ವಾಕ್ಯ ಭಾಗವನ್ನು ಸವಿಸ್ತಾರಗೊಳಿಸುವದರ ಅವಶ್ಯವಿರುತ್ತದೆ. ಸಮಸ್ಯೆಯೇನೆಂದರೆ ಯಾವ ಪದಗಳ ಅಗತ್ಯವಿದೆ ಎಂಬದರ ಬಗ್ಗೆ ನಮಗೆ ನಿಖರವಾಗಿ ತಿಳಿಯದು. ಅದರ ಪರಿಣಾಮವಾಗಿ, ನಾವು "ಖಾಲಿ ಸ್ಥಳಗಳನ್ನು" ಬೈಬಲ್‌ನ ಇತರ ಭಾಗಗಳಿಂದ ಹೊಂದಿಕೊಂಡ ಮನವರಿಕೆಗಳಿಂದ ಭರ್ತಿಮಾಡಲು "ಪ್ರಯತ್ನಿಸುತ್ತೇವೆ."[39]

ಪೌಲನ ಶೈಲಿ ಮತ್ತು ಆತನ ಪದಗಳಿಗೆ ಹೆಚ್ಚಿನದನ್ನು ಸೇರ್ಪಡೆಗೊಳಿಸಬೇಕಾದ ಅನಿವಾರ್ಯತೆಯು ವಾಕ್ಯ ಭಾಗದ ಕುರಿತ ದೊಡ್ಡ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿರುತ್ತದೆ. ಸಮರ್ಥ ವೇದಪಂಡಿತರು ಸಹ ಈ ಕೆಳಗಿನಂತಹ ಪ್ರಶ್ನೆಗಳ ಮೇಲೆ ಸಹಮತವನ್ನು ತೋರುವದಿಲ್ಲ. 12ನೇ ವಚನದಲ್ಲಿ ಮರಣವು ಶಾರೀರಿಕವೋ, ಆತ್ಮೀಕವೋ, ಅಥವಾ ಒಂದು ರೀತಿ ಅವುಗಳೆರಡರ ಮಿಶ್ರಣವೋ? 12ನೇ ವಚನದಲ್ಲಿ "ಎಲ್ಲರೂ ಪಾಪ ಮಾಡಿದ್ದರಿಂದ" ಎಂಬುದು 3:23 ರಲ್ಲಿನ ವೈಯಕ್ತಿಕ ಪಾಪವನ್ನು ಸೂಚಿಸುತ್ತದೋ, ಅಥವಾ ಆ ಮಾತುಗಳು ಬೇರೆ ಏನಾದರೂ ಅರ್ಥ ಹೊಂದಿವೆಯೋ?

ಈ ರೀತಿಯ ಭಿನ್ನಾಭಿಪ್ರಾಯಗಳು ಗೌರವಾನ್ವಿತ ವೇದಪಂಡಿತರಲ್ಲಿ ಕಂಡು ಬರುವದು ರೋಮಾಪುರ ಪತ್ರಿಕೆಯ ಅಭ್ಯಾಸವನ್ನು ಹೊಸದಾಗಿ ಆರಂಭಿಸುವವರಿಗೆ ನಿರಾಶೆಯನ್ನು ತರಬಲ್ಲದು.

ಅಂತಿಮವಾಗಿ, ಇಂಥ ವಾಕ್ಯಭಾಗದ ಅಸ್ಪಷ್ಟ ಆಯಾಮಗಳ ಲಾಭ ಪಡೆದುಕೊಂಡು ಕುತರ್ಕವಾದ ಸಿದ್ಧಾಂತಗಳನ್ನು ಹರಡಿಸುವವರಿಂದಾಗಿ ರೋಮಾ 5:12-21 ವಚನಗಳನ್ನು ವ್ಯಾಖ್ಯಾನ ಮಾಡುವ ನಮ್ಮ ಕೆಲಸವು ಮತ್ತಷ್ಟು ಕ್ಲೀಷ್ಟಕರವಾಗುತ್ತದೆ. Larry Deason ಸಲಹೆ ಮಾಡಿದ್ದೇನೆಂದರೆ, ಈ ವಾಕ್ಯಭಾಗವು "ಬಹುಶಃ ಸತ್ಯವೇದದಲ್ಲಿಯೇ ಅತ್ಯಂಥ ದುರುಪಯೋಗ ಪಡಿಸಿಕೊಳ್ಳಲ್ಪಟ್ಟ ಭಾಗವಾಗಿದೆ."[40] ನಾವು ಪ್ರಾರ್ಥನಾಪೂರ್ವಕವಾಗಿ ವಾಕ್ಯಭಾಗವನ್ನು ಪರಿಗಣಿಸೋಣ ಮತ್ತು ಅದು ಕಲಿಸುವ ಸಂಗತಿಗಳಿಗೆ ಜಾಗ್ರತೆಯಿಂದ ಕಿವಿಗೊಡೋಣ.

## ಆದಾಮ ಮತ್ತು ಕ್ರಿಸ್ತನು ಪರಿಚಯಿಸಲ್ಪಡುತ್ತಾರೆ (5:12-14)

**12ಈ ವಿಷಯ ಹೇಗೆಂದರೆ—ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. 13ಧರ್ಮಶಾಸ್ತ್ರ ಉಂಟಾಗುವದಕ್ಕೆ ಮುಂಚೆಯೇ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ. 14ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು. ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ.**

**ವಚನ 12.** ಈ ವಾಕ್ಯಭಾಗದಲ್ಲಿನ ವಿವಾದವು ಮೊದಲ ಪದದಿಂದ ಆರಂಭವಾಗುತ್ತದೆ: **ಈ ವಿಷಯ ಹೇಗೆಂದರೆ.** "ಈ ವಿಷಯ ಹೇಗೆಂದರೆ" ಎಂಬ ಪದವು ಮುಂಚಿನ ವಿಭಾಗಕ್ಕೆ ಇದನ್ನು ಜೋಡನೆ ಮಾಡುತ್ತದೆ-ಆದರೆ ಆ ಜೋಡನೆ ಯಾವದು? ಕೆಲವರು ಈ ವಾಕ್ಯವನ್ನು ಹಿಂದಿನ ವಚನದೊಂದಿಗೆ ಜೋಡಿಸುತ್ತಾರೆ (5:11) ಅಥವಾ ಮುಂಚಿನ ವಿಭಾಗಕ್ಕೆ ಜೋಡಿಸುತ್ತಾರೆ (5:1-11). ಇನ್ನು ಕೆಲವರು ನಂಬುವದೇನೆಂದರೆ, ಒಂದು ವಿಧದಲ್ಲಿ, ಈ ವಾಕ್ಯಭಾಗವು ಹಿಂದಿನ ನಾಲ್ಕು ಅಧ್ಯಾಯಗಳನ್ನು ಸಾರಾಂಶಗೊಳಿಸುತ್ತದೆಂಬದಾಗಿ. ಉದಾಹರಣೆಗೆ, ಕೆಲವರು, ಈ ಪತ್ರಿಕೆಯ ಮೊದಲ ಎರಡು ಮುಖ್ಯವಿಷಯಗಳೆಂದರೆ "ಅಪರಾಧನಿರ್ಣಯ" (1:18-3:20) ಮತ್ತು "ನೀತಿನಿರ್ಣಯ" (3:21-5:21) ಗಮನಕ್ಕೆ ತರುತ್ತಾರೆ. ಅವರು ಮುಂದೆ ಇನ್ನೂ ಗಮನಕ್ಕೆ ತರುವದೇನೆಂದರೆ, 5:12-21 ವಚನಗಳು ಈ ಪ್ರತಿಯೊಂದು ವಿಷಯದ ಬಗ್ಗೆ ವಿವರವಾದ ಮೂಲವನ್ನು ತಿಳಿಯಪಡಿಸುತ್ತವೆ. ವಚನ 16 ರಲ್ಲಿ, ನಾವು ಹೀಗೆ ಓದುತ್ತೇವೆ, "ಒಬ್ಬನೇ ಮನುಷ್ಯನ (ಆದಾಮನ) ಪಾಪದ ದೆಸೆಯಿಂದ *ಸಾಯಬೇಕೆಂಬ ನಿರ್ಣಯವು* ಉಂಟಾಯಿತು, ಆದರೆ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ

ಉಂಟಾಗಿ ಅವರನ್ನು *ನೀತಿವಂತರೆಂದು ನಿರ್ಣಯಿಸುವಂಥ ದಾಗಿದೆ"* (ಒತ್ತಿ ಹೇಳಿದ್ದು ನನ್ನದು).

ಮುಂಚೆ ನಡದ ಸಂಗತಿಗಳೊಂದಿಗೆ 12 ರಿಂದ 21 ವಚನಗಳು ಹೇಗೆ ಸರಿಹೊಂದುತ್ತವೆಂಬದರ ಬಗ್ಗೆ ಒಪ್ಪತಕ್ಕ ವಿವರಣೆಯು ದೀರ್ಘಕಾಲದ ಹಿಂದೆ Chrysostom ಎಂಬ ಆದಿ ಕ್ರೈಸ್ತನಿಂದ ಕೊಡಲ್ಪಟ್ಟಿರುತ್ತದೆ (ಕ್ರಿ.ಶ. 347-407). ಆತನು ಸಲಹೆ ಮಾಡಿದ್ದೇನೆಂದರೆ ಪೌಲನು ಪುನಃ ಇಲ್ಲಿ ಯೆಹೂದ್ಯರಿಂದ ಆಕ್ಷೇಪಣೆಯನ್ನು ನಿರೀಕ್ಷಿಸಿದ್ದನು-ಈ ಸಾರಿ ಯೇಸುವಿನ ಮರಣವು ಯೆಹೂದ್ಯರು ಹಾಗೂ ಅನ್ಯಜನರು ಸೇರಿದಂತೆ ಎಲ್ಲಾ ಜನರಿಗೂ ರಕ್ಷಣೆಯು ಲಭ್ಯವಾಗುವಂತೆ ಮಾಡಿತು ಎಂಬ ಆತನ ಉಪದೇಶದ ಕುರಿತು ಆಕ್ಷೇಪಣೆ ಆಗಿತ್ತು (ನೋಡಿರಿ 3:22). Chrysostom ಇದರ ವಿಷಯವಾಗಿ ಹೀಗೆ ಬರೆದನು, "ಯೆಹೂದ್ಯನು ನಿಮಗೆ 'ಕ್ರಿಸ್ತನೆಂಬ ಒಬ್ಬನ ಉತ್ತಮ ಕಾರ್ಯದಿಂದ ಲೋಕವು ರಕ್ಷಿಸಲ್ಪಟ್ಟಿತು?' ಎಂದು ಕೇಳಿದಾಗ, ನೀವು ಆತನಿಗೆ ಹೀಗೆ ಉತ್ತರಿಸಬಹುದು, 'ಹೇಗೆ ಆದಾಮನೆಂಬ ಒಬ್ಬನ ಅವಿಧೇಯತೆಯಿಂದ ಲೋಕವು ಮರಣದಂಡನೆಗೆ ಗುರಿಯಾಯಿತು?'"[41] ಒಬ್ಬ ವ್ಯಕ್ತಿಯು (ಆದಾಮ) ಮಾಡಿದ ಒಂದು ಕಾರ್ಯದಿಂದ ದುರಂತ ಸಂಭವಿಸಿತೆಂಬ ಸತ್ಯವನ್ನು ಯೆಹೂದ್ಯರು ಒಪ್ಪಿಕೊಂಡಿದ್ದರು; ಪೌಲನು ತೋರಿಸಿಕೊಟ್ಟಿದ್ದೇನೆಂದರೆ, ಅದೇ ರೀತಿ ಒಬ್ಬ ಮನುಷ್ಯನ (ಕ್ರಿಸ್ತನು) ಒಂದು ಕಾರ್ಯವು ಜಯವನ್ನು ತಂದಿತು.

ಪೌಲನು ಮುಂದಿನ ಹೇಳಿಕೆಗಳ ಸಂಬಂಧವು ಏನೇ ಆಗಿದ್ದರೂ, ಆತನು ಈ ಹೇಳಿಕೆಯೊಂದಿಗೆ ತನ್ನ ಪ್ರಸಂಗವನ್ನು ಆರಂಭಿಸುತ್ತಾನೆ: **ಒಬ್ಬ ಮನುಷ್ಯನಿಂದಲೇ ಪಾಪವು ಲೋಕದೊಳಗೆ ಸೇರಿತು.** "ಒಬ್ಬ ಮನುಷ್ಯನು" ಆದಾಮನಾಗಿದ್ದನು (5:14)[42] ನಿಷೇಧಿಸಲ್ಪಟ್ಟ ಹಣ್ಣನ್ನು ಮೊದಲು ತಿಂದವಳು ಹವ್ವಳು ಮತ್ತು ಆದಾಮನು ಆಮೇಲೆ ಅದನ್ನು ತಿಂದಿದ್ದನೆಂಬದು ಪೌಲನಿಗೆ ನಿಸ್ಸಂದೇಹವಾಗಿ ಗೊತ್ತಿತ್ತು (ಆದಿಕಾಂಡ 3:6). ಹಾಗಿದ್ದರೂ, ತನ್ನ ಕುಟುಂಬದ ಯಜಮಾನನಾಗಿ ಆದಾಮನು (ನೋಡಿರಿ ಎಫೆಸ 5:23) ಆ ಪಾಪಕ್ಕೆ ಹೊಣೆಗಾರನಾಗಿದ್ದನು. ತಿನ್ನಬಾರದೆಂಬ ಆಜ್ಞೆಯನ್ನು ಮೊದಲು ಆತನಿಗೇ ಕೊಡಲಾಗಿತ್ತು (ಆದಿಕಾಂಡ 2:15-17). ಅಲ್ಲದೆ, ಹವ್ವಳಂತೆ, ಆದಾಮನು ವಂಚಿಸಲ್ಪಡಲಿಲ್ಲ; ಆತನು ಪರಿಣಾಮಗಳೇನೆಂಬದನ್ನು ಸ್ಪಷ್ಟವಾಗಿ ಅರಿತವನಾಗಿಯೇ ಆ ಕೃತ್ಯವನ್ನು ಮಾಡಿದ್ದನು (1 ತಿಮೊಥೆ 2:14).

ಆದಾಮನ ಅವಿಧೇಯತೆಯ ದುಷ್ಪರಿಣಾಮಗಳಲ್ಲೊಂದೆಂದರೆ "ಪಾಪವು ಈ ಲೋಕದೊಳಗೆ ಪ್ರವೇಶಿಸಿತು." ಆದಾಮನ ಅಪರಾಧಕ್ಕೆ ಮುಂಚೆ ಸಹ ಪಾಪವು ಅಸ್ತಿತ್ವದಲ್ಲಿತ್ತು, ಯಾಕೆಂದರೆ ಪೇತ್ರನು ದೇವದೂತರ ಪಾಪಕೃತ್ಯದ ಬಗ್ಗೆ ಬರೆಯುತ್ತಾನೆ (2 ಪೇತ್ರ 2:4). ಹಾಗಿದ್ದರೂ, ಆದಾಮನ ಅಪರಾಧವು ನಾವು "ಭೂಮಿ" ಎಂದು ಕರೆಯುವ ಈ ಹೊಸ ಲೋಕದಲ್ಲಿ ಪಾಪವನ್ನು ಪರಿಚಯಿಸಿತ್ತು.

ಎರಡನೆಯ ದುಷ್ಪರಿಣಾಮವೇನೆಂದರೆ **ಪಾಪದಿಂದ ಮರಣವು** ಲೋಕದೊಳಗೆ ಸೇರಿತು. "ಮರಣ" ಎಂಬದರ ಅನುವಾದಿಸಲ್ಪಟ್ಟ ಗ್ರೀಕ್ ಪದವು θάνατος (*thanatos*) ಎಂಬುದು. ಪೌಲನು ಈ ಪದವನ್ನು ರೋಮಾಪುರ ಪತ್ರಿಕೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಸಾರಿ

ಉಪಯೋಗಿಸಿದನು. *Thanatos* ಎಂಬ ಪದದಲ್ಲಿ ಅಗಲುವಿಕೆ ಎಂಬ ವಿಚಾರ ಇರುವದು ಗೋಚರವಾಗುತ್ತದೆ. ಶಾರೀರಿಕ ಮರಣವು ದೇಹದಿಂದ ಆತ್ಮವು (ಪ್ರಾಣ) ಅಗಲುವಿಕೆಯಾಗಿರುತ್ತದೆ (ಯಾಕೋಬ 2:26). ಮನುಷ್ಯನು ದೇವರಿಂದ ಅಗಲುವಿಕೆಯು ಆತ್ಮೀಕ ಮರಣವಾಗಿರುತ್ತದೆ (ಯೆಶಾಯ 59:1, 2; ಎಫೆಸ 2:1; 1 ತಿಮೊಥೆ 5:6). ದುಷ್ಟರು "ಕರ್ತನ ಸನ್ನಿಧಾನದಿಂದ" ಶಾಶ್ವತವಾಗಿ ಅಗಲಿಸಲ್ಪಡುವಾಗ (2 ಥೆಸಲೋನಿಕ 1:9), ಅದು "ಎರಡನೆಯ ಮರಣ" ಆಗಿರುವದು (ಪ್ರಕಟನೆ 20:6, 14).

ನಾವು 12ನೇ ವಚನದಲ್ಲಿರುವ "ಮರಣ" ಎಂಬ ಪದವನ್ನು ಆದಾಮನ ಪಾಪವು ಮಾನವ ಜನಾಂಗದೊಳಗೆ ಬರಮಾಡಿದ ಎಲ್ಲಾ ದುರಂತ-ಶಾರೀರಿಕ ಮರಣದಿಂದ ಆರಂಭಗೊಂಡು-ಎಂಬದಾಗಿ ತೆಗೆದುಕೊಳ್ಳೋಣ. ದೇವರು ಆದಾಮನಿಗೆ ಒಳ್ಳೇದು ಮತ್ತು ಕೆಟ್ಟದ್ದರ ಅರಿವು ನೀಡುವ ಮರದ ಹಣ್ಣನ್ನು ತಿಂದರೆ ಸಾಯುವಿ ಎಂದು ಹೇಳಿದನು (ಆದಿಕಾಂಡ 2:17; ನೋಡಿರಿ 3:19)-ಮತ್ತು ಆತನು ಸತ್ತನು (ಆದಿಕಾಂಡ 5:5). ಈ ಶಾರೀರಿಕ ಮರಣದ ಶಾಪವು ಆದಾಮನಿಗೆ ಸಿಮೀತವಾಗಿರಲಿಲ್ಲ. ನಮ್ಮ ವಾಕ್ಯಭಾಗ ಮುಂದುವರೆಯುತ್ತದೆ, **ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು.** LB ಯು ಇದನ್ನು ಹೇಗೆ ಅರ್ಥೈಸುತ್ತದೆ, "ಹೀಗೆ ಸಮಸ್ತವೂ ಬೆಳೆದು ವಯಸ್ಸಾಗುತ್ತಾ ಸಾಯಲಾರಂಭಿಸಿತು."

ಅಷ್ಟುಮಾತ್ರವಲ್ಲದೆ, ಆದಾಮನಿಂದುಂಟಾದ ಮರಣವು ಶರೀರಕ್ಕೆ ಮಾತ್ರವೇ ಸಿಮೀತವಾಗಿರಲಿಲ್ಲ. ಆತನ ಪಾಪವು ಅವನನ್ನು ದೇವರಿಂದ ಬೇರ್ಪಡಿಸಿತು (ಯೆಶಾಯ 59:1, 2); ಹೀಗೆ ಆತನು ಆತ್ಮೀಕವಾಗಿ ಸಹ ಸತ್ತನು. ಪೌಲನು ತನ್ನ ವಿಚಾರಗಳಲ್ಲಿ ಆತ್ಮೀಕ ಮರಣವನ್ನು ಸೇರ್ಪಡೆಗೊಳಿಸಿಕೊಂಡದ್ದು ಸ್ಪಷ್ಟವಾಗುತ್ತದೆ: **ಎಲ್ಲರು ಪಾಪ ಮಾಡಿದ್ದರಿಂದ** ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. "ಎಲ್ಲರು ಪಾಪ ಮಾಡಿದ್ದರಿಂದ" ಎಂಬುದು *πάντες* ἥμαρτον (*pantes hēmarton*) ಎಂಬ ಗ್ರೀಕ್ ಪದಗಳಿಂದ ಅನುವಾದಿಸಲ್ಪಟ್ಟಿದೆ, ಆ ಪದಗಳನ್ನು 3:23 ರಲ್ಲಿ "ಎಲ್ಲರೂ ಪಾಪ ಮಾಡಿದ್ದಾರೆ" ಎಂದು ಅನುವಾದಿಸಲಾಗಿತ್ತು. ಪೌಲನು ಅದೇ ಅರ್ಥದಲ್ಲಿ ಈ ಪದಗಳನ್ನು ಉಪಯೋಗಿಸಿದ್ದಾನೆಂದು ಊಹಿಸಿಕೊಂಡು, 12ನೇ ವಚನವು ಅದೇ ದೆಸೆಯಲ್ಲಿ ಒಂದು ಸಂಗತಿಯನ್ನು ಕಲಿಸುತ್ತದೆ: "ಆದಾಮನು ಪಾಪ ಮಾಡಿದಾಗ, ಶಾರೀರಿಕ ಹಾಗೂ ಆತ್ಮೀಕ ಮರಣಗಳೆರಡೂ ಈ ಲೋಕದೊಳಗೆ ಬಂದವು.[43] ಶಾರೀರಿಕ ಮರಣವು ಎಲ್ಲಾ ಜನರಲ್ಲಿಯೂ ವ್ಯಾಪಿಸಿತು, ಮತ್ತು ಆತ್ಮೀಕ ಮರಣವೂ ವ್ಯಾಪಿಸಿತು, ಯಾಕೆಂದರೆ ಎಲ್ಲರೂ[44] ತಮ್ಮ ಪಿತೃವಾದ ಆದಾಮನ ಮಾದರಿಯನ್ನು ಅನುಸರಿಸಿ ಪಾಪ ಮಾಡಿದ್ದಾರೆ."

ಪೌಲನು 12ನೇ ವಚನದಲ್ಲಿ ಆರಂಭಿಸಿದ ವಾಕ್ಯಸಾಲುಗಳನ್ನು ಮುಗಿಸಿರುವದಿಲ್ಲ. ಇದು NASB ಯಲ್ಲಿ "ಪಾಪಮಾಡಿದ್ದರಿಂದ" ಎಂಬದರ ನಂತರ ಒಂದು ಸಣ್ಣ ಗೆರೆ ಎಳೆಯಲ್ಪಡುವ ಮೂಲಕ ಸೂಚಿಸಲ್ಪಟ್ಟಿದೆ. ಇನ್ನು ಕೆಲವು ತರ್ಜುಮೆಗಳು ಇದನ್ನು ಬೇರೆ ರೀತಿಯಲ್ಲಿ ಸೂಚಿಸುತ್ತವೆ. ASV ಯು 12ನೇ ವಚನದ ನಂತರದಲ್ಲಿ ಒಂದು ವಿರಾಮ ಚಿನ್ಹೆ ಮತ್ತು ಗೆರೆಯನ್ನು ಹಾಕಿದ್ದರೆ, KJV ಯು 13 ರಿಂದ 17 ವಚನಗಳ ಸುತ್ತ ಒಂದು ಪ್ರಕ್ಷೇಪ

ಚಿಹ್ನೆ ಹಾಕಿರುತ್ತದೆ. 12ನೇ ವಚನದ ವಿಚಾರಗಳು ಪುನಃ 18ನೇ ವಚನದಲ್ಲಿ ಮುಂದುವರೆಯಲ್ಪಡುತ್ತವೆ.

**ವಚನ 13.** ಈ ವಚನವು ಹೀಗೆ ಆರಂಭಗೊಳ್ಳುತ್ತದೆ, **ಧರ್ಮಶಾಸ್ತ್ರ ಉಂಟಾಗುವದಕ್ಕೆ ಮುಂಚೆಯೂ ಪಾಪವು ಲೋಕದಲ್ಲಿತ್ತು.** ಗ್ರೀಕ್ ನಲ್ಲಿ "ಧರ್ಮಶಾಸ್ತ್ರ" ಎಂಬದರ ಮುಂಚೆ ಯಾವದೇ ನೀಕರ ಲೇಖನ ಇರುವದಿಲ್ಲ, ಆದರೆ ಪೌಲನು ಮನಸ್ಸಿನಲ್ಲಿ ಮೋಶೆಯ ಧರ್ಮಶಾಸ್ತ್ರವನ್ನು ಹೊಂದಿದ್ದನೆಂಬದು ಸ್ಪಷ್ಟವಾಗುತ್ತದೆ (ನೋಡಿರಿ 5:14). ಜನರ ಬಳಿಯಲ್ಲಿ ಯಾವಾಗಲೂ ಧರ್ಮಶಾಸ್ತ್ರ ಇದ್ದೇ ಇತ್ತು, ಆದರೆ ಮೋಶೆಯ ಧರ್ಮಶಾಸ್ತ್ರ ಬರುವ ವರೆಗೆ ಅವರ ಬಳಿಯಲ್ಲಿ *ಲಿಖಿತ* ಧರ್ಮಶಾಸ್ತ್ರ ಇರಲಿಲ್ಲ. ಜನರು ತಮ್ಮಲ್ಲಿದ್ದ ಅಲಿಖಿತ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ್ದರಿಂದ ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಮುಂಚೆಯೇ "ಪಾಪವು ಲೋಕದಲ್ಲಿತ್ತು."

ವಚನ 13 ಮುಂದುವರೆದು ಹೇಳುತ್ತದೆ, **ಆದರೆ ಧರ್ಮಶಾಸ್ತ್ರವು ಇಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ.** "ಲೆಕ್ಕಕ್ಕೆ ಬರುವದಿಲ್ಲ" ಎಂಬುದು ἐλλογέω (*ellogeō*) ಎಂಬದರಿಂದ ಬಂದದ್ದು. ಅದು λογίζομαι (*logizomai*) ಗೆ ಹೋಲಿಕೆಯಲ್ಲಿರುತ್ತದೆ, ಅದು 4ನೇ ಅಧ್ಯಾಯದಲ್ಲಿ "ಲೆಕ್ಕಕ್ಕೆ ಎಣಿಸಲ್ಪಟ್ಟಿತು" ಎಂದು ಅನುವಾದಿಸಲ್ಪಟ್ಟಿದೆ. ಆದುದರಿಂದ, HCSB ಯಲ್ಲಿ ಇದು "ಧರ್ಮಶಾಸ್ತ್ರವು ಇಲ್ಲದಿರುವಾಗ ಪಾಪವು ಒಬ್ಬನ ಲೆಕ್ಕಕ್ಕೆ ಸೇರಿಸಲ್ಪಡುವದಿಲ್ಲ" ಎಂದಿರುತ್ತದೆ. ಮೇಲ್ನಡೆಯಲ್ಲಿ, ಲಿಖಿತ ಧರ್ಮಶಾಸ್ತ್ರ ಬರುವ ಮುಂಚೆ ಜನರು ಪಾಪ ಮಾಡಿದರು, ಆದರೆ ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಡುವ ತನಕ ಅವರು ಪಾಪಿಗಳೆಂದು *ಲೆಕ್ಕಿಸಲ್ಪಡಲಿಲ್ಲ* ಎಂಬದಾಗಿ ಈ ವಚನ ಹೇಳುವಂತೆ ತೋರುತ್ತದೆ. ಹೇಗೂ, ಪೌಲನು ಜಾಗರೂಕತೆಯಿಂದ ಸ್ಥಾಪಿಸಿದ್ದೇನೆಂದರೆ ಜನರು ತಮ್ಮ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರ ಇಲ್ಲದಿರುವಾಗಲೂ ಪಾಪ ಮಾಡಿದರು-ಮತ್ತು ಅವರನ್ನು ಅವರ ಪಾಪಗಳಿಗಾಗಿ *ಅಪರಾಧಿಗಳೆಂದು ಪರಿಗಣಿಸಲಾಗಿತ್ತು* (3:9). ಪೌಲನ ಈ ವಿಚಾರವನ್ನು ವಿಸ್ತರಿಸಿ ಹೇಳುವದು ಅವಶ್ಯವೆಂದು ಸ್ಪಷ್ಟವಾಗಿ ತೋರುತ್ತದೆ. ಅದನ್ನು ಮಾಡುವದಕ್ಕೆ ಒಂದು ದಾರಿಯು ಇಲ್ಲಿದೆ: "ಧರ್ಮಶಾಸ್ತ್ರ ಇಲ್ಲದಿರುವಲ್ಲಿ ಪಾಪವು ಲೆಕ್ಕಕ್ಕೆ ಬರುವದಿಲ್ಲ [ಆದರೆ ಪ್ರತಿಯೊಬ್ಬರಲ್ಲಿಯೂ ಒಂದು ಧರ್ಮಶಾಸ್ತ್ರ *ಇತ್ತು*-ಒಂದು ಅಲಿಖಿತವಾದ ಧರ್ಮಶಾಸ್ತ್ರ]."[45]

**ವಚನ 14.** ಸೃಷ್ಟಿ ಮತ್ತು ಧರ್ಮಶಾಸ್ತ್ರವು ಕೊಡಲ್ಪಟ್ಟ ನಡುವಿನ ಶತಮಾನಗಳಷ್ಟು ಕಾಲ ಮಾನವರಿಗೆ ಲಿಖಿತ ಧರ್ಮಶಾಸ್ತ್ರ ಇರಲಿಲ್ಲ ಎಂಬ ಸತ್ಯದ ಹೊರತಾಗಿಯೂ, ಅವರು ಆಗಲೂ ಮರಣಿಸಿದ್ದರು: **ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು.** ಮರಣವನ್ನು ಒಬ್ಬ ಕ್ರೂರ ದೊರೆಗೆ ಹೋಲಿಸಲಾಗಿದೆ, ಆತನು ತನ್ನ ಪ್ರಜೆಗಳಿಗೆ ಸಾಯಿರಿ ಎಂದು ಆಜ್ಞಾಪಿಸುವವನಾಗಿದ್ದಾನೆ. ಇಲ್ಲಿನ ಹೇಳಿಕೆಯು ಶಾರೀರಿಕ ಹಾಗೂ ಆತ್ಮೀಕ ಮರಣಗಳೆರಡರ ವಿಷಯದಲ್ಲಿಯೂ ಸತ್ಯವಾಗಿರುತ್ತದೆ. ನಮಗೆ ಗೊತ್ತಿರುವ ಹಾಗೆ, ಆದಾಮ ಮತ್ತು ಮೋಶೆಯ ನಡುವಿನ ಕಾಲದಲ್ಲಿ ಒಬ್ಬ ವ್ಯಕ್ತಿ ಮಾತ್ರವೇ ಮರಣವನ್ನು ಕಾಣಲಿಲ್ಲ: ಹನೋಕ (ಆದಿಕಾಂಡ 5:24). ಆತ್ಮೀಕ ಮರಣದ ವಿಷಯದಲ್ಲಿ ನೋಡುವದಾದರೆ, ಅದಕ್ಕೆ ಯಾರೊಬ್ಬರೂ

ಹೊರತಾಗಿರಲಿಲ್ಲ. ಎಲ್ಲಾ ಜವಾಬ್ದಾರಿಯುತ ವ್ಯಕ್ತಿಗಳು ವೈಯಕ್ತಿಕ ಪಾಪದ ಕಾರಣದಿಂದ ಆತ್ಮೀಕವಾಗಿ ಸತ್ತರು. ಮರಣದ ಆಳಿಕೆಯು ಜಾಗತೀಕವಾಗಿತ್ತು, ಎಲ್ಲಾ ಮಾನವರನ್ನೂ ಬಾಧಿಸುವದಾಗಿದೆ.

ಮರಣದ ಆಳಿಕೆಯು **ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ**[46] **ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ನಡೆಯುತ್ತಿತ್ತು**. ಜನರು ಪಾಪ ಮಾಡಿದ್ದರು, ಆದರೆ ಅವರು "ಆದಾಮನ ಹಾಗೆ, ದೇವರ ಒಂದು ನೇರವಾದ ಸ್ಪಷ್ಟ ಆಜ್ಞೆಯನ್ನು ಉಲ್ಲಂಘಿಸಿರಲಿಲ್ಲ" (NLT). ಆದಾಮನಿಗೆ "ನೀನು ಸತ್ತೇ ಸಾಯುವಿ [ಸರಿಯಾದದ್ದನ್ನು ಮಾಡಲು ವಿಫಲನಾದರೆ]" ಎಂದು ಹೇಳಿದಂತೆ ಅವರಿಗೆ ಹೇಳಲ್ಪಟ್ಟಿರಲಿಲ್ಲ (ಆದಿಕಾಂಡ 2:17).[47] ಹಾಗಿದ್ದರೂ, ಅವರು ಮರಣಿಸಿದ್ದರು—ಶಾರೀರಿಕ ವಾಗಿಯೂ ಆತ್ಮೀಕವಾಗಿಯೂ ಸತ್ತರು.

ಇಲ್ಲಿಯ ತನಕ ವಾಕ್ಯಭಾಗವು ಒಂದು ಮಂದವಾದ ಚಿತ್ರಣವನ್ನು ನೀಡಿರುತ್ತದೆ. ಮೊದಲ ಆದಾಮನ ಪಾಪವು ಮಾನವ ಜನಾಂಗಕ್ಕೆ ವಿನಾಶತೆಯನ್ನು ತಂದಿತು-ಆದರೆ ಪೌಲನು ಒಂದು ನಿರೀಕ್ಷೆಯ ಮಾತನ್ನು ಸೇರ್ಪಡೆಗೊಳಿಸಲು ಸಿದ್ಧನಾಗಿದ್ದನು. 14ನೇ ವಚನದ ಅಂತ್ಯದಲ್ಲಿ, ಆತನು "ಕಡೆಯ ಆದಾಮ" ನನ್ನು ಪರಿಚಯಿಸುತ್ತಾನೆ: ಮೊದಲ ಆದಾಮನು **ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ.** ಆ "ಬರಬೇಕಾದ ಒಬ್ಬಾತನು" ಬೇರಾರೂ ಅಲ್ಲ, ಕ್ರಿಸ್ತನೇ. F. F. Bruce ಗಮನಿಸಿದ್ದೇನೆಂದರೆ, "ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಒಂದು 'ಸೂಚಕಪುರುಷ" ಎಂದು ನೇರವಾಗಿ ಕರೆಯಲ್ಪಟ್ಟ ಹಳೆ ಒಡಂಬಡಿಕೆಯ ಏಕೈಕ ವ್ಯಕ್ತಿ ಆದಾಮನೇ."[48]

"ಅಚ್ಚು" ಎಂಬ ಪದವು ಗ್ರೀಕ್ τύπος (*tupos*) ಎಂಬ ಪದದ ಅನುವಾದವಾಗಿದೆ. *Tupos* ಎಂಬುದು ಗುದ್ದುವ ಮೂಲಕ ಅಥವಾ ಹೊಡೆಯುವ ಮೂಲಕ ಒಂದು ಅಚ್ಚು ನಿರ್ಮಿಸುವದನ್ನು ಸೂಚಿಸುತ್ತದೆ.[49] ಈ ವಿಚಾರವನ್ನು ಆಧುನಿಕ ಸರ್ಕಾರಿ ಅಧಿಕಾರಿಯು ಒಂದು ದಾಸ್ತಾವೇಜಿಗೆ ಮುದ್ರೆ ಒತ್ತುವ ದೃಷ್ಟಾಂತದಿಂದ ವಿವರಿಸಬಹುದು. ಆ ಮುದ್ರೆಯು ಕಾಗದದ ಮೇಲೆ "ಮೂಲ-ಆಕಾರ"ದ ಒಂದು ಸೂಚಕರೂಪದ ಅಚ್ಚಿನ ರೀತಿಯಲ್ಲಿರುತ್ತದೆ. ಪೌಲನ ಹೋಲಿಕೆ/ವ್ಯತ್ಯಾಸ ತೋರಿಸುವಿಕೆಯಲ್ಲಿ, ಆದಾಮನು "ಸೂಚಕರೂಪ" ಮತ್ತು ಕ್ರಿಸ್ತನು "ಮೂಲರೂಪ."

ಕೆಲವು ರೀತಿಗಳಲ್ಲಿ, ಸೂಚಕರೂಪ ಮತ್ತು ಮೂಲರೂಪ ಏಕರೀತಿಯಾಗಿರುತ್ತವೆ. ಮುದ್ರೆ ಮತ್ತು ಅದರ ಅಚ್ಚು ಏಕ ರೀತಿಯಾಗಿರುವ ಹಾಗೇಯೇ, ಕೆಲವು ವಿಧದಲ್ಲಿ ಆದಾಮ ಮತ್ತು ಕ್ರಿಸ್ತನು ಒಂದೇ ರೀತಿಯಾಗಿದ್ದಾರೆ. ಇಬ್ಬರನ್ನೂ "ಶಿರಸ್ಸುಗಳು" ಎಂದು ಯೋಚಿಸಬಹುದು: ಆದಾಮನು ಮಾನವ ಜನಾಂಗದ ಶರೀರ ಸಂಬಂಧವಾದ ಶಿರಸ್ಸಾಗಿದ್ದನು, ಮತ್ತು ಕ್ರಿಸ್ತನು ದೇವರ ಕುಟುಂಬವಾಗಿರುವ ಸಭೆಗೆ ಶಿರಸ್ಸಾಗಿದ್ದಾನೆ (1 ತಿಮೊಥೆ 3:15). ಇಬ್ಬರೂ ಇಡೀ ಮಾನವರ ಮೇಲೆ ಪ್ರಭಾವ ಬೀರಿದಂಥ ಒಂದು ಕೃತ್ಯವನ್ನು ಮಾಡಿದವರಾಗಿದ್ದಾರೆ: ಆದಾಮನು ತೋಟದಲ್ಲಿ ಮಾಡಿದ ಪಾಪ ಮತ್ತು ಶಿಲುಬೆಯ ಮೇಲೆ ಕ್ರಿಸ್ತನ ಮರಣ.

ಹೇಗೂ, ಇತರ ರೀತಿಗಳಲ್ಲಿ, ಒಂದು ಸೂಚಕರೂಪ ಮತ್ತು ಅದರ ಮೂಲರೂಪ

ಒಂದೇ ರೀತಿಯಾಗಿರುವದಿಲ್ಲ; ಮೂಲರೂಪವು ಸೂಚಕರೂಪದ *ತದ್ವಿರುದ್ಧವಾಗಿರಬಲ್ಲದು* (ತಲೆಕೆಳಗಾಗಿ). ಇದು ಸರ್ಕಾರಿ ಅಧಿಕೃತ ಮುದ್ರೆಯ ವಿಷಯದಲ್ಲಿ ಸತ್ಯವಾಗಿರುತ್ತದೆ, ಅದು ಕಾಗದದ ಮೇಲೆ ಹಿಂಬರಿಕೆಯಲ್ಲಿ ಅಚ್ಚನ್ನು ಒತ್ತುತ್ತದೆ. ಆದಾಮ ಮತ್ತು ಕ್ರಿಸ್ತನ ವಿಷಯದಲ್ಲಿ ಸಹ ಇದು ಹಾಗೆಯೇ ಇರುತ್ತದೆ.

*Tupos*ನ್ನು ಅನುವಾದಿಸಲು ವಿವಿಧ ಬಗೆಯ ಪದಗಳನ್ನು ಉಪಯೋಗಿಸಬಹುದು, ಯಾವವೆಂದರೆ "ಉದಾಹರಣೆ," "ನಮೂನೆ" (NIV), "ಸಾದೃಶ್ಯ" (KJV), ಮತ್ತು "ಪೂರ್ವಛಾಯೆ" (ನೋಡಿರಿ NEB). Eugene Peterson 14ನೇ ವಚನದ ಅಂತ್ಯದ ಮೇಲೆ ಈ ಭಾವಾರ್ಥವನ್ನು/ವ್ಯಾಖ್ಯಾನವನ್ನು ಬರೆದನು: "ನಮ್ಮನ್ನು ಈ ಸ್ಥಿತಿಯೊಳಗೆ ಬರಮಾಡಿದ ಆದಾಮನು . . . ಅದರೊಳಗಿಂದ ನಮ್ಮನ್ನು ಹೊರಗೆ ನಡಿಸುವವನೊಬ್ಬನಿಗೆ ಮುಂಗುರುತಾಗಿದ್ದಾನೆ" (MSG).

ಪೌಲನು ಆದಾಮ ಮತ್ತು ಕ್ರಿಸ್ತನ ನಡುವೆ 1 ಕೊರಿಂಥ 15ನೇ ಅಧ್ಯಾಯದಲ್ಲಿ ಸಹ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಮಾಡುತ್ತಾನೆ, ಅದು ಪುನರುತ್ಥಾನದ ಅಧ್ಯಾಯವಾಗಿದೆ:

> ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು (1 ಕೊರಿಂಥ 15:21, 22).
>
> ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು ಬರೆದದೆಯಲ್ಲಾ. ಕಡೇ ಆದಾಮನೋ ಬದುಕಿಸುವ ಆತ್ಮನು (1 ಕೊರಿಂಥ 15:45).
>
> ಮೊದಲನೆಯ ಮನುಷ್ಯನು ಭೂಮಿಯೊಳಗಿಂದ ಉತ್ಪನ್ನನಾಗಿ ಮಣ್ಣಿಗೆ ಸಂಬಂಧಪಟ್ಟವನು; ಎರಡನೆಯ ಮನುಷ್ಯನು ಪರಲೋಕದಿಂದ ಬಂದವನು (1 ಕೊರಿಂಥ 15:47).
>
> ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳಬೇಕು (1 ಕೊರಿಂಥ 15:49).

ಪೌಲನು ಮೊದಲ ಆದಾಮನನ್ನು ನಾಶನಕ್ಕೆ ನೇಮಕವಾದ ಭೂಲೋಕದ ಕುಟುಂಬದ ಶಿರಸ್ಸಾಗಿ ಚಿತ್ರಿಸಲ್ಪಟ್ಟಿದ್ದರೆ, "ಕಡೇ ಆದಾಮನು" (ಕ್ರಿಸ್ತನು) ಜೀವಕ್ಕಾಗಿ ನೇಮಿಸಲ್ಪಟ್ಟಿರುವ ಒಂದು ಆತ್ಮೀಕ ಕುಟುಂಬಕ್ಕೆ (ಸಭೆಗೆ) ಶಿರಸ್ಸೆಂದು ಎಂದು ಚಿತ್ರಿಸಲ್ಪಟ್ಟಿದ್ದಾನೆ.

## ಆದಾಮ ಮತ್ತು ಕ್ರಿಸ್ತನ ನಡುವಿನ ವ್ಯತ್ಯಾಸ (5:15-17)

**[15]ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚುಕಡಿಮೆ ಉಂಟು. ಹೇಗಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ ಎಲ್ಲಾ ಮನುಷ್ಯರಿಗೆ ಹೇರಳವಾಗಿ ಸಿದ್ಧವಾಗಿರುವದು ಮತ್ತೂ ನಿಶ್ಚಯವಲ್ಲವೇ. [16]ಇದಲ್ಲದೆ ಪಾಪ ಮಾಡಿದ ಒಬ್ಬನಿಂದಲೇ ದುಷ್ಫಲ ಬಂದಂತೆ ಈ ವರವು ಬರಲಿಲ್ಲ; ಹೇಗಂದರೆ ಒಬ್ಬನೇ ಮನುಷ್ಯನ ಪಾಪದ ದೆಸೆಯಿಂದ ಸಾಯಬೇಕೆಂಬ ನಿರ್ಣಯವು ಉಂಟಾಯಿತು, ಆದರೆ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ ಉಂಟಾಗಿ ಅವರನ್ನು ನೀತಿವಂತರೆಂದು ನಿರ್ಣಯಿಸುವಂಥ ದಾಗಿದೆ. [17]ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

ಆದಾಮ ಮತ್ತು ಕ್ರಿಸ್ತನು ಹೇಗೆ ಒಂದೇ ರೀತಿಯಾಗಿದ್ದಾರೆಂಬದನ್ನು ಪೌಲನು ಮೊದಲು ಹೇಳುತ್ತಾನೆಂದು ನಾವು ನಿರೀಕ್ಷಿಸಬಹುದು, ಆದರೆ ಆತನು ಮೊದಲು ಅವರು ಹೇಗೆ *ವ್ಯತ್ಯಾಸವಾದವರೆಂಬದನ್ನು* ತಿಳಿಸುತ್ತಾನೆ. 5:15-17 ರಲ್ಲಿ, ಪೌಲನು ಅಜಗಜಾಂತರದ ಪದಗಳನ್ನು, ಉದಾಹರಣೆಗೆ "ಹೆಚ್ಚುಕಡಿಮೆ ಉಂಟು," "ಮತ್ತೂ. . . ." ಹಾಗೂ "ಇದಾದರೋ" ಎಂಬವುಗಳನ್ನು ಉಪಯೋಗಿಸುತ್ತಾನೆ. ಇಲ್ಲಿ ಹೇಗಿರುತ್ತ ದೆಂದರೆ- ಪೌಲನು ಆದಾಮನ ಕುರಿತು ಆತನು "ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ" ಎಂದು ಹೇಳಿದ ತಕ್ಷಣ-ತನ್ನ ವಾಚಕರು ಇವರಿಬ್ಬರೂ ಎಲ್ಲಾ ವಿಧಗಳಲ್ಲಿಯೂ ಏಕರೀತಿಯಾದವರೆಂದು ಭಾವಿಸಿಕೊಡಾರೆಂದು ಹೆದರಿ ಅವಸರವಾಗಿ ವಿಷಯ ಹಾಗಿರುವದಿಲ್ಲವೆಂಬದನ್ನು ವಿವರಿಸಲು ಮುಂದಾದಂತೆ ತೋರುತ್ತದೆ.

ವ್ಯತ್ಯಾಸವು ಆದಾಮ ಮತ್ತು ಕ್ರಿಸ್ತನನ್ನು ಬಣ್ಣಿಸುವ ಕೃತ್ಯದ ಮೇಲೆ ಗಮನಹರಿಸುತ್ತದೆ: ಆದಾಮನ ಪಾಪ ಮತ್ತು ಕ್ರಿಸ್ತನ ಯಜ್ಞ. ಮೊದಲನೆಯದು ಸ್ವಾರ್ಥಚಿತ್ತದ್ದಾಗಿದ್ದರೆ, ಎರಡನೆಯದು ಸ್ವಾರ್ಥವನ್ನು ನಿರಾಕರಿಸುವ ಕೃತ್ಯವಾಗಿತ್ತು.

**ವಚನ 15.** ಪೌಲನು ಹೀಗೆ ಆರಂಭಿಸುತ್ತಾನೆ, **ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚುಕಡಿಮೆ ಉಂಟು.** "ಕೃಪಾದಾನ" ಎಂಬುದು χάρισμα (*charisma*) ಎಂಬದರ ಅನುವಾದವಾಗಿದೆ, ಅದು "ಕೃಪೆ" (χάρις, *charis*) ಎಂಬ ಪದಕ್ಕೆ ಸಂಬಂಧಪಟ್ಟಿದೆ. "ಕೃಪಾದಾನವು" ಒಂದು ರೀತಿಯಲ್ಲಿ ಅಧಿಕವಾದದ್ದು, ಯಾಕೆಂದರೆ ವರ (ಉಡುಗೋರೆ) ಎಂದರೆ ಅದೊಂದು ಸ್ವೀಕರಿಸುವವನು ಯೋಗ್ಯನಲ್ಲದಿದ್ದರೂ ಪಡೆದುಕೊಳ್ಳುವ ಒಂದು ಸಂಗತಿಯಾಗಿದೆ. "ಅಪರಾಧ" παράπτωμα (*paraptōma*) ಎಂಬ ಪದವು "ಎಡವಿ ಬೀಳುವ ರೀತಿಯಲ್ಲಿ ಒಂದು ತಪ್ಪು ಹೆಜ್ಜೆಯನ್ನಿಡುವದನ್ನು" ಸೂಚಿಸುತ್ತದೆ. ಅದನ್ನು "ಉಲ್ಲಂಘನೆ," "ಮೀರುವಿಕೆ," ಅಥವಾ

"ತಪ್ಪುಮಾಡುವಿಕೆ" ಎಂದು ಸಹ ಅನುವಾದಿಸಬಹುದು.[50] ಪೌಲನ ಮುಖ್ಯ ಒತ್ತು ಇದ್ದದ್ದು ದೇವರ (ಶಿಲುಬೆಯ ಮೇಲೆ ಕೇಂದ್ರಿಕೃತವಾದ) ವರದಾನವು ಆದಾಮನ ಅಪರಾಧದ *"ರೀತಿ ಆಗಿರುವದಿಲ್ಲ" ಎಂಬದೇ.* NEB ಯಲ್ಲಿ ಹೀಗಿದೆ, "ದೇವರ ಕೃಪೆಯ ಕೃತ್ಯವು ಆದಾಮನ ಎಲ್ಲಾ ತಪ್ಪುಕೃತ್ಯವನ್ನು ನಿವಾರಿಸುವಂಥದಾಗಿದೆ."

ಮುಂದೆ, ಪೌಲನು ತನ್ನ ಮನಸ್ಸಿನಲ್ಲಿ ಏನು ಹೊಂದಿದ್ದನೆಂಬದಕ್ಕೆ ಒಂದು ಉದಾಹರಣೆ ಕೊಡುತ್ತಾನೆ. ಒಂದು ಕಡೆಯಲ್ಲಿ, **ಆ ಒಬ್ಬನ** (ಆದಾಮ) **ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತರು..** "ಎಲ್ಲಾ" ಎಂಬದಕ್ಕೆ ಗ್ರೀಕ್ ಪದವು πολύς (*polus*) ಎಂದಿದ್ದು ಅದರರ್ಥವು "ಬೃಹತ್ ಸಂಖ್ಯೆ" ಎಂದಾಗುತ್ತದೆ. ಎಷ್ಟು ಬೃಹತ್ ಎಂಬುದು ಸನ್ನಿವೇಶದ ಮೇಲೆ ಅವಲಂಭಿತವಾಗಿರುತ್ತದೆ. ಈ ವಾಕ್ಯಭಾಗದಲ್ಲಿ, "ಎಲ್ಲಾ" ಎಂಬುದು "ಅನೇಕರು" ಎಂಬದರೊಂದಿಗೆ ಅದಲುಬದಲಾಗಿ ಉಪಯೋಗಿಸಲ್ಪಟ್ಟಿದೆ (5:18). ಆದಾಮನ ಪಾಪದ ಒಂದು ದುಷ್ಪರಿಣಾಮವೆಂದರೆ *ಎಲ್ಲರೂ* ಶಾರೀರಿಕವಾಗಿ ಸಾಯುತ್ತಾರೆ. "ಸ್ವಾಭಾವಿಕವಾದ ಪರಿಣಾಮವಾಗಿ ಬಂದ ಮರಣವು ಮನುಷ್ಯರಿಗೆ ಸಹಜವಾಯಿತು" (Phillips). ಇನ್ನೊಂದು ದುಷ್ಪರಿಣಾಮವೆಂದರೆ ಲೋಕದೊಳಗೆ ಪಾಪವು ಪರಿಚಯಿಸಲ್ಪಟ್ಟಿತು, ಅದರೊಂದಿಗೆ ಅದರ ಎಲ್ಲಾ ದುರಂತಕರವಾದ ವಿನಾಶತೆಗಳು ಸಹ ಪರಿಚಯಿಸಲ್ಪಟ್ಟಿತು.

ಒಂದು ಕಡೆಯಲ್ಲಿ, **ದೇವರ ಕೃಪೆಯೂ ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ ಎಲ್ಲಾ ಮನುಷ್ಯರಿಗೆ ಹೇರಳವಾಗಿ ಸಿದ್ಧವಾಗಿರುವದು ಮತ್ತೂ ನಿಶ್ಚಯವಲ್ಲವೇ.** ದೇವರು ನೀಡಿದ ಯೇಸುವಿನ "ವರದಾನವು" ಆದಾಮನ ಪಾಪದ ಪರಿಣಾಮವನ್ನು ಹಿಂದಕ್ಕೆ ತಿರುಗಿಸಿಬಿಟ್ಟಿತು. ಎಲ್ಲಾ ಜನರು ("ಅನೇಕರು") ಸತ್ತವರಿಂದ ಎಬ್ಬಿಸಲ್ಪಡುವರು (ಯೋಹಾನ 5:28, 29). ಹೇಗೂ, ದೇವರ "ವರದಾನವು" "ಮತ್ತೂ" ಹೆಚ್ಚಿನದನ್ನು ಮಾಡುತ್ತದೆ. ಜನರು ಸತ್ತವರೊಳಗಿಂದ ಎಬ್ಬಿಸಲ್ಪಡುವದು ಮಾತ್ರವಲ್ಲದೆ, ಅವರಿಗೆ ಆತ್ಮೀಕ ದೇಹಗಳು ಸಹ ಕೊಡಲ್ಪಡುವವು (1 ಕೊರಿಂಥ 15:44). ಅಷ್ಟುಮಾತ್ರವಲ್ಲದೆ, ನೀತಿವಂತರು "ನಿತ್ಯಜೀವಕ್ಕೆ ಬಾಧ್ಯರಾಗುವರು" (ಮತ್ತಾಯ 19:29). ಇದಿಷ್ಟು ಸಹ ಅಲ್ಲದೆ, ರಕ್ಷಿಸಲ್ಪಟ್ಟವರು ಆದಾಮನಿಂದ ಕಳೆದುಕೊಂಡದ್ದಕ್ಕಿಂತಲೂ ಉತ್ತಮವಾದ ಒಂದು ಪರದೈಸಿನಲ್ಲಿ ಕೊನೆಯಿಲ್ಲದೆ ವಾಸಿಸುವರು (ಪ್ರಕಟನೆ 21; 22). "ಹಾಗಾದರೆ ಲೋಕದ ನಿರೀಕ್ಷೆಯು ಪೌಲನು ಹೇಳುವಂಥ 'ಮತ್ತೂ' ಎಂಬದರಲ್ಲಿಯೇ ಇರುತ್ತದೆ."[51]

ಇದೆಲ್ಲವೂ ಒಂದು ಕೃಪಾದಾನವಾಗಿತ್ತು; ಆದಾಮನು ಮಾಡಿದ್ದನ್ನು ಅಳಿಸಿಹಾಕಬೇಕೆಂಬ ಯಾವ ನಿರ್ಬಂಧವೂ ಕರ್ತನಿಗೆ ಇರಲಿಲ್ಲ. ಆದ್ದರಿಂದ ಪೌಲನು "ದೇವರ *ಕೃಪೆಯೂ* ಯೇಸು ಕ್ರಿಸ್ತನ . . . *ಕೃಪೆಯಿಂದ* ಸಿಕ್ಕುವ *ವರ"* ದ ಕುರಿತು ಮಾತಾಡುತ್ತಾನೆ (ಒತ್ತಿ ಹೇಳಿದ್ದು ನನ್ನದು). "ಕೃಪೆ" ಎಂಬದಕ್ಕಾಗಿರುವ ಪದವು (ಎರಡು ಸಾರಿ ಉಪಯೋಗಿಸಲ್ಪಟ್ಟಿದೆ) *charis*. "ವರ" ಎಂಬುದು ಈ ಮುಂಚಿನ ವಚನದಲ್ಲಿದ್ದ ಪ್ರಕಾರ, *charisma* ಎಂಬದರಿಂದ ಬಂದದ್ದಲ್ಲ, ಆದರೆ δωρεά (*dōrea*) ಎಂಬದರಿಂದ ಬಂದದ್ದು. ಪೌಲನು ತಾನು ಹೇಳಬೇಕಾದ ಅಂಶವನ್ನು ತಪ್ಪಿಸಬಾರದೆಂಬದಕ್ಕಾಗಿ ವಿವಿಧ ಬಗೆಯ ಪದಗಳನ್ನು ಬಳಕೆ ಮಾಡುತ್ತಾನೆ: ದೇವರು ನಮಗಾಗಿ ಮಾಡುವದು ಒಂದು

*ವರದಾನ,* ಆತನ ಕೃಪೆಯ ಒಂದು ವ್ಯಕ್ತಗೊಳಿಸುವಿಕೆ ಆಗಿದೆ.

**ವಚನ 16.** ಪೌಲನು ಆದಾಮನ ಕೃತ್ಯ ಮತ್ತು ಕ್ರಿಸ್ತನ ಕೃತ್ಯದ ನಡುವಿನ ವ್ಯತ್ಯಾಸವನ್ನು ಇನ್ನಷ್ಟು ವಿಸ್ತರಿಸುತ್ತಾನೆ: **ಇದಲ್ಲದೆ ಪಾಪ ಮಾಡಿದ ಒಬ್ಬನಿಂದಲೇ** [ಆದಾಮ] **ದುಷ್ಫಲ ಬಂದಂತೆ ಈ** [ಫಲವು] **ವರವು**[52] [ಯೇಸುವಿನಿಂದ] **ಬರಲಿಲ್ಲ.** ಅಪೊಸ್ತಲನು ಪುನಃ ಇಲ್ಲಿ ದೇವರ ವರವು ಕೇವಲ ಆದಾಮನ ಪಾಪಕ್ಕೆ ಪ್ರತಿರೋಧಿಯಾಗಿ ಮಾತ್ರವೇ ಇರುವದಕ್ಕಿಂತಲೂ "ಮತ್ತೂ" ಹೆಚ್ಚಿನದ್ದನ್ನು ಮಾಡುತ್ತದೆಂಬದನ್ನು ತೋರಿಸಿ ಕೊಡುತ್ತಾನೆ.

ಪೌಲನು ಹೇಳಿದ್ದೇನೆಂದರೆ **ಹೇಗಂದರೆ ಒಬ್ಬನೇ ಮನುಷ್ಯನ ಪಾಪದ** (ಆದಾಮನ ಪಾಪ) **ದೆಸೆಯಿಂದ ಸಾಯಬೇಕೆಂಬ ನಿರ್ಣಯವು ಉಂಟಾಯಿತು.** ಪೌಲನು ರೋಮಾಪುರ ಪತ್ರಿಕೆಯಲ್ಲಿ ಆಗಾಗ ಮಾಡಿದ ಪ್ರಕಾರವೇ ಇಲ್ಲಿಯೂ ನ್ಯಾಯಾಲಯದ ಕೋಣೆಯ ಭಾಷೆಯನ್ನು ಉಪಯೋಗಿಸಿದನು. "ನಿರ್ಣಯ" ಎಂಬುದು κρίμα (*krima*) ಎಂಬ ಪದದಿಂದ ಬಂದದ್ದು, ಅದು "ತೀರ್ಪು" ಸೂಚಿಸುತ್ತದೆ (McCord). "ಸಾಯಬೇಕೆಂಬ ನಿರ್ಣಯ" ಎಂಬುದು κατάκριμα (*katakrima*) ಎಂಬ ಪದದ ಅನುವಾದವಾಗಿದೆ, ಅದು *krima* ಎಂಬದರ ಬಲಗೊಂಡ ರೂಪವಾಗಿದ್ದು ತೀರ್ಪಿನ ಫಲಿತವಾಗಿ ಘೋಷಿಸಲಾದ "ದಂಡನೆ" ಯನ್ನು ಸೂಚಿಸುತ್ತದೆ. *Katakrima* ಎಂಬುದು ಶಾರೀರಿಕ ಮರಣದ ಮೇಲೆ ವಿಶೇಷ ಒತ್ತಿನೊಂದಿಗೆ ಮಾನವ ಜನಾಂಗದ ಮೇಲೆ ಬಂದಂಥ ಎಲ್ಲಾ ದುಷ್ಪರಿಣಾಮವನ್ನು ಸೂಚಿಸುತ್ತದೆ.[53] ಒಂದೇ ಒಂದು ಪಾಪದ ಫಲಿತವಾಗಿ ಇದುವರೆಗೂ ಜೀವಿಸಿದ ಎಲ್ಲರಿಗೂ -ಪುರುಷರು, ಸ್ತ್ರೀಯರು, ಮತ್ತು ಮಕ್ಕಳು—ಶಾರೀರಿಕ ಮರಣವುಂಟಾಯಿತು![54]

ಪೌಲನು ಮುಂದುವರೆಸುತ್ತಾನೆ, **ಆದರೆ ದೇವರ ಕೃಪಾದಾನವು** [*charisma*] **ಅನೇಕರ ಅಪರಾಧಗಳ ಕಾರಣದಿಂದ ಉಂಟಾಗಿ ಅವರನ್ನು ನೀತಿವಂತರೆಂದು ನಿರ್ಣಯಿಸುವಂಥದಾಗಿದೆ.** "ಅನೇಕರ ಅಪರಾಧಗಳು" ಎಂಬ ಮಾತಿನ ತಾತ್ಪರ್ಯ ವೇನೆಂದರೆ ಒಂದು ಅಪರಾದವು ಅಷ್ಟೊಂದು ಭಯಂಕರವಾಗಿ ಮಾನವರ ಮೇಲೆ ದುಷ್ಪರಿಣಾಮ ಬೀರಿರುವಾಗ, "ಅನೇಕರ ಅಪರಾಧಗಳ" ಸಂಪೂರ್ಣ ಘೋರತೆಯನ್ನು ಗ್ರಹಿಸಿಕೊಳ್ಳುವದಕ್ಕೂ ಆಗದು: ಮೊದಲ ಪಾಪದ ನಂತರದಲ್ಲಿ ಲಕ್ಷಾಂತರ ಕೋಟಿ ಪಾಪಗಳು ನಡೆಸಲ್ಪಟ್ಟಿವೆ. Lard ಹೀಗೆ ಬರೆದನು, "ಯಾವ ಮನುಷ್ಯನೂ ಪಾಪದ ಅಪಾರತೆಯು ಎಷ್ಟೆಂಬದನ್ನು ಕಲ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈ ವೇಗದಲ್ಲಿ, ಐವತ್ತು ವರ್ಷಗಳ ವರೆಗೆ ಒಂದೇ ಒಂದು ಜೀವಿತದಲ್ಲಿನ ಪಾಪಗಳಿಗೆಲ್ಲಾ ಎಷ್ಟು ದಂಡನೆ ಸಿಕ್ಕರೆ ಸಮರ್ಪಕವಾಗಿರುತ್ತದೆ?"[55]

ಆ "ಒಂದೇ ಜೀವಿತವನ್ನು" ಗತಕಾಲದಲ್ಲಿ ಜೀವಿಸಿರುವ ಹಾಗೂ ಈಗಿರುವ 700 ಕೋಟಿಗೂ ಅಧಿಕ ಜನರ ಜೀವಿತಗಳೊಂದಿಗೆ ಹೋಲಿಸಿರಿ-ಮತ್ತು ಫಲಿತವು ಮಾನವ ಗ್ರಹಿಕೆಗೆ ನಿಲುಕಲಾರದ್ದಾಗಿರುತ್ತದೆ. ಆದ್ದರಿಂದ ಈ ಪ್ರಶ್ನೆಯನ್ನು ಕೇಳಲೇಬೇಕು: ಆದಾಮನ ಪಾಪವನ್ನಷ್ಟೇ ಅಲ್ಲದೆ "ಅನೇಕರ ಅಪರಾಧಗಳ" ದುಷ್ಪರಿಣಾಮವನ್ನು ಸಹ ನೀಗಿಸುವದಕ್ಕೆ ದೇವರ "ವರದಾನವು ಸಾಕಾದದ್ದಾಗಿತ್ತೋ"?

ಪೌಲನ ಉತ್ತರವು ಪ್ರತಿಧ್ವನಿಸುವ ರೀತಿಯಲ್ಲಿ ದೃಢವಾಗಿತ್ತು. ಆತನು

ಹೇಳಿದ್ದೇನೆಂದರೆ ಕೃಪಾವರವು "ನೀತಿವಂತರೆಂಬ ನಿರ್ಣಯ" ವನ್ನುಂಟು ಮಾಡಿತು ಎಂಬದಾಗಿ. ಪುನಃ, ಆತನು ಕಾನೂನಿನ ಭಾಷೆಯನ್ನು ಉಪಯೋಗಿಸುತ್ತಾನೆ. NEB ಯಲ್ಲಿ "ಕೃಪೆಯ ಕಾರ್ಯ . . . ಖುಲಾಸೆಗೊಳಿಸುವ ತೀರ್ಪಾಗಿ ಕೊಡಲ್ಪಟ್ಟಿತು." ಬೇರೆ ಮಾತುಗಳಲ್ಲಿ ಹೇಳುವದಾದರೆ, ಯೇಸುವಿನ ಮೂಲಕ, ಆದಾಮನ ಮತ್ತು ಆತನ ಎಲ್ಲಾ ಸಂತತಿಯವರ ಮೇಲೆ ಕೊಡಲಾದ ತೀರ್ಪು ರದ್ದುಗೊಳಿಸಲ್ಪಟ್ಟಿತು.

ಇದು ಶಾರೀರಿಕ ಮರಣದ ವಿಷಯದಲ್ಲಿ ಸಹ ಸತ್ಯವಾಗಿರುತ್ತದೆ. ನಾವು ಈಗಲೂ ಸಾಯುತ್ತೇವೆ (ಇಬ್ರಿಯ 9:27); ಆದರೆ, ಯೇಸುವಿನ ಕಾರಣದಿಂದಾಗಿ, ಮರಣವು ಒಂದು ಶಾಶ್ವತ ಸ್ಥಿತಿಯಾಗಿರುವದಿಲ್ಲ (ಯೋಹಾನ 5:28, 29). ಇದು ಆತ್ಮೀಕ ಮರಣದ ವಿಷಯದಲ್ಲಿ ಸಹ ಅಷ್ಟೇ ಸತ್ಯವಾದದ್ದು. ಈ ವಾಕ್ಯಭಾಗದಲ್ಲಿ ಪೌಲನ ಮುಖ್ಯ ಒತ್ತು, ದೇವರ ಕೃಪಾದಾನವು ಎಲ್ಲದ್ದಕ್ಕೂ ಸಾಕಾದದ್ದು ಎಂಬದರ ಮೇಲೆಯೇ ಇರುತ್ತದೆಂಬದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು, ಆ ವಿಚಾರವು "ಮತ್ತೂ ನಿಶ್ಚಯ" ಎಂಬ ಪದದಿಂದ ವ್ಯಕ್ತಗೊಳಿಸಲ್ಪಟ್ಟಿರುತ್ತದೆ. ರೋಮಾಪುರ ಪತ್ರಿಕೆಯಲ್ಲಿ, "ನೀತಿನಿರ್ಣಯ" (δικαίωμα, *dikaiōma*) ಎಂಬುದು ದೇವರ ದೃಷ್ಟಿಯಲ್ಲಿ ನೀತಿಯುಳ್ಳವರು ಎಂದು ಎಣಿಸಲ್ಪಡುವದನ್ನು ಸೂಚಿಸುತ್ತದೆ. ಅದೇ ರೀತಿಯಲ್ಲಿ, ಈ ವಾಕ್ಯಭಾಗದಲ್ಲಿ, *dikaiōma* ಎಂಬುದರಲ್ಲಿ ವರದಾನದ ಆತ್ಮೀಕ ಪ್ರಯೋಜನಗಳು ಸಹ ಸೇರಿರುತ್ತವೆ.[56] ಕ್ರಿಸ್ತನ ಯಜ್ಞದಲ್ಲಿರುವ ನೀತಿನಿರ್ಣಯಗೊಳಿಸುವ ಶಕ್ತಿಯನ್ನು ಗ್ರಹಿಸಿಕೊಳ್ಳಲಸಾಧ್ಯವಾಗಿರುತ್ತದೆ, "ಅದು ಹೇಳಲಿಕ್ಕಾದಷ್ಟು ಎಲ್ಲಾ ಮಾನವ ಜೀವಿತಗಳ ಸಂದರ್ಭಗಳಲ್ಲಿ ನಡೆಸಲಾದ ಅಸಂಖ್ಯಾತ ಪಾಪಗಳ ಒಟ್ಟಾರೆ ಶಕ್ತಿಯನ್ನು ವಿಶ್ವಾಸಿಗಳಿಗಾಗಿ ನಿರ್ಥಕಗೊಳಿಸುವದಾಗಿದೆ."[57]

**ವಚನ 17.** ಪೌಲನು ಪುನಃ ದೇವರ ವರದಾನದ ಆತ್ಮೀಕ ಪರಿಣಾಮಗಳ ಮೇಲೆ ಒತ್ತುಕೊಡುತ್ತಾ ಆರಂಭಿಸುತ್ತಾನೆ. ಆತನು ಹೇಳಿದ್ದೇನೆಂದರೆ **ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ** (5:14ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ). NEB ಯಲ್ಲಿ "ಮರಣವು ಒಬ್ಬನೇ ಪಾಪಿಯ ಮೂಲಕವಾಗಿ ತನ್ನ ಆಳಿಕೆಯನ್ನು ಸ್ಥಾಪಿಸಿತು" ಎಂದಿದೆ. ಪೌಲನು ನಂತರ ಈ ವಿರುದ್ಧ ಹೋಲಿಕೆಯನ್ನು ಮಾಡುತ್ತಾನೆ: **ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

ವಚನ 17 ರಲ್ಲಿ ಕನಿಷ್ಠ ಮೂರು ವಿರುದ್ಧ ಹೋಲಿಕೆಗಳು ವ್ಯಕ್ತಪಡಿಸಲ್ಪಟ್ಟಿವೆ ಅಥವಾ ಭಾವಾರ್ಥ ಕೊಡಲ್ಪಟ್ಟಿವೆ. ಮೊದಲನೆಯದ್ದೇನೆಂದರೆ ವರದಾನದ ಫಲಿತವು ಅಪರಾಧದ ಫಲಕ್ಕಿಂತ "ಮತ್ತೂ (ನಿಶ್ಚಯ)" ಹೆಚ್ಚಿನದ್ದಾಗಿದೆ. ಇದು "ಧಾರಾಳವಾಗಿ" (περισσεία, *perisseia*) ಎಂಬ ಪದದಿಂದ ಮತ್ತಷ್ಟು ದೃಢಪಡಿಸಲ್ಪಡುತ್ತದೆ. ಈ "ಮತ್ತೂ" ಎಂಬ ಫಲಿತವು ನೀತಿಯೆಂಬ ವರ [*dōrea*] ಎಂಬ ಪದಗಳಲ್ಲಿ ವ್ಯಕ್ತಗೊಳಿಸಲ್ಪಟ್ಟಿರುತ್ತದೆ. "ನೀತಿವಂತಿಕೆ" (δικαιοσύνη, *dikaiosunē*) ಎಂಬುದು "ನೀತಿವಂತರೆಂಬ ನಿರ್ಣಯ" ಎಂಬ ಪದಗಳ ಕುಟುಂಬಕ್ಕೆ ಸೇರಿದ್ದಾಗಿದೆ. ಅದು ದೇವರ ಮುಂದೆ ನೀತಿವಂತರೆಂದು ಎಣಿಸಲ್ಪಡುವದನ್ನು ಸೂಚಿಸುತ್ತದೆ.

ಎರಡನೆಯ ವಿರುದ್ಧ ಹೋಲಿಕೆಯು ಪರೋಕ್ಷವಾದ ಭಾವಾರ್ಥದಲ್ಲಿರುತ್ತದೆ. ಆದಾಮನ ಅಪರಾಧದ ಒಂದು ಫಲದ ವಿಷಯದಲ್ಲಿ ನಮಗೆ ಯಾವ ಆಯ್ಕೆಯೂ ಇಲ್ಲ: ನಾವು ಹುಟ್ಟಿರುವದಾದರೆ, ನಾವು ಶಾರೀರಿಕವಾಗಿ ಸಾಯುವೆವು. (ಮರಣವನ್ನು ತಪ್ಪಿಸಿಕೊಳ್ಳುವ ಏಕೈಕ ಜನರೆಂದರೆ ಯೇಸು ಕ್ರಿಸ್ತನು ಭೂಮಿಗೆ ಹಿಂದಿರುಗಿ ಬರುವಾಗ ಜೀವಂತವಾಗಿರುವವರು; 1 ಥೆಸಲೋನಿಕ 4:15-17.) ಹೇಗೂ, ನಮಗೆ ದೇವರ ವರದಾನದ ಅತ್ಯಂಥ ಪ್ರಾಮುಖ್ಯವಾದ ಫಲಿತದ ವಿಷಯದಲ್ಲಿ ಆಯ್ಕೆಯು ಇರುತ್ತದೆ: ನೀತಿವಂತರೆಂದು ಎಣಿಸಲ್ಪಡುವದು. ಆದುದರಿಂದ, ಪೌಲನು "ಧಾರಾಳವಾದ ಕೃಪಾದಾನವನ್ನೂ ನೀತಿಯೆಂಬ ವರವನ್ನೂ *ಹೊಂದಿದವರ"* ಬಗ್ಗೆ ಮಾತಾಡುತ್ತಾನೆ (ಒತ್ತಿ ಹೇಳಿದ್ದು ನನ್ನದು). ಯಾವದೇ ವರವನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು. ದೇವರ ವರವನ್ನು "ವಿಧೇಯತೆಯುಳ್ಳ ನಂಬಿಕೆಯ" (ರೋಮಾ 1:5; 16:26) ಮೂಲಕ ಅಂಗೀಕರಿಸುವವರು ("ಹೊಂದುವವರು") ಮಾತ್ರವೇ ಆ ವರದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ.

ಮೂರನೆಯ ವಿರುದ್ಧ ಹೋಲಿಕೆ ಯಾವದೆಂದರೆ ಅದು ಅನಿರೀಕ್ಷಿತವಾದದ್ದಾಗಿದೆ. ವಚನ 17ರ ಮೊದಲ ಭಾಗದಲ್ಲಿ, ಪೌಲನು *ಮರಣದ* ಆಳ್ವಿಕೆಯ ಬಗ್ಗೆ ಮಾತಾಡಿದನು. ನಾವು ಮುಂದಕ್ಕೆ ಸಾಗಿದಂತೆ, ನಾವು ಕ್ರಿಸ್ತನ ಮೂಲಕ *ಜೀವವು* ಆಳುತ್ತದೆ ಎಂದು ಓದಲಿದ್ದೇವೆಂದು ನಿರೀಕ್ಷಿಸಬಹುದು. ಬದಲಾಗಿ, ಪೌಲನು ಹೇಳಿದ್ದೇನೆಂದರೆ ವರದಾನವನ್ನು ಹೊಂದುವವರು "ಜೀವಭರಿತರಾಗಿ ಆಳುವರು" ಎಂಬದಾಗಿ. ದಾಸರು (ಪಾಪಿಗಳು) ಆಳುವವನ (ಮರಣ) ಸ್ಥಾನಗಳನ್ನು ತೆಗೆದುಕೊಳ್ಳುವರು!

ಕ್ರೈಸ್ತರು ಈಗ ಕ್ರಿಸ್ತನ ರಾಜ್ಯದ, ಸಭೆಯ ಭಾಗವಾಗಿ "ಆಳಿಕೆ" ಮಾಡುತ್ತಾರೆ (ಪ್ರಕಟನೆ 1:6; 5:10), ಮತ್ತು ಕ್ರಿಸ್ತನ ಸಂಗಡ ನಿತ್ಯನಿತ್ಯಕ್ಕೂ ಆಳ್ವಿಕೆ ಮಾಡುವರು (2 ತಿಮೊಥೆ 2:12). "ಜೀವಭರಿತರಾಗಿ" ಆಳಿಕೆಮಾಡುವ ವಿಚಾರದಲ್ಲಿ ನೋಡುವದಾದರೆ, ನಮಗೆ ಯೇಸುವಿನ ಹೇಳಿಕೆಯು ಜ್ಞಾಪಕಕ್ಕೆ ಬರುತ್ತದೆ: ನಾನು ಅವುಗಳಿಗೆ ಜೀವವು ಇರಬೇಕೆಂತಲೂ ಆ ಜೀವವು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾನ 10:10). ನಮಗೆ ಕ್ರಿಸ್ತನಲ್ಲಿ ಈಗ "ಹೊಸ ಜೀವ" ಇರುತ್ತದೆ (ರೋಮಾ 6:4), ಮತ್ತು ಒಂದು ದಿನ ನಾವು ಪರಲೋಕದಲ್ಲಿ "ನಿತ್ಯಜೀವ" ವನ್ನು ಆನಂದಿಸುವೆವು (ರೋಮಾ 6:23; ತೀತನು 1:2).

ಪುನಃ, ಇದನ್ನು ಒತ್ತಿ ಹೇಳಲಾಗುತ್ತದೆ, ಏನೆಂದರೆ ಒಬ್ಬ ಮನುಷ್ಯನು (ಆದಾಮನು) ಸಂಕಷ್ಟವನ್ನು ತಂದನು, ಮತ್ತೊಬ್ಬ ಮನುಷ್ಯನು (ಕ್ರಿಸ್ತನು) ಸಂತೋಷವನ್ನು ತಂದನು: "ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ದಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿರುವ ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ."

## ಆದಾಮ ಮತ್ತು ಕ್ರಿಸ್ತನ ನಡುವೆ ಹೋಲಿಕೆ ಮಾಡಲ್ಪಟ್ಟದ್ದು (5:18-21)

**18ಹೀಗಿರಲಾಗಿ ಒಂದೇ ಅಪರಾದದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ**

**ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. [19]ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು. [20]ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು *ಎಷ್ಟೋ ಹೆಚ್ಚಾಗಿ* ಪ್ರಬಲವಾಯಿತು. [21]ಹೀಗೆ ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು.**

ವಾಕ್ಯಭಾಗದ (5:15-17) ಹಿಂದಿನ ವಿಭಾಗದಲ್ಲಿ ಆದಾಮ ಮತ್ತು ಕ್ರಿಸ್ತನ ನಡುವಿನ ವ್ಯತ್ಯಾಸದ ಮೇಲೆ ಒತ್ತು ಕೊಡಲಾಗಿತ್ತು: ಪೌಲನು ಹೇಳಿದ್ದೇನೆಂದರೆ "ದೇವರ ವರದಾನವು ಅಪರಾಧ ಬಂದಂತೆ ಬರಲಿಲ್ಲ" (5:15; ಒತ್ತು ಸೇರಿಸಲಾಗಿದೆ). ಈ ವಿಭಾಗದಲ್ಲಿ (5:18-21) ಆದಾಮ ಮತ್ತು ಕ್ರಿಸ್ತನ ನಡುವಿನ ಹೋಲಿಕೆಯ ಮೇಲೆ ಒತ್ತು ಇರುತ್ತದೆ. ಹೋಲಿಕೆಯ ಪದಗಳು ಬಹುತೇಕ ಪ್ರತಿಯೊಂದು ವಚನದಲ್ಲಿ ಕಾಣಿಸಿಕೊಳ್ಳುತ್ತವೆ: "ಹೀಗಿರಲಾಗಿ . . . ಹಾಗೆಯೇ" (5:18); "ಹೇಗೋ . . . " (5:19); "ಹೀಗೆ . . . ಹಾಗೆಯೇ" (5:21). ಈ ವಾಕ್ಯಭಾಗದ ಮುಕ್ತಾಯದ ವಚನಗಳಲ್ಲಿ, ಅಪೊಸ್ತಲನು ಯಾವ ರೀತಿಗಳಲ್ಲಿ ಆದಾಮ ಮತ್ತು ಕ್ರಿಸ್ತನು ಏಕರೀತಿಯಾಗಿ ದ್ದಾರೆಂಬದನ್ನು ಒತ್ತಿ ಹೇಳುತ್ತಾನೆ-ಅಥವಾ, ಹೆಚ್ಚು ನಿರ್ದಿಷ್ಟವಾಗಿ, ಅವರ ಕ್ರಿಯೆಗಳು ಯಾವ ವಿಧದಲ್ಲಿ ಸಮಾನಹೋಲಿಕೆ ಹೊಂದಿದ್ದವೆಂಬದನ್ನು ತಿಳಿಸುತ್ತಾನೆ.

**ವಚನ 18.** ಈ ಮುಂಚೆ ಹೇಳಿದ ಹಾಗೆ, ಪೌಲನು 12ನೇ ವಚನದಲ್ಲಿ ಆರಂಭಿಸಿದ ವಾಕ್ಯಸಾಲನ್ನು ಮುಕ್ತಾಯಗೊಳಿಸಲಿಲ್ಲ: "ಈ ವಿಷಯ ಹೇಗಂದರೆ ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು-." ಆತನು ಈ ವಾಕ್ಯಸಾಲನ್ನು ಪೂರ್ತಿಗೊಳಿಸದೆ ಬಿಟ್ಟನಾದರೂ ಆತನು ಈ ವಿಚಾರದ ದಾರಿಯನ್ನು ತಪ್ಪಲಿಲ್ಲ. ವಚನ 18ರಲ್ಲಿ, ಆತನು 12ನೇ ವಚನದ ವಿಚಾರವನ್ನು ಮುಂದುವರೆಸುತ್ತಾನೆ: **ಹೀಗಿರಲಾಗಿ ಒಂದೇ ಅಪರಾದದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ.** "ಒಂದೇ ಅಪರಾಧ" ಎಂಬುದು ಆದಾಮನು ತೋಟದಲ್ಲಿ ಮಾಡಿದ್ದಾಗಿತ್ತು, "ಒಂದೇ ಸತ್ಕಾರ್ಯ" ಎಂಬುದು ಶಿಲುಬೆಯ ಮೇಲೆ ಕ್ರಿಸ್ತನ ಮರಣವಾಗಿತ್ತು.

ಕೆಲವರು "ಸರ್ವ*ರ ರಕ್ಷಣೆ*" -ಸಮಸ್ತ ಜನರೂ ರಕ್ಷಿಸಲ್ಪಡುವರು ಎಂಬ ವಿಚಾರವನ್ನು ಉಪದೇಶಿಸುವದಕ್ಕೆ 18ನೇ ವಚನವನ್ನು ಉಪಯೋಗಿಸಲು ಪ್ರಯತ್ನಿಸುತ್ತಾರೆ. ಈ ನಿಲುವು ಬೈಬಲಿನ ಬೇರೆ ಭಾಗಗಳಲ್ಲಿನ ಉಪದೇಶಕ್ಕೆ ತದ್ವಿರುದ್ಧವಾಗಿರುತ್ತದೆ (2:5-9; ಮತ್ತಾಯ

7:13, 14; 25:41, 46). ಈ ವಾಕ್ಯಭಾಗವು ಸರ್ವರ ರಕ್ಷಣೆ ಬಗ್ಗೆ ಕಲಿಸುವದಿಲ್ಲವಾದರೆ, ಅದು ಬೇರೆ ಯಾವದರ ಬಗ್ಗೆ ಕಲಿಸುತ್ತದೆ?

ಈ ಇಡೀ ವಾಕ್ಯಭಾಗದ ಪ್ರಾಥಮಿಕ ಒತ್ತು ಯಾವದರ ಮೇಲಿದೆಯೆಂದರೆ, ಆದಾಮನ ಪಾಪವು ಎಲ್ಲಾ ಜನರ ಮೇಲೂ "ದಂಡನೆಯ ನಿರ್ಣಯವನ್ನು" ಉಂಟುಮಾಡಿ ಈ ಸಂಕಷ್ಟಗಳು ಮತ್ತು ಶೋಧನೆಗಳು ತುಂಬಿದ ಲೋಕದಲ್ಲಿ ಜೀವಿಸಿ ಕ್ರಮೇಣದಲ್ಲಿ ಶಾರೀರಿಕ ಮರಣವನ್ನು ಅನುಭವಿಸುವಂತೆ ಮಾಡಿತು. ಈ ಸಾಯಬೇಕೆಂಬ ನಿರ್ಣಯವು ಯೇಸುವಿನ "ಒಂದೇ ಸತ್ಕಾರ್ಯ" ದಿಂದ ರದ್ದುಗೊಳಿಸಲ್ಪಟ್ಟಿತು. ಈಗ, ಕರ್ತನ ಸಹಾಯದೊಂದಿಗೆ, ನಾವು ಪಾಪ ಹಾಗೂ ಮರಣದ ಮೇಲೆ ಜಯವನ್ನು ಸಾಧಿಸಬಲ್ಲೆವು (8:11, 13, 35-39).

"ಸಾಯಬೇಕೆಂಬ ನಿರ್ಣಯ" ಮತ್ತು "ನೀತಿನಿರ್ಣಯ" ದ ಅರ್ಥಗಳು ಕೇವಲ ಆತ್ಮೀಕ ವಲಯಕ್ಕೆ ಮಾತ್ರವೇ ಸಿಮೀತವಾಗಿರಬೇಕೋ? ಅದೇ ವಿಷಯವಾಗಿದ್ದರೆ, 18ನೇ ವಚನವನ್ನು ಒಂದು ಶರತ್ತುಬದ್ಧ ಹೇಳಿಕೆಯಾಗಿ ಕಾಣಬೇಕಾಗಬಹುದು- ಅಲ್ಲಿ ಶರತ್ತುಗಳು ಹೇಳಲ್ಪಟ್ಟಿಲ್ಲ ಆದರೆ ಭಾವಾರ್ಥವಿರುತ್ತದೆ. ಹೀಗಾಗಿರುವಲ್ಲಿ ಅದು ಈ ವಚನವನ್ನು ಹೀಗೆ ಸಾಗುವಂತೆ ಮಾಡುತ್ತದೆ: "ಹಾಗಾದರೆ ಒಂದು ಅಪರಾಧದಿಂದ ಎಲ್ಲಾ [ಪಾಪಮಾಡುವ] ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯ ಹೇಗೆ ಉಂಟಾಯಿತೋ, ಹಾಗೆಯೇ ಒಂದೇ ಸತ್ಕಾರ್ಯದ ಮೂಲಕ ಎಲ್ಲಾ [ನಂಬಿಕೆಯಿಡುವ] ಮನುಷ್ಯರಿಗೆ ನೀತಿವಂತರೆಂಬ ನಿರ್ಣಯ ಉಂಟಾಯಿತು."[58]

ಒಬ್ಬನು 18ನೇ ವಚನವನ್ನು ಹೇಗೆ ವ್ಯಾಖ್ಯಾನಿಸಿದರು ಸಹ, ಒಂದು ಅಂಶವಂತೂ ಸ್ಪಷ್ಟವಾಗುತ್ತದೆ: ಆದಾಮನ ಕೃತ್ಯ ಮತ್ತು ಕ್ರಿಸ್ತನ ಕೃತ್ಯ ಏಕರೀತಿಯಾಗಿದ್ದ ಒಂದು ವಿಧವೆಂದರೆ ಎರಡೂ ಕೃತ್ಯಗಳಿಂದಲೂ ಸಾರ್ವತ್ರಿಕವಾಗಿ ಪರಿಣಾಮಗಳಾಗಿದ್ದವು.

**ವಚನ 19.** ಆದಾಮ ಮತ್ತು ಕ್ರಿಸ್ತನ ಕೃತ್ಯಗಳು ಏಕರೀತಿಯಾಗಿದ್ದ ಇನ್ನೊಂದು ವಿಧವೆಂದರೆ, ಅವರೆಡರಲ್ಲಿಯೂ ವಿಧೇಯವಾಗುವ ಅಥವಾ ಅವಿಧೇಯವಾಗುವ ಆಯ್ಕೆಗಳನ್ನು ಇದ್ದವು: **ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ** (ಅನೇಕರು) **ನೀತಿವಂತರಾಗುವರು** (ಒತ್ತಿ ಹೇಳಿದ್ದು ನನ್ನದು).

ಏದೆನ್ ತೋಟದಲ್ಲಿ, ಆದಾಮನು ದೇವರಿಗೆ ವಿಧೇಯನಾಗಬಹುದಿತ್ತು ಅಥವಾ ಆತನಿಗೆ ಅವಿಧೇಯನಾಗಬಹುದಿತ್ತು-ಮತ್ತು ಆದಾಮನು ಅವಿಧೇಯನಾಗುವದಕ್ಕೆ ಆಯ್ಕೆ ಮಾಡಿಕೊಂಡನು. ಗೆತ್ಸೆಮನೆ ತೋಟದಲ್ಲಿ, ಯೇಸುವಿಗೆ ಸಹ ಅದೇ ರೀತಿಯ ಆಯ್ಕೆಯಿತ್ತು; ಆದರೆ ಆದಾಮನು "ನನ್ನ ಚಿತ್ತವೇ ಆಗಲಿ," ಎಂದಿದ್ದರೆ, ಯೇಸುವಾದರೋ "ನಿನ್ನ ಚಿತ್ತದಂತೆಯೇ ಆಗಲಿ" ಎಂದನು (ಮತ್ತಾಯ 26:42; KJV).[59] ಕ್ರಿಸ್ತನು ತನ್ನ ತಂದೆಗೆ ವಿಧೇಯನಾಗಲು ಮನಸ್ಸುಳ್ಳವನಾಗಿದ್ದನೆಂಬದು ಈ ಕೆಳಗಿನ ವಾಕ್ಯಭಾಗಗಳಲ್ಲಿ ಒತ್ತಿಹೇಳಲ್ಪಟ್ಟಿರುತ್ತದೆ:

ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು

> ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣ ನಾದನು (ಇಬ್ರಿಯ 5:8, 9).

> ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು (ಫಿಲಿಪ್ಪಿ 2:8).

19ನೇ ವಚನದಲ್ಲಿ, ಆದಾಮನ ಅವಿಧೇಯತೆಯ ಫಲಿತಗಳಲ್ಲೊಂದೆಂದರೆ ಎಲ್ಲಾ ಜನರು "ಪಾಪಿಗಳಾಗಿ ಮಾಡಲ್ಪಟ್ಟರು" ಎಂಬದನ್ನು ಪೌಲನು ಗಮನಕ್ಕೆ ತರುತ್ತಾನೆ. ಇದನ್ನು ಅರ್ಥಮಾಡಿಕೊಳ್ಳಬಹುದಾದ ಸುಲಭವಾದ ರೀತಿಯೆಂದರೆ ಆದಾಮನ ಪಾಪವು ಪ್ರತಿಯೊಬ್ಬರ ಮೇಲೆಯೂ ಪ್ರಭಾವಬೀರಿತು ಎಂಬದನ್ನು ಒಪ್ಪಿಕೊಳ್ಳುವದಾಗಿದೆ. ಆತನ ಪಾಪದ ದುಷ್ಪರಿಣಾಮವನ್ನು ನಾವೆಲ್ಲರೂ ಅನುಭವಿಸುತ್ತೇವಾದ್ದರಿಂದ, ಅದು ಒಂದು ರೀತಿಯಲ್ಲಿ ನಾವೇ ಪಾಪವನ್ನು ಮಾಡಿದ್ದೇವೆನೋ ಎಂಬಂತಿರುತ್ತದೆ.

"ಹಾಗೆಯೇ," ಯೇಸುವಿನ ವಿಧೇಯತ್ವದಿಂದ ಎಲ್ಲರೂ "ನೀತಿವಂತರಾಗುವರು." ಪುನಃ, ಇಲ್ಲಿ ಮುಖ್ಯ ಒತ್ತು "ನಿರ್ಣಯ" ವನ್ನು ಬದಲಾಯಿಸುವದರ ಕುರಿತಾಗಿರುತ್ತದೆ. 19ನೇ ವಚನದ ತಾತ್ಪರ್ಯವನ್ನು Thomas ಈ ರೀತಿಯಲ್ಲಿ ಸಾರಾಂಶಗೊಳಿಸಿದನು: "ಅನೇಕರು ಪಾಪಿಗಳಾಗಿ ಮಾಡಲ್ಪಟ್ಟರು [ಅವರ ಯಾವ ಸ್ವಂತ ಪಾಪವಿಲ್ಲದಿದ್ದರೂ], ಹಾಗೇಯೇ ಒಬ್ಬನ ವಿಧೇಯತ್ವದಿಂದ ನೀತಿವಂತರಾಗಿ ಮಾಡಲ್ಪಡುವರು [ಅವರ ಯಾವ ಸ್ವಂತ ಯೋಗ್ಯತೆಯಿಲ್ಲದಿದ್ದರೂ]."[60]

19ನೇ ವಚನವನ್ನು ಶರತ್ತುಬದ್ಧವೆಂದು ಅರ್ಥಮಾಡಿಕೊಳ್ಳಬಹುದು, ಅದರಲ್ಲಿ ಹೇಳಲ್ಪಡದ ಆದರೆ ಭಾವಾರ್ಥವಿರುವಂಥ ಶರತ್ತುಗಳು: "ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ [ಅವರು ಸಹ ಅವಿಧೇಯರಾದಾಗ] ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು [ಅವರು ಸಹ ವಿಧೇಯರಾಗುವಾಗ]."

**ವಚನ 20.** ತಾನು ಹೇಳುತ್ತಿರುವ ಮಾತುಗಳಿಗೆ ಯೆಹೂದ್ಯರು ಹೇಗೆ ಪ್ರತಿಸ್ಪಂದಿಸಬಹುದೆಂಬ ಬಗ್ಗೆ ಪೌಲನು ಯಾವಾಗಲೂ ಪ್ರಜ್ಞೆಯುಳ್ಳವನಾಗಿದ್ದನು. ಆದುದರಿಂದ, ಆತನು ಮಾತಾಡುತ್ತಿರುವ ವಿಚಾರದ ಮಧ್ಯಪ್ರವೇಶಿಸಿ ಯೆಹೂದ್ಯರ ಸಂಭಾವ್ಯ ಪ್ರಶ್ನೆಗೆ ಉತ್ತರಿಸುವದಕ್ಕೆ ಮುಂದಾಗುತ್ತಾನೆ: "ಆದರೆ ಮೋಶೆಯ ಧರ್ಮಶಾಸ್ತ್ರದ ವಿಷಯವೇನು? ಧರ್ಮಶಾಸ್ತ್ರವು ತಿದ್ದುವಿಕೆಯನ್ನು ಮಾಡಲಿಲ್ಲವೋ ಅಥವಾ ಕನಿಷ್ಠ ಆದಾಮನ ಪಾಪದಿಂದುಂಟಾದ ದುಷ್ಪರಿಣಾಮವನ್ನು ಸುಧಾರಿಸುವ ಕೆಲಸವನ್ನು ಮಾಡಲಿಲ್ಲವೇ?" "ಪೌಲನ ಉತ್ತರವು ಖಡಾಖಂಡಿತವಾಗಿ ಇಲ್ಲ!" ಎಂದಾಗಿತ್ತು.

ಅಪೊಸ್ತಲನು ಹೀಗೆ ಹೇಳಿದನು, **ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು**[61] **ಮಧ್ಯೆ ಬಂತು.** ಆ ಹೇಳಿಕೆಗೆ ಒಬ್ಬ ಯೆಹೂದ್ಯನು ಬಹುಶಃ ಈ ಕೆಳಗಿನ ರೀತಿಯಲ್ಲಿ ಪ್ರತ್ಯುತ್ತರ ಕೊಟ್ಟಿರಬಹುದಾಗಿದೆ: "ಇಲ್ಲವೇ ಇಲ್ಲ, ಧರ್ಮಶಾಸ್ತ್ರದ ಉದ್ದೇಶವು

ನೀತಿಯನ್ನು ಹೆಚ್ಚಿಸುವದಾಗಿತ್ತೇ ಹೊರತು ಅಪರಾಧಗಳನ್ನಲ್ಲ" -ಮತ್ತು ಆತನು ಹೇಳಿದ್ದು ಸರಿಯಾಗಿಯೇ ಇರಬಹುದಾಗಿದೆ. ಪೌಲನು ಗಲಾತ್ಯದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಹೇಳಿದ್ದೇನೆಂದರೆ "ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ . . . ಅದನ್ನು (ಧರ್ಮಶಾಸ್ತ್ರವನ್ನು) ನೇಮಿಸಿದನು" (ಗಲಾತ್ಯ 3:19). NASB ಯ ಕೆಲವು ಆವೃತ್ತಿಗಳಲ್ಲಿ "ಇಂಥಿಂಥದು ಅಪರಾಧವೆಂದು" ಎಂಬದರ ಕುರಿತು ಈ ಟಿಪ್ಪಣಿಗಳನ್ನು ಹೊಂದಿರುತ್ತವೆ: "ಅಪರಾಧಗಳು ಯಾವವೆಂದು ತಿಳಿಸಲು (ಬಣ್ಣಿಸುವದಕ್ಕೆ)." ಜನರಿಗೆ ಪಾಪವನ್ನು ಗುರುತಿಸುವದಕ್ಕೆ ಸಹಾಯ ಮಾಡಲೆಂದು ಧರ್ಮಶಾಸ್ತ್ರವು ಕೊಡಲ್ಪಟ್ಟಿತು, ಮತ್ತು ಹೀಗೆ ಪಾಪ ಮಾಡದಂತೆ ಜನರನ್ನು ಪ್ರೋತ್ಸಾಹಿಸುವದಕ್ಕಾಗಿತ್ತು.

ಹಾಗಿದ್ದರೂ, ಧರ್ಮಶಾಸ್ತ್ರವನ್ನು ಕೊಟ್ಟಿದ್ದರಿಂದಾದ ಒಂದು ಫಲಿತವೇನೆಂದರೆ ಅದು ಪಾಪವನ್ನು ತಗ್ಗಿಸುವಂತೆ ಮಾಡುವ ಬದಲಿಗೆ ಪಾಪವು ಹೆಚ್ಚಾಗುವಂತೆ ಮಾಡಿತು. ಇದಕ್ಕೆ ಕಾರಣವೇನೆಂಬದನ್ನು 7ನೇ ಅಧ್ಯಾಯದ ವ್ಯಾಖ್ಯಾನಗಳಲ್ಲಿ ವಿವರಿಸಲಾಗುವದು. AB ಯು ತನ್ನ ವಿಸ್ತರಿಸಿದ ವಾಕ್ಯಗಳಲ್ಲಿ ಕೆಲವೊಂದು ಕಾರಣಗಳನ್ನು ಸೇರ್ಪಡೆಗೊಳಿಸಿರುತ್ತದೆ: "ಆದರೆ ನಂತರ ಧರ್ಮಶಾಸ್ತ್ರ ಮಧ್ಯದಲ್ಲಿ ಬಂದಿತು, [ಕೇವಲ] ಅಪರಾಧವನ್ನು ವಿಸ್ತರಿಸಲು ಮತ್ತು ಹೆಚ್ಚಿಸಲು [ಅದನ್ನು ಹೆಚ್ಚು ಸ್ಪಷ್ಟವಾದ ಮತ್ತು ಉತ್ಸಾಹಕರ ವಿರೋಧಿಯಾಗಿ ಕಾಣುವಂತೆ ಮಾಡಿತು]."

ಪೌಲನು ಹೇಳುತ್ತಿರುವ ಅಂಶವೇನೆಂದರೆ ಧರ್ಮಶಾಸ್ತ್ರವನ್ನು ಕೊಡುವದರಿಂದ ಪರಿಸ್ಥಿತಿಯು ಶಮನಗೊಳ್ಳಲಿಲ್ಲ, ಆದರೆ ಅದನ್ನು ಇನ್ನಷ್ಟು ಹದಗೆಡಿಸಿತು. Morris ಬರೆದದ್ದೇನೆಂದರೆ ಧರ್ಮಶಾಸ್ತ್ರವು "ಪಾಪವನ್ನು ತಡೆಗಟ್ಟುವ ಬಗ್ಗೆ ಕಾಳಜಿ ಹೊಂದಿರಲಿಲ್ಲ (ಅದನ್ನು ಮಾಡುವದಕ್ಕೆ ಬಹಳ ತಡವಾಗಿ ಹೋಗಿತ್ತು). ಅದು ರಕ್ಷಣೆಯ ಬಗ್ಗೆ ಸಹ ಕಾಳಜಿ ಹೊಂದಿರಲಿಲ್ಲ" (ಅದು ಅದಕ್ಕಾಗಿ ಬಹಳ ಬಲಹೀನವಾಗಿತ್ತು).[62] Bruce ವ್ಯಾಖ್ಯಾನಿಸಿದ್ದೇನೆಂದರೆ ಮೋಶೆಯ ಧರ್ಮಶಾಸ್ತ್ರವು "ಒಂದು ಪ್ರಾಯೋಗಿಕವಾದ ಉದ್ದೇಶಕ್ಕೋಸ್ಕರ ಪರಿಚಯಿಸಲ್ಪಟ್ಟ ಒಂದು ತಾತ್ಕಾಲಿಕ ಮಾನದಂಡವಾಗಿತ್ತು," ಆದರೆ ಅದಕ್ಕೆ "ವಿಮೋಚನಾಕಾರ್ಯದ ಇತಿಹಾಸದಲ್ಲಿ ಯಾವದೇ ಶಾಶ್ವತವಾದ ಮಹತ್ವವು ಇರಲಿಲ್ಲ."[63]

ಧರ್ಮಶಾಸ್ತ್ರವು ಪಾಪ ಹೆಚ್ಚಾಗುವಂತೆ ಮಾಡಿತೆಂದು ಘೋಷಿಸಿದ ಬಳಿಕ, ಪೌಲನು ಆತ್ಮನಿಂದ ನಡಿಸಲ್ಪಟ್ಟವನಾಗಿ ಈ ನೆನಪಿನಲ್ಲಿ ಉಳಿಯುವಂಥ ಹೇಳಿಕೆಯನ್ನು ನೀಡುತ್ತಾನೆ: **ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಭಲವಾಯಿತು.** ಆತನು ಈ ಅಂಶವನ್ನು ತಿಳಿಸುವದಕ್ಕೆ ಗ್ರೀಕ್ ನ ಎರಡು ಬೇರೆ ಬೇರೆ ಪದಗಳನ್ನು ಉಪಯೋಗಿಸಿದನು. "ಹೆಚ್ಚಿದಲ್ಲೇ" ಎಂಬುದು πλεονάζω (*pleonazō*) ಎಂಬ ಪದದಿಂದ ಬಂದದ್ದಾಗಿದೆ. "ಎಷ್ಟೋ ಹೆಚ್ಚಾಗಿ ಪ್ರಭಲವಾಯಿತು" ಎಂಬದು ὑπερπερισσεύω (*huperperisseuō*) ಎಂಬದರಿಂದ ಬಂದಿದೆ, ಅದು περισσεύω (*perisseuō* — "ಹೆಚ್ಚಾಗು") ಎಂಬದನ್ನು ತೀವ್ರಗೊಳ್ಳುವ ὑπερ (*huper*) ಎಂಬ ಉಪಸರ್ಗದೊಂದಿಗೆ ಜೋಡಿಸುತ್ತದೆ. ಉಪಸರ್ಗದಿಂದ ನಮಗೆ "hyper" (ತೀವ್ರ) ಎಂಬ ಪದ ಬಂದಿರುತ್ತದೆ; ಅದಕ್ಕೆ ಸಮಾನವಾದ ಲ್ಯಾಟಿನ್ ಪದವೆಂದರೆ super. 20ನೇ ವಚನದ ಕಡೆಯ

ಭಾಗವನ್ನು ಹೀಗೆ ಅನುವಾದಿಸಬಹುದು, "ಆದರೆ ಪಾಪವು ಎಲ್ಲಿ ಹೆಚ್ಚಾಯಿತೋ ಅಲ್ಲಿ ಕೃಪೆಯು ಇನ್ನೂ ಹೆಚ್ಚಾಯಿತು-ಅಧಿಕವಾಯಿತು." ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರ ಕೃಪೆಯು ಎದುರಾಗಬಹುದಾದ ಯಾವದೇ ಪಾಪದ ಸಮಸ್ಯೆಯನ್ನು ನೀಗಿಸುವದಕ್ಕೆ ಅತ್ಯಧಿಕವಾಗಿ ಸಾಕಾದದ್ದಾಗಿರುತ್ತದೆ. Phillips ಈ ಭಾವಾರ್ಥವನ್ನು ನೀಡುತ್ತದೆ: "ಆದಾಗ್ಯೂ, ಪಾಪವು ಅಗಲ ಹಾಗೂ ಆಳವಾಗಿ ತೋರಿಸಲ್ಪಟ್ಟಿದ್ದರೂ, ದೇವರ ಕೃಪೆಯು ಅದಕ್ಕಿಂತಲೂ ಹೆಚ್ಚು ಅಗಲ ಹಾಗೂ ಆಳವಾಗಿರುತ್ತದೆ ಎಂಬದಕ್ಕಾಗಿ ಆತನಿಗೆ ಸ್ತೋತ್ರ!"

**ವಚನ 21.** ಈ 20ನೇ ವಚನದಲ್ಲಿ "ಪಾಪ" ಮತ್ತು "ಕೃಪೆ" ಕುರಿತು ಉಲ್ಲೇಖಿಸಲ್ಪಟ್ಟಿದ್ದು ಪೌಲನನ್ನು ಪುನಃ ಆತನ ಮುಖ್ಯ ವಿಚಾರಧಾರೆಗೆ ಕರೆತರುತ್ತದೆ-ಮತ್ತು ಆದಾಮ ಹಾಗೂ ಕ್ರಿಸ್ತನ ಕೃತ್ಯಗಳ ನಡುವಿನ ಆತನ ಮೂರನೆಯ ಹೋಲಿಕೆಗೆ ಕರೆತರುತ್ತದೆ. 21ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆ.** ಈ ಅಧ್ಯಾಯದ ಆರಂಭದಲ್ಲಿ, ಪೌಲನು ಮರಣವನ್ನು ಆಳಿಕೆಮಾಡುವದೆಂದು ಚಿತ್ರಿಸಿದ್ದನು (5:14, 17). ಈಗ ಆತನು ಆ ಚಿತ್ರವನ್ನು ಸ್ವಲ್ಪ ತಿದ್ದುಪಡಿಗೊಳಿಸಿ ಮರಣವನ್ನು ನಿರಂಕುಶ ದೊರೆಯಾಗಿ ಚಿತ್ರಿಸುತ್ತಾನೆ, ತನ್ನ ಅಧೀನದಲ್ಲಿರುವವರ ಮೇಲೆ ಮರಣ ಬೆದರಿಕೆಯನ್ನು ಉಪಯೋಗಿಸುವವದು. NCV ಯಲ್ಲಿ "ಒಂದು ಕಾಲದಲ್ಲಿ ಪಾಪವು ನಮ್ಮ ಮೇಲೆ ಆಳ್ವಿಕೆಮಾಡಲು ಮರಣವನ್ನು ಉಪಯೋಗಿಸುತ್ತಿತ್ತು."

ಪುನಃ, ಪೌಲನು ಇಲ್ಲಿ ಪಾಪದ ಮೇಲೆ ಕೃಪೆಯೂ ಹೆಚ್ಚು ಉನ್ನತವಾಗಿದೆ ಎಂಬದನ್ನು ಒತ್ತಿ ಹೇಳುತ್ತಾನೆ: **ಹಾಗೆಯೇ ದೇವರ ಕೃಪೆಯು . . . ಅಧಿಕಾರವನ್ನು ನಡಿಸುವದು.** ಪಾಪವು ಮನುಷ್ಯರ ಮೇಲೆ ಅಧಿಕಾರ ನಡಿಸುವದಕ್ಕೆ ಭಯವನ್ನು ಉಪಯೋಗಿಸಿದರೆ, ಕೃಪೆಯು ಪ್ರೀತಿಯನ್ನು ಉಪಯೋಗಿಸುತ್ತದೆ. "ಪೂರ್ಣಪ್ರೀತಿಯು ಹೆದರಿಕೆಯನ್ನು ಹೊರಡಿಸಿ ಬಿಡುತ್ತದೆ" (1 ಯೋಹಾನ 4:18). ಇದು ಖಂಡಿತವಾಗಿಯೂ ಸ್ಪಷ್ಟಗೊಳ್ಳುತ್ತ ದೇನೆಂದರೆ, ದೇವರ ಕೃಪೆಯನ್ನು ನಂಬಿಕೆಯ ಮೂಲಕ ಅಂಗೀಕರಿಸಿಕೊಂಡವರ ಹೃದಯಗಳಲ್ಲಿ ಮಾತ್ರವೇ ಅಧಿಕಾರವನ್ನು ನಡಿಸುತ್ತದೆ. ಆದ್ದರಿಂದ NIRVಯು ವಚನದ ಈ ಭಾಗವನ್ನು ಈ ರೀತಿಯಾಗಿ ಅನುವಾದಿಸುತ್ತದೆ, "ಹಾಗೆಯೇ ಕೃಪೆಯು ಸಹ ದೇವರ ಸಂಗಡ ಸರಿಯಾಗಿರುವವರ ಜೀವಿತಗಳಲ್ಲಿ ಅಧಿಕಾರ ನಡಿಸುವದು."

ಪೌಲನು ತನ್ನ ವಿಚಾರಧಾರೆಯನ್ನು ಮುಕ್ತಾಯಗೊಳಿಸುತ್ತಾ ದೇವರ ಕೃಪಾದಾನದ ಅಂತಿಮವಾದ "ಮತ್ತೂ" ಎಂಬದರ ಕಡೆಗೆ ತಿರುಗಿಕೊಳ್ಳುತ್ತಾನೆ: **ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ . . . ನಿತ್ಯಜೀವವನ್ನುಂಟುಮಾಡುತ್ತಾ.** ನಿಜವಾದ "ಜೀವಿತವು" ದೇವರ ಸನ್ನಿಧಿಯಲ್ಲಿ ಇರುವದಾಗಿದೆ, ಮತ್ತು "ನಿತ್ಯಜೀವ" ವು ಆತನ ಸನ್ನಿಧಿಯಲ್ಲಿ ನಿತ್ಯನಿತ್ಯಕ್ಕೂ ಜೀವಿಸುವದಾಗಿದೆ (ನೋಡಿರಿ ಪ್ರಕಟನೆ 21:22, 23; 22:3-5). ಇನ್ನೊಂದು ಸಾರಿ, ಪೌಲನು ಒತ್ತಿ ಹೇಳಿದ್ದೇನೆಂದರೆ ಇದು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ" ಮಾತ್ರವೇ ಸಾಧ್ಯ!

# ಅನ್ವಯಿಸುವಿಕೆ

## ನೀತಿನಿರ್ಣಯದಿಂದಾಗುವ ಆಶೀರ್ವಾದಗಳು (5:1-11)

5:1-11 ವಚನಗಳಲ್ಲೆಲ್ಲಾ, ಪೌಲನು ನೀತಿನಿರ್ಣಯವು ಸಂತೋಷಿಸುವದಕ್ಕೆ ಕಾರಣಗಳನ್ನು ಒದಗಿಸುತ್ತದೆ ಯಾಕೆಂದರೆ ಅದು ಭೂತಕಾಲ, ವರ್ತಮಾನ ಹಾಗೂ ಭವಿಷ್ಯತ್ಕಾಲಗಳಲ್ಲಿ ಆಶೀರ್ವಾದಗಳನ್ನು ತರುತ್ತದೆಂಬದನ್ನು ಒತ್ತಿ ಹೇಳಿದನು:

> ಭೂತಕಾಲ: ನಾವು ದೇವರೊಂದಿಗೆ ಸಮಾಧಾನಗೊಳಿಸಲ್ಪಟ್ಟಿದ್ದೇವೆ!
> ವರ್ತಮಾನ ಕಾಲ: ನಾವು ದೇವರ ಕೃಪೆಯಲ್ಲಿ ನಿಂತಿದ್ದೇವೆ!
> ಭವಿಷ್ಯತ್ಕಾಲ: ನಮಗೆ ದೇವರ ಮಹಿಮೆಯ ನಿರೀಕ್ಷೆಯಿರುತ್ತದೆ!

ಈ ಶ್ರೇಷ್ಠ ಆಶಿರ್ವಾದಗಳನ್ನು ಅರ್ಥಮಾಡಿಕೊಳ್ಳುವದು ನಮ್ಮ ಹೃದಯಗಳಿಗೆ ಸಮಾಧಾನವನ್ನುಂಟು ಮಾಡತಕ್ಕದ್ದು.

## ಕ್ರಿಸ್ತನಲ್ಲಿ ಒಂದು ಹೊಸ ಜೀವನ (5:1-11)

5:1-11 ವಚನಗಳನ್ನು ಅರ್ಥೈಸಬಹುದಾದ ಒಂದು ವಿಧಾನವೆಂದರೆ "ಕ್ರಿಸ್ತನಲ್ಲಿ ಒಂದು ಹೊಸ ಜೀವನ" ವನ್ನು ಈ ಮೂರು ವಿಭಾಗಗಳಲ್ಲಿ ವಿಂಗಡಿಸುವದು: ಹೊಸ ಪ್ರಯೋಜನಗಳು (5:1, 2); ಒಂದು ಹೊಸ ಮನೋಭಾವ (5:3-5a); ಮತ್ತು ಹೊಸ ಆಶ್ವಾಸನೆ (5:5b-11).

## ನಮ್ಮ ಮಕ್ಕಳಿಗೆ ಉಪದೇಶ ಮಾಡುವದು (5:1-8)

ಪೌಲನು ತಾನು ಉಪದೇಶಿಸುತ್ತಿದ್ದವರೊಂದಿಗೆ 5:1-8 ವಚನಗಳ ಆಶ್ವಾಸನೆಯನ್ನು ಹಂಚಿಕೊಳ್ಳಲು ಇಚ್ಚೆಸಿದ್ದನು. ನಾವು ಯಾರಿಗೆ ಉಪದೇಶಿಸುತ್ತೇವೋ ಅವರು ಸಹ ಈ ವಾಕ್ಯಭಾಗದ ಸತ್ಯಗಳನ್ನು ತಿಳಿಯಬೇಕಾದ ಅಗತ್ಯವಿರುತ್ತದೆ. ವಿಶೇಷವಾಗಿ, ಆ ಪರಿಕಲ್ಪನೆಗಳನ್ನು ನಾವು ನಮ್ಮ ಮಕ್ಕಳ ಮನಸ್ಸುಗಳ ಮೇಲೆ ಅಚ್ಚುಗಳಂತೆ ಒತ್ತಬೇಕಾಗಿರುತ್ತದೆ. ನಾವು ನಮ್ಮ ಮಕ್ಕಳಿಗೆ ಕಲಿಸುವ ಅಗತ್ಯವಿರುವಂಥ ಮೂರು ಸತ್ಯಗಳನ್ನು ಕುರಿತು ಆಲೋಚಿಸೋಣ.

*ಮೊದಲನೆಯದಾಗಿ, ನಿಜವಾದ ಸಮಾಧಾನವು ಹೋರಾಟಗಳ ಅನುಪಸ್ಥಿತಿಯಲ್ಲಿ ಅಲ್ಲ, ಆದರೆ ಕರ್ತನ ಪ್ರಸನ್ನತೆಯಲ್ಲಿಯೇ ಸಿಕ್ಕುತ್ತದೆ* (5:1, 2). "ಸಮಾಧಾನವನ್ನು ಹುಡುಕಿಕೊಂಡು ಹೋಗುವದು ವಿಶ್ವವ್ಯಾಪಿ ಮನುಷ್ಯರೆಲ್ಲರ ಗೀಳು ಆಗಿರುತ್ತದೆ,"[64] ಆದರೆ ಬಹಳಷ್ಟು ಜನರು ಸಮಾಧಾನವೆಂದರೆ ಹೋರಾಟವಿಲ್ಲದಿರುವದೇ ಎಂದು ಭಾವಿಸುತ್ತಾರೆ. ಕೆಲ ಸಂದರ್ಭಗಳಲ್ಲಿ ಪ್ರಶಾಂತತೆಯ ಸ್ಥಿತಿ ಇರಬಹುದು, ಆದರೆ ಒಂದಂತೂ ಖಚಿತವಾಗಿರುತ್ತದೆ: ಅದು ಶೀಘ್ರವೇ ನುಚ್ಚುನೂರಾಗುವದು. ಒಂದು ಪಾಪ-ವ್ಯಾಧಿಯಿಂದ ಕೂಡಿರುವ ಜಗತ್ತಿನಲ್ಲಿ ಅಲ್ಲೋಕಲ್ಲೋಲತೆಯು ಕಡ್ಡಾಯವಾಗಿರುತ್ತದೆ, ಅದರಿಂದ

ಹೊರತಾಗಿರುವದಿಲ್ಲ. ನಮ್ಮ ಮಕ್ಕಳು ಜೀವನ ವಾಸ್ತವತೆಗಳನ್ನು ಎದುರಿಸುವದಕ್ಕೆ ಸಜ್ಜುಗೊಳ್ಳಬೇಕಂದರೆ, ನಿಜವಾದ ಸಮಾಧಾನವು ಹೋರಾಟದ ಅನುಪಸ್ಥಿತಿಯಲ್ಲಿ ಅಲ್ಲ, ಆದರೆ ಕರ್ತನ ಉಪಸ್ಥಿತಿಯಲ್ಲೇ ಎಂಬದನ್ನು ಅವರು ಅರ್ಥಮಾಡಿಕೊಳ್ಳತಕ್ಕದ್ದು.

*ಎರಡನೆಯದಾಗಿ, ಸಮಸ್ಯೆಯು ನಮ್ಮನ್ನು ಸಿಹಿಗೊಳಿಸುತ್ತದೋ ಅಥವಾ ಕಹಿಗೊಳಿಸುತ್ತದೋ ಎಂಬದನ್ನು ನಾವೇ ತೀರ್ಮಾನಿಸುತ್ತೇವೆ* (5:3-5ಅ). ಕಷ್ಟವು ತಪ್ಪಲಾರದು, ಅದು ಅನಿವಾರ್ಯ (ಯೋಹಾನ 16:33; ಅಪೊಸ್ತಲರ ಕೃತ್ಯಗಳು 14:22; 2 ತಿಮೊಥೆ 3:12). ಶೀಘ್ರದಲ್ಲಾದರೂ ಅಥವಾ ತಡವಾಗಿಯಾದರೂ ನಮ್ಮ ಮಕ್ಕಳು ಕಠಿಣ ಪರೀಕ್ಷೆಯನ್ನು ಎದುರಿಸುವರು. ಅವರನ್ನು ನಾವು ಜೀವನದ ಕಠೋರ ವಾಸ್ತವೆತಗಳಿಗೋಸ್ಕರ ಹೇಗೆ ಸಿದ್ಧಪಡಿಸಬಲ್ಲೆವು? ಅವರ ಮನಸ್ಸುಗಳಲ್ಲಿ ರೋಮಾ 5:3-5 ವಚನಗಳಲ್ಲಿನ ಸತ್ಯಗಳನ್ನು ಮನದಟ್ಟುಗೊಳಿಸುವದಕ್ಕಿಂತ ಉತ್ತಮ ದಾರಿಯು ಮತ್ತೊಂದಿರುವದಿಲ್ಲ, ಅದು ಹೊಸ ಒಡಂಬಡಿಕೆಯಲ್ಲಿಯೇ ಬಾಧೆಗೊಳಗಾಗುವದರ ಮೌಲ್ಯವನ್ನು ತಿಳಿಸುವ ಅತ್ಯಂಥ ಶ್ರೇಷ್ಠ ವಾಕ್ಯಭಾಗಳಲ್ಲೊಂದಾಗಿರುತ್ತದೆ (ನೋಡಿರಿ ಯಾಕೋಬ 1:2, 3; 1 ಪೇತ್ರ 1:6, 7). ನಮ್ಮಮಕ್ಕಳು ಜೀವನದಲ್ಲಿ ಸಮಸ್ಯೆಗಳನ್ನು ನಿರೀಕ್ಷಿಸಬೇಕು ಆದರೆ ಅವರು ಸಂಕಷ್ಟಗಳನ್ನು ನಂಬಿಕೆಯಿಂದ ಎದುರಿಸುವದಾದರೆ ಅವರ ಸಮಸ್ಯೆಗಳು ಕಹಿಯಾಗದೆ ಸಿಹಿಯಾಗಬಲ್ಲವು ಎಂಬದನ್ನು ಕಲಿತುಕೊಳ್ಳುವ ಅಗತ್ಯವಿರುತ್ತದೆ!

ಹಲವಾರು ವರ್ಷಗಳ ಹಿಂದೆ, ಒಬ್ಬ ಯುವ ಬ್ರಿಟಿಷ್ ರಾಜತಾಂತ್ರಿಕ ಅಧಿಕಾರಿಯು Cyprusನ ರಾಜ್ಯಪಾಲಕನಾಗಿ ಸೇವೆ ಸಲ್ಲಿಸುವಾಗ ಒಂದು ಕ್ಲೀಷ್ಟಕರವಾದ ರಾಜಕೀಯ ಸಮಸ್ಯೆಯನ್ನು ಎದುರ್ಗೊಂಡನು. ಆತನ ಚಿಂತೆಗೊಳಪಟ್ಟ ತಂದೆಯು ಅವನಿಗೆ ಆರು ಮಾತುಗಳುಳ್ಳ ಟೆಲಿಗ್ರಾಮ್ ಕಳುಹಿಸಿದ್ದನು: "ಎರಡು ಕೊರಿಂಥ ನಾಲ್ಕು, ಎಂಟು ಮತ್ತು ಒಂಭತ್ತು." ಆ ಯುವ ರಾಯಭಾರಿಯು ವಾಕ್ಯಭಾಗವನ್ನು ತೆಗೆದು ನೋಡಿದನು: "ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಅತಿ ಸಂಕಟಪಡುವವರಲ್ಲ; ನಾವು ದಿಕ್ಕುಕಾಣದವರಾಗಿದ್ದರೂ ಕೇವಲ ದೆಸೆಗೆಟ್ಟವರಲ್ಲ; ಹಿಂಸೆಪಡುವವರಾಗಿದ್ದರೂ ಕೈಬಿಡಲ್ಪಟ್ಟವರಲ್ಲ; ಕೆಡವಲ್ಪಟ್ಟವರಾಗಿದ್ದರೂ ಪ್ರಾಣನಷ್ಟಪಡುವವರಲ್ಲ" (2 ಕೊರಿಂಥ 4:8, 9). ಆ ಯುವಕನು ತನ್ನ ತಂದೆಯ ಚಿಂತೆಯನ್ನು ಕಡಿಮೆಗೊಳಿಸುವದಕ್ಕೆ ಐದು ಮಾತುಗಳುಳ್ಳ ಒಂದು ಟೆಲೆಗ್ರಾಮ್ ನ್ನು ಉತ್ತರವಾಗಿ ಕಳುಹಿಸಿದನು: "ರೋಮಾಪುರ ಪತ್ರಿಕೆ ಐದು, ಮೂರು ಮತ್ತು ನಾಲ್ಕು." ಈ ವಾಕ್ಯಭಾಗವು ನಮ್ಮ ಅಭ್ಯಾಸದ ಭಾಗವಾಗಿರುತ್ತದೆ: "ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ, ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು" (5:3, 4).[65]

*ಮೂರನೆಯದಾಗಿ, ಏನೇ ಸಂಭವಿಸಿದರೂ ದೇವರು ನಮ್ಮನ್ನು ಪ್ರೀತಿಸುತ್ತಾನೆಂಬ ಅದ್ಭುತವಾದ ಸತ್ಯಕ್ಕೆ ಗಟ್ಟಿಯಾಗಿ ಅಂಟಿಕೊಂಡಿರಬೇಕು* (5:5ಆ-8). ಪ್ರತಿಯೊಬ್ಬನು ಸಹ ಪ್ರೀತಿಸಲ್ಪಡಬೇಕೆಂದು ಬಯಸುತ್ತಾನೆ. ಪ್ರತಿಯೊಬ್ಬರೂ ತಾನು ಯಾರಾದರೊಬ್ಬರಿಗೆ ಪ್ರಾಮುಖ್ಯವಾದವರು ಎಂಬ ಭಾವನೆ ಹೊಂದಿರಲಿಚ್ಛೆಸುತ್ತಾರೆ. ಒಂದು "ಪಿಸುಮಾತಿನ

ಪರೀಕ್ಷೆ" (whisper test) ಎಂಬ ಕಥೆಯಿರುತ್ತದೆ, ಅದು ಬಾಲ್ಯದಲ್ಲಿ ಕುಂಟಳೂ ಕುರೂಪಿಯೂ ಆಗಿದ್ದ ಒಬ್ಬ ಸ್ತ್ರೀಯಿಂದ ಬರೆಯಲ್ಪಟ್ಟಿರುತ್ತದೆ. ಒಬ್ಬ ಚಿಕ್ಕ ಹುಡುಗಿಯಾಗಿರುವಾಗ, ತನ್ನನ್ನು ಯಾರೂ ಪ್ರೀತಿಸಲು ಸಾಧ್ಯವಿಲ್ಲವೆಂದು ಅವಳು ಭಾವಿಸಿಕೊಂಡಿದ್ದಳು. ಶಾಲೆಯಲ್ಲಿರುವ ವೇಳೆಯಲ್ಲಿ, ಒಮ್ಮೆ ಆಕೆಯ ಶಿಕ್ಷಕಳು ಒಂದು ಸರಳವಾದ ಶ್ರವಣ ಪರೀಕ್ಷೆಯನ್ನು ಕೊಟ್ಟನು. ಆಕೆಯು ಮೇಜಿನ ಬಳಿಯಲ್ಲಿ ಕುಳಿತುಕೊಂಡು ಒಬ್ಬ ವಿಧ್ಯಾರ್ಥಿಯನ್ನು ಬಾಗಲ ಬಳಿಯಲ್ಲಿ ನಿಲ್ಲುವಂತೆ ಹೇಳಿದ ಬಳಿಕ ಕೆಲವು ಪಿಸುಮಾತುಗಳನ್ನು ನುಡಿಯುತ್ತಿದ್ದಳು. ಆ ವಿಧ್ಯಾರ್ಥಿಯು ಹಿಂದಿರುಗಿ ಬಂದು ಆಕೆಯು ಪಿಸುಮಾತಿನಲ್ಲಿ ಏನು ಹೇಳಿದಳೆಂಬದನ್ನು ತಿಳಿಸಬೇಕಿತ್ತು. ಈ ಚಿಕ್ಕ ಹುಡುಗಿಯ ಸರದಿ ಬಂದಾಗ, ಆಕೆಯು ಬಾಗಲ ಬಳಿಯಲ್ಲಿ ಹೋಗಿ ನಿಂತು ಶಿಕ್ಷಕಿಯ ಪಿಸುಮಾತುಗಳನ್ನು ಕೇಳಿಸಿಕೊಳ್ಳಲು ಕಾಯ್ದಳು. ಶಿಕ್ಷಕಿಯು ಈ ಮಾತುಗಳನ್ನು ನುಡಿದಿದ್ದಳು: "ನೀನು ನನ್ನ ಮಗಳಾಗಿದ್ದರೆ ಎಷ್ಟು ಚೆಂದವಿತ್ತೆಂದು ಹಾರೈಸುತ್ತೇನೆ." ಈ ಏಳು ಮಾತುಗಳನ್ನು ನನ್ನ ಜೀವಿತವನ್ನೇ ಬದಲಾಯಿಸಿದವೆಂದು ಆ ಸ್ತ್ರೀಯು ಅನಂತರದಲ್ಲಿ ಬರೆದಳು.[66]

*ಮುಕ್ತಾಯ.* ನೀವು ನಿಮ್ಮ ಮಕ್ಕಳಿಗೆ ಯಾವ ರೀತಿ ಪರಂಪರೆಯನ್ನು ಬಿಟ್ಟುಹೋಗುವಿರಿ? ಕೆಲವರು ತಮ್ಮ ಮಕ್ಕಳಿಗೆ ಹಣ ಅಥವಾ ಆಸ್ತಿಗಳನ್ನು ಬಿಟ್ಟುಹೋಗುವ ಬಗ್ಗೆ ಚಿಂತೆಯುಳ್ಳವರಾಗಿದ್ದಾರೆ. ಅನೇಕರಿಗೆ ತಾವು ಬಿಟ್ಟುಹೋಗಬಹು ದಾದ ಅತ್ಯಂಥ ಪ್ರಾಮುಖ್ಯವಾದ ಪರಂಪರೆಯೆಂದರೆ "ವಸ್ತುಗಳು" ಅಲ್ಲ ಎಂಬದನ್ನು ಅರಿಯದವರಾಗಿದ್ದಾರೆ. ನನಗೆ ಶವಸಂಸ್ಕಾರದ ಆರಾಧನೆಗಳಲ್ಲಿ ಬೋಧಿಸುವಂತೆ ಕೇಳಲ್ಪಡುವಾಗ, ಆರಾಧನೆಯ ಮುಂಚೆ ನಾನು ಕುಟುಂಬವನ್ನು ಭೇಟಿಯಾಗಲಿಚ್ಚಿಸು ತ್ತೇನೆ. ಮೃತರ ಮಕ್ಕಳನ್ನು ನಾನು ಕೇಳುತ್ತೇನೆ, "ನೀವು ನಿಮ್ಮ ತಂದೆ [ಅಥವಾ ತಾಯಿ] ಬಗ್ಗೆ ಒಂದೇ ಮಾತಿನಲ್ಲಿ ಏನು ಹೇಳುವಿ?" ನಾನು ಸಾಮಾನ್ಯವಾಗಿ "ಪ್ರಾಮಾಣಿಕನು," "ತಾಳ್ಮೆಯುಳ್ಳವನು," ಮತ್ತು "ಪ್ರೀತಿಯುಳ್ಳವನು" ಎಂಬ ಮಾತುಗಳನ್ನು ಕೇಳಿಸಿಕೊಳ್ಳು ತ್ತೇನೆ. ನಾನು ಎಂದಿಗೂ ಸಹ ಯಾವ ಮಗನಾಗಲಿ ಅಥವಾ ಮಗಳಾಗಲಿ "ಶ್ರೀಮಂತ," ಅಥವಾ "ಯಶಸ್ವಿವ್ಯಕ್ತಿ" ಆಗಿದ್ದನು ಎಂಬ ಮಾತುಗಳನ್ನು ಉಪಯೋಗಿಸಿದ್ದು ಕೇಳಿಸಿಕೊಂಡಿರುವದಿಲ್ಲ. ಖಂಡಿತವಾಗಿಯೂ, ನಾವು ನಮ್ಮ ಮಕ್ಕಳಿಗೆ ಬಿಟ್ಟು ಹೋಗಬಹುದಾದ ಅದ್ಭುತವಾದ ಪರಂಪರೆಯೆಂದರೆ ರೋಮಾ 5:1-8 ರಲ್ಲಿ ಸಿಕ್ಕುವ ಮೂರು ಸತ್ಯಗಳ ಕುರಿತ ಜ್ಞಾನವೇ ಆಗಿರುತ್ತದೆ.

## ನಂಬಿಕೆ, ನಿರೀಕ್ಷೆ, ಮತ್ತು ಪ್ರೀತಿ (5:1-8)

ಪೌಲನು ತನ್ನ ಪತ್ರಿಕೆಗಳಲ್ಲಿ, ಅನೇಕ ವೇಳೆ ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿಗಳೆಂಬ ಮೂರು ಶ್ರೇಷ್ಠ ವಿಷಯಗಳನ್ನು ಒಟ್ಟಿಗೆ ಸೇರಿಸುತ್ತಾನೆ (1 ಕೊರಿಂಥ 13:13; ಗಲಾತ್ಯ 5:5, 6; ಕೊಲೊಸ್ಸೆ 1:4, 5; 1 ಥೆಸಲೋನಿಕ 1:3). ರೋಮಾ 5:1-8 ರಲ್ಲಿ ಸಹ ಆತನು ಈ ಮೂರು ಕ್ರೈಸ್ತ ತತ್ವಗಳ ಬಗ್ಗೆ ಮಾತಾಡುತ್ತಾನೆ. ಅಪೊಸ್ತಲನು "ನಂಬಿಕೆ" ಯಿಂದ (5:1) "ನಿರೀಕ್ಷೆ" ಗೆ ಸಾಗುತ್ತಾನೆ (5:2, 4, 5), ಅಲ್ಲಿಂದ ಮುಂದೆ "ಪ್ರೀತಿ" ಗೆ ಹೋಗುತ್ತಾನೆ (5:5,

8).

### ನಿರೀಕ್ಷೆ (5:2)

ಒಮ್ಮೆ ಒಬ್ಬ ಬಾಲಕನು ಆಸ್ಪತ್ರೆಯಲ್ಲಿ ಸುಟ್ಟಗಾಯಗಳ ಚಿಕಿತ್ಸೆಗಾಗಿ ತುರ್ತುನಿಗಾ ಘಟಕದಲ್ಲಿದ್ದನು. ಆತನ ದೇಹವು ಶೇಕಡಾ 60 ರಷ್ಟು ಸುಟ್ಟುಹೋಗಿತ್ತು. ಆತನ ಆರೋಗ್ಯದಲ್ಲಿ ಯಾವದೇ ಸುಧಾರಣೆ ಆಗುತ್ತಿರಲಿಲ್ಲ, ಆಗ ಒಂದು ದಿನ ಅವನ ಶಿಕ್ಷಕನು ಕೋಣೆಯೊಳಗೆ ಬಂದು "ನೀನು ಶಾಲೆಯ ಅಭ್ಯಾಸದಲ್ಲಿ ಬಹಳ ಹಿಂದೆ ಉಳಿಯದಂತೆ ನೋಡಿಕೊಳ್ಳುವದಕ್ಕಾಗಿ ಕಳುಹಿಸಲ್ಪಟ್ಟಿದ್ದೇನೆ" ಎಂದು ಹೇಳಿದನು. ಬಾಲಕನು ತಕ್ಷಣದಿಂದಲೇ ಸುಧಾರಿಸಿಕೊಳ್ಳಲಾರಂಭಿಸಿದನು. ಆತನು ಹೇಳಿದ್ದೇನೆಂದರೆ, "ನಾನು ಸಾಯುವದಾಗಿದ್ದರೆ ಶಿಕ್ಷಕನನ್ನು ನನ್ನ ಬಳಿಗೆ ಕಳುಹಿಸುತ್ತಿದ್ದಿಲ್ಲ."[67] ಆತನಿಗೆ ಕೊನೆಗೂ ನಿರೀಕ್ಷೆ ಹುಟ್ಟಿತ್ತು!

### ರಕ್ಷಣೆ: ಹಿಂದಿನ, ಇಂದಿನ ಮತ್ತು ಮುಂದಣ (5:6-11)

ನಾವು ಅನೇಕ ವೇಳೆ ಕ್ರೈಸ್ತರಾಗುವ ಕ್ಷಣದಲ್ಲಿ ಹಿಂದಿನ ಪಾಪಗಳಿಂದ ರಕ್ಷಣೆ ಹೊಂದಿದ್ದನ್ನು ಸೂಚಿಸುವದಕ್ಕಾಗಿ "ರಕ್ಷಿಸಲ್ಪಟ್ಟವರು" ಎಂಬ ಪದವನ್ನು ಉಪಯೋಗಿಸುತ್ತೇವೆ (ಮಾರ್ಕ 16:16; ನೋಡಿರಿ ರೋಮಾ 10:9). ನಾವು ಕೆಲವು ಸಾರಿ ಆ ಪದವನ್ನು ನಿತ್ಯವಾಗಿ ರಕ್ಷಿಸಲ್ಪಡುವ ನಿರೀಕ್ಷೆಯಲ್ಲಿ ಉಪಯೋಗಿಸುತ್ತೇವೆ (1 ಕೊರಿಂಥ 5:5; ನೋಡಿರಿ ರೋಮಾ 13:11). ಅಲ್ಲದೆ ನಾವು ಒಂದು ಅರ್ಥದಲ್ಲಿ ಅನುದಿನವೂ ರಕ್ಷಿಸಲ್ಪಡುತ್ತಿದ್ದೇವೆ (1 ಕೊರಿಂಥ 1:18; 2 ಕೊರಿಂಥ 2:15). "ರಕ್ಷಣೆ" ಯ ಈ ಮೂರು ಪದಗಳ ಉಪಯೋಗವನ್ನು ರೀತಿಯಾಗಿ ಸಾರಾಂಶಗೊಳಿಸಬಹುದು:

ಹಿಂದಿನ ರಕ್ಷಣೆ: ಪಾಪದ ದಂಡನೆಯಿಂದ ರಕ್ಷಣೆ.
ಇಂದಿನ ರಕ್ಷಣೆ: ಪಾಪ ಆಚರಣೆಯಿಂದ ರಕ್ಷಣೆ.
ಮುಂದಣ ರಕ್ಷಣೆ: ಪಾಪದ ಸನ್ನಿಧಿಯಿಂದ ರಕ್ಷಣೆ (ಪರಲೋಕದಲ್ಲಿ).

5:1-5 ರಲ್ಲಿ, ನಂಬಿಕೆಯಿಂದ ನೀತಿವಂತರಾಗುವದರಿಂದ ಸಿಕ್ಕುವ ಹಿಂದಿನ, ಇಂದಿನ ಮತ್ತು ಮುಂದಣ ಆಶೀರ್ವಾದಗಳ ಕುರಿತು ಮಾತಾಡಿದನು. ಹಿಂದಿನಕಾಲದ ಬಗ್ಗೆ ನೋಡುವದಾದರೆ, ನಾವು ದೇವರ ಸಂಗಡ ಸಮಾಧಾನಗೊಳಿಸಲ್ಪಟ್ಟಿದ್ದೇವೆ (5:1). ಇಂದಿನ ಕಾಲದ ಬಗ್ಗೆ ನೋಡುವದಾದರೆ, ನಾವು ಆತನ ಕೃಪೆಯಲ್ಲಿ ನಿಂತಿದ್ದೇವೆ (5:2). ಮುಂದಣ ಕಾಲದ ಬಗ್ಗೆಯೆಂದರೆ, ನಮಗೆ ಆತನ ಮಹಿಮೆಯ ನಿರೀಕ್ಷೆಯು ಇರುತ್ತದೆ (5:2). 5:6-11 ರಲ್ಲಿ, ಪೌಲನು ಪುನಃ ಗತಕಾಲ, ಪ್ರಸ್ತುತ ಮತ್ತು ಭವಿಷ್ಯತ್ಕಾಲಗಳ ಬಗ್ಗೆ ಮಾತಾಡುತ್ತಾನೆ.

*ಗತಕಾಲದ ರಕ್ಷಣೆ* (5:6-11). ಹಿಂದಿನ ಕಾಲದ ರಕ್ಷಣೆಗೆ ನಮ್ಮ ವಾಕ್ಯಭಾಗದಲ್ಲಿ ದೊಡ್ಡ ಮಹತ್ವ ಕೊಡಲಾಗಿರುತ್ತದೆ. ನಾವು ಪಾಪ ಭಾರದಿಂದ ಬೆಂಡಾದವರಾಗಿರುತ್ತೇವೆ

(ನೋಡಿರಿ 3:23; 6:23), ಆದರೆ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (5:9) ಮತ್ತು ದೇವರೊಂದಿಗೆ ಸಮಾಧಾನಗೊಳಿಸಲ್ಪಟ್ಟಿದ್ದೇವೆ (5:10, 11). ಈ ರಕ್ಷಣೆಯು ಯೇಸುವಿನ ಮೂಲಕ ಬರುತ್ತದೆ (5:11). ನಿರ್ದಿಷ್ಟವಾಗಿ, ಅದು ಆತನ ರಕ್ತದ ಮುಖಾಂತರವಾಗಿ ಸಿಕ್ಕುತ್ತದೆ (5:9), ಆತನ ಮರಣದಲ್ಲಿ ಸುರಿಸಲ್ಪಟ್ಟ ರಕ್ತ (5:10). ನಾವು ರಕ್ಷಣೆಯುಂಟು ಮಾಡುವ ರಕ್ತದ ಸಂಪರ್ಕಕ್ಕೆ "ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ" ಮಾಡಿಸಿಕೊಂಡಾಗ ಬಂದೆವು (6:3, 4).

*ಪ್ರಸ್ತುತಕಾಲದ ರಕ್ಷಣೆ* (5:9, 10). ನಾವು ಗತಕಾಲದ ಪಾಪದಿಂದ ರಕ್ಷಿಸಲ್ಪಡುವ ಅಗತ್ಯವಿರುವದು ಮಾತ್ರವಲ್ಲದೆ, ನಮಗೆ ಅನುದಿನವೂ ಸಹ ಆತ್ಮೀಕ ಸಹಾಯದ ಅಗತ್ಯವಿರುತ್ತದೆ. ನಾವು ಪಾಪ ಮಾಡುತ್ತಲೇ ಇರುತ್ತೇವೆ. ಅನೇಕ ವೇಳೆ ನಾವು ಶೋಧನೆ ಮತ್ತು ಸಂಕಷ್ಟಗಳಿಗೆ ತುತ್ತಾಗುತ್ತೇವೆ. ನಮಗೆ ಈಗಲೂ ಜೀವನದಲ್ಲಿ ಸವಾಲುಗಳೊಂದಿಗೆ ಹೋರಾಟವಿರುತ್ತದೆ (ಮತ್ತಾಯ 13:22; 1 ಪೇತ್ರ 4:12; 1 ಯೋಹಾನ 1:9). ನಮ್ಮ ವಾಕ್ಯಭಾಗದಲ್ಲಿ ಎರಡು ಸಾರಿ, "ಮತ್ತೂ ನಿಶ್ಚಯವಲ್ಲವೇ" ಎಂಬ ಮಾತನ್ನು ಕಾಣುತ್ತೇವೆ (5:9, 10). ದೇವರು ನಮ್ಮನ್ನು ಗತಕಾಲದ ಪಾಪಗಳ ಅಪರಾಧದಿಂದ ರಕ್ಷಿಸುವದಕ್ಕಿಂತಲೂ "ಮತ್ತೂ" ಅಧಿಕವಾದದ್ದನ್ನು ನಮಗಾಗಿ ಮಾಡುತ್ತಾನೆ; ಆತನು ಅನುದಿನವೂ ನಮಗೆ ಸಹಾಯವನ್ನು ಮುಂದುವರೆಸುತ್ತಾನೆ (ಇಬ್ರಿಯ 13:5, 6). ಪೌಲನು "ಪ್ರಸ್ತುತಕಾಲ ರಕ್ಷಣೆ" ಯನ್ನು ಮನಸ್ಸಿನಲ್ಲಿಟ್ಟುಕೊಂಡವನಾಗಿ ಈ ಮಾತುಗಳನ್ನು ಹೇಳಿರಬೇಕೆಂದು ತೋರುತ್ತದೆ, "ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಗುವದು ಮತ್ತೂ ನಿಶ್ಚಯವಲ್ಲವೇ" (5:10).

*ಭವಿಷ್ಯತ್ಕಾಲದ ರಕ್ಷಣೆ* (5:9). ವಾಕ್ಯಭಾಗವು ಗತಕಾಲದ ಮತ್ತು ಪ್ರಸ್ತುತಕಾಲದ ರಕ್ಷಣೆಯ ಬಗ್ಗೆ ಮಾತಾಡುತ್ತದೆ; ಅದು ಭವಿಷ್ಯತ್ಕಾಲದ ರಕ್ಷಣೆ ಬಗ್ಗೆ ಸಹ ಸೂಚಿಸುತ್ತದೆ. 9ನೇ ವಚನದಲ್ಲಿ, ನಾವು ಓದುವದೇನೆಂದರೆ, "ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ." "ತಪ್ಪಿಸಿಕೊಳ್ಳುವದು (ರಕ್ಷಿಸಲ್ಪಡುವದು)" ಎಂಬುದು ಭವಿಷ್ಯತ್ಕಾಲದಲ್ಲಿರುವದರಿಂದ, ಈ ವಚನದಲ್ಲಿ ಹೇಳಲಾಗುವ ದೇವರ ಕೋಪವು ನ್ಯಾಯತೀರ್ಪಿನ ದಿನದಂದು ಅನೀತಿವಂತರ ಮೇಲೆ ಬರಲಿರುವ ದೇವರ ಕೋಪ ಎಂಬದನ್ನು ಬಹಳ ಜನರು ಒಪ್ಪಿಕೊಳ್ಳುತ್ತಾರೆ. 9ನೇ ವಚನವು ದೇವರ ಕೃಪೆಯ ಎರಡು ಆಯಾಮಗಳನ್ನು ವ್ಯಕ್ತಪಡಿಸುತ್ತದೆ. ಆತನ ಕೃಪೆಯ ಕಾರಣದಿಂದಾಗಿ ನಾವು ಯಾವದಕ್ಕೆ ಯೋಗ್ಯರಲ್ಲವೋ ಅದನ್ನು ಆತನು ನಮಗೆ ಕೊಟ್ಟನು: ನೀತಿವಂತರೆಂಬ ನಿರ್ಣಯ. ಆತನ ಕೃಪೆಯ ಕಾರಣದಿಂದ ನಾವು ಯಾವದಕ್ಕೆ ಯೋಗ್ಯರಾಗಿದ್ದೇವೋ ಅದನ್ನು ನಮಗೆ ಆತನು ಕೊಡಲಿಲ್ಲ: ಕೋಪ.

*ಮುಕ್ತಾಯ.* ನಾವು ಈ ಸತ್ಯಗಳ ಕುರಿತು ಆಲೋಚಿಸುತ್ತಿರುವ ವೇಳೆ, ನಮಗೆ ಕೆಲವು ಪ್ರಾಮುಖ್ಯವಾದ ಪ್ರಶ್ನೆಗಳನ್ನು ಕೇಳಿಕೊಳ್ಳತಕ್ಕದ್ದು. ನಾವು ನಮ್ಮ ಪಾಪಗಳಿಂದ ತೊಳೆಯಲ್ಪಟ್ಟವರಾಗಿ ಗತಕಾಲದ ರಕ್ಷಣೆಯನ್ನು ಅನುಭವಿಸಿದ್ದೇವೋ (ಅಪೊಸ್ತಲರ

ಕೃತ್ಯಗಳು 22:16)? ನಾವು ದೇವರ ವಾಕ್ಯದ ಬೆಳಕಿನಲ್ಲಿ ನಡೆಯುವವರಾಗಿ ಮತ್ತು ಕ್ರಿಸ್ತನ ರಕ್ತದಲ್ಲಿ ನಿರಂತರವಾಗಿ ನಮ್ಮ ಆತ್ಮಗಳನ್ನು ಶುದ್ಧಮಾಡಿಕೊಳ್ಳುವವರಾಗಿ ಪ್ರಸ್ತುತಕಾಲದ ರಕ್ಷಣೆಯನ್ನು ಆನಂದಿಸುತ್ತಿದ್ದೇವೋ (1 ಯೋಹಾನ 1:7, 9)? ಹಾಗಿರುವದಾದಲ್ಲಿ, ನಾವು ಭವಿಷ್ಯತ್ಕಾಲದ ರಕ್ಷಣೆಯ ನಿರೀಕ್ಷೆಯಲ್ಲಿ ಜೀವಿಸಬಲ್ಲೆವು, ಆಗ ನಾವು ಯಜ್ಞದ ಕುರಿಯಾದಾತನ ರಕ್ತದಲ್ಲಿ ನಿಲುವಂಗಿಗಳನ್ನು ಶುಭ್ರಮಾಡಿಕೊಂಡವರಾಗಿ ದೇವರ ಸಿಂಹಾಸನದ ಸುತ್ತಲು ಕೂಡಿಬರುವೆವು (ಪ್ರಕಟನೆ 7:14).

### "ಕ್ರಿಸ್ತನು ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು" (5:6)

Charles H. Spurgeon ಒಮ್ಮೆ ಹೀಗೆ ಹೇಳಿದನು,

> ಅದನ್ನು ಕೂಗಿಹೇಳಿರಿ, ಪಿಸುಮಾತಿನಲ್ಲಿ ಹೇಳಿರಿ; ಅದನ್ನು ದೊಡ್ಡಕ್ಷರಗಳಲ್ಲಿ ಮುದ್ರಿಸಿರಿ, ಅಥವಾ ದೊಡ್ಡ ಕೈಯಲ್ಲಿ ಬರೆಯಿರಿ. ಅದನ್ನು ಗಾಂಭೀರ್ಯವಾಗಿ ಮಾತಾಡಿರಿ; ಅದು ತಮಾಷೆಯ ಸಂಗತಿಯಲ್ಲ. ಅದನ್ನು ಹರ್ಷದೊಂದಿಗೆ ತಿಳಿಸು; ಅದು ದುಃಖಕ್ಕಾಗಿರುವ ವಿಚಾರವಲ್ಲ. ಅದರ ಬಗ್ಗೆ ದೃಢವಾಗಿ ಮಾತಾಡಿರಿ; ಅದೊಂದು ಪ್ರಶ್ನಾತೀತವಾದ ಸತ್ಯ. ಅದರ ಬಗ್ಗೆ ಹಂಬಲದಿಂದ ಮಾತಾಡಿರಿ; ಯಾಕೆಂದರೆ ಎಲ್ಲಾ ಮನುಷ್ಯರ ಆತ್ಮಗಳನ್ನು ಉಜ್ಜೀವಗೊಳಿಸಬಲ್ಲ ಯಾವದಾದರೂ ಸತ್ಯವು ಇರುವದಾದರೆ ಅದು ಇದುವೇ. ಅದರ ಬಗ್ಗೆ ಭಕ್ತಿಹೀನರು ಜೀವಿಸುವ ಸ್ಥಳಗಳಲ್ಲಿ ಮಾತಾಡು; ಮತ್ತು ಅದು ನಿನ್ನ ಸ್ವಂತ ಮನೆಯೇ. ಅದರ ಬಗ್ಗೆ ಹಾದರದ ಅಡ್ಡೆಗಳಲ್ಲಿ ಮಾತಾಡಿರಿ. ಅದನ್ನು ಸೆರೆಮನೆಗಳಲ್ಲಿ ತಿಳಿಸಿರಿ; ಮತ್ತು ಮರಣದ ಹಾಸಿಗೆ ಬಳಿಯಲ್ಲಿ ಕುಳಿತುಕೊಳ್ಳಿರಿ ಹಾಗೂ ಒಂದು ಮೆಲ್ಲನೆಯ ಪಿಸುಮಾತಿನಲ್ಲಿ ಹೇಳಿರಿ—"ಕ್ರಿಸ್ತನು ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು."[68]

ನಮಗೆ ಈ ರೀತಿಯ ಪ್ರೀತಿಯನ್ನು ಅರ್ಥಮಾಡಿಕೊಳ್ಳುವದು ಕಠಿಣವಾಗಿರುತ್ತದೆ. ನೀವು ನನ್ನನ್ನು ಕೇಳುವದಾದರೆ, "ನೀನು ನಿನ್ನ ಹೆಂಡತಿಯನ್ನು ಪ್ರೀತಿಸುತ್ತೀಯಾ?" ನನ್ನ ಉತ್ತರವು ಹೀಗಿರಬಲ್ಲದು, "ಖಂಡಿತವಾಗಿಯೂ, ನಾನು ಆಕೆಯನ್ನು ಪ್ರೀತಿಸುತ್ತೇನೆ. ಆಕೆಯು ಉಪಕಾರಿ ಮತ್ತು ಪ್ರೀತಿಯುಳ್ಳ ಸ್ತ್ರೀಯಾಗಿದ್ದಾಳೆ. ಆಕೆಯ ಮುಗುಳ್ನಗು ಸುಂದರವಾಗಿರುತ್ತದೆ. ಆಕೆ ನನ್ನನ್ನು ಪ್ರೀತಿಸುತ್ತಾಳೆ ಮತ್ತು ನನಗಾಗಿ ಪ್ರತಿ ದಿನವೂ ತ್ಯಾಗಗಳನ್ನು ಮಾಡುತ್ತಾಳೆ." ನಾನು ಆ ರೀತಿಯಾಗಿ ಉತ್ತರಿಸುವದಾದರೆ, ನಾನು ಏಕೆ ನನ್ನ ಹೆಂಡತಿಯನ್ನು ಪ್ರೀತಿಸುತ್ತೇನೆಂಬದನ್ನು ನೀವು ಅರ್ಥಮಾಡಿಕೊಳ್ಳುವಿರಿ. ಹೇಗೂ, ನಾನು ಹೀಗೇ ಹೇಳಿದ್ದರೆ ಹೇಗಿರುತ್ತದೆ, "ಖಂಡಿತವಾಗಿಯೂ, ನಾನು ನನ್ನ ಹೆಂಡತಿಯನ್ನು ಪ್ರೀತಿಸುತ್ತೇನೆ. ಆಕೆಯು ಸಭ್ಯತೆಯಿಲ್ಲದವಳು ಮತ್ತು ಕುರೂಪಿ ಮತ್ತು ನನಗೆ ನೋವುಂಟು ಮಾಡುವದಕ್ಕೇ ಎಲ್ಲವನ್ನೂ ಮಾಡುತ್ತಾಳೆ. ಆಕೆಯು ನನ್ನನ್ನು ದ್ವೇಷಿಸುತ್ತಾಳೆ"? ಆಗ ನಿಮಗೆ ನಾನು ಆಕೆಯನ್ನು ಏಕೆ ಪ್ರೀತಿಸುತ್ತೇನೆಂಬುದನ್ನು ಆರ್ಥಮಾಡಿಕೊಳ್ಳಲು ಬಹಳ ಕಷ್ಟಕರವಾಗುತ್ತದೆ, ಅಲ್ಲವೇ? ಹಾಗಾದರೆ, ಇದು ಎಷ್ಟು ಆಶ್ಚರ್ಯವಾದದ್ದು, ನಾವು ಭಕ್ತಿಹೀನ ಪಾಪಿಗಳೂ, ದೇವರ ವೈರಿಗಳಾಗಿದ್ದಾಗಲೂ ಆತನು ನಮ್ಮನ್ನು ಪ್ರೀತಿಸಿದನಲ್ಲವೇ!

ನಾನು ಯೇಸುವಿನ ಸ್ಥಾನದಲ್ಲಿದ್ದರೆ ಹೇಗೆ ಪ್ರತಿಕ್ರಿಯಿಸುವೆನೆಂದು ನನ್ನೊಳಗೆ ನಾನೇ ಕೇಳಿಕೊಳ್ಳುತ್ತೇನೆ. ನಾನು ನನ್ನ ಮುಂದೆ Adolf Hitler-ಸರ್ವನಾಶಕ್ಕೆ (ಪೂರ್ಣಾಹುತಿ) ಜವಾಬ್ದಾರನು, ಅರವತ್ತು ಲಕ್ಷ ಯೆಹೂದ್ಯರ ಮತ್ತು ಇತರ ಜನಾಂಗದವರ ಮಾರಣಹೋಮಕ್ಕೆ ಕಾರಣನಾದವನು-ನಿಂತುಕೊಂಡಿರುವದನ್ನು ಊಹಿಸಿಕೊಳ್ಳುತ್ತೇನೆ. ನನ್ನ ಮುಂದೆ ಸ್ವತಃ ನಾನು ಸಾಯಬೇಕೋ ಅಥವಾ Hitlerನು ಸಾಯಬೇಕೋ ಎಂಬ ಆಯ್ಕೆಗಳು ಇಡಲ್ಪಟ್ಟರೆ ಹೇಗಿರುತ್ತದೆ? ನನಗಂತೂ ಆಯ್ಕೆ ಮಾಡಿಕೊಳ್ಳುವದು ಸುಲಭವಾಗಿರುತ್ತದೆ; ನಾನು ಜೀವಿಸುವದನ್ನು ಆರಿಸಿಕೊಳ್ಳುತ್ತೇನೆ. ಹೇಗೂ, ಯೇಸುವಿಗೆ ಅದೇ ರೀತಿಯ ಆಯ್ಕೆಗಳು ಕೊಡಲ್ಪಟ್ಟಾಗ, ಆತನು ಸಾಯುವದನ್ನು ಆರಿಸಿಕೊಂಡನು (ನೋಡಿರಿ ಯೋಹಾನ 10:18; ಫಿಲಿಪ್ಪಿ 2:5-8)!

## "ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟನು" (5:8)

ಆಫ್ರಿಕಾದ ಹೊಸ ವಿಶ್ವಾಸಿಯೊಬ್ಬನು ಮಿಶನರಿಗೆ ಹೀಗೆ ಹೇಳಿದನು, "ನನಗೆ ಕ್ರಿಸ್ತನ ಮರಣದ ಕಥೆಯು ಮೊದಲು ಓದಿ ಹೇಳಲ್ಪಟ್ಟಾಗ, ನಾನು ಯೂದನನ್ನು, ಪಿಲಾತನನ್ನು ಮತ್ತು ಯೆಹೂದ್ಯರನ್ನು ಹಾಗೂ ಸೈನಿಕರನ್ನು ಶಪಿಸಿದೆನು. ಆದರೆ ಕ್ರಿಸ್ತನು *ಏಕೆ* ಮರಣಿಸಿದನೆಂಬದನ್ನು ಅರ್ಥಮಾಡಿಕೊಂಡಾಗ, ನಾನು ನನ್ನನ್ನೇ ಶಪಿಸಿಕೊಂಡೆನು-ಯಾಕೆಂದರೆ ಆತನನ್ನು ಶಿಲುಬೆಗೆ ಏರುವಂತೆ ಮಾಡಿದ್ದು *ನನ್ನ* ಪಾಪಗಳೇ."[69]

## "ಒಬ್ಬ ಮನುಷ್ಯನ ಮೂಲಕ" (5:12-21)

ರೋಮಾಪುರ ಪತ್ರಿಕೆಯಲ್ಲಿನ ನಮ್ಮ ಈ ಭಾಗದ ಪ್ರಯಾಣದಲ್ಲಿ ರಸ್ತೆಯ ಫಲಕವೊಂದನ್ನು ನೆಡುವದಾದರೆ, ಅದು ಈ ರೀತಿ ಇರಬಹುದಾಗಿದೆ, "ಅಪಾಯಕರ ಪರಿಸ್ಥಿತಿಗಳು! ನಿಮ್ಮ ಮುಂದಿನ ಪ್ರಯಾಣಕ್ಕೆ ನೀವೇ ಜವಾಬ್ದಾರರು!" ಈ ವಾಕ್ಯಭಾಗದ ಮೂಲಕ ಸಾಗಿಬಂದ ನಮ್ಮ ಹಾದಿಯು ಸುಗಮವಾಗಿರಲಿಲ್ಲ.

*ಈ ವಾಕ್ಯಭಾಗವು ಕಲಿಸದ ಸಂಗತಿ ಯಾವದು.* ರೋಮಾ 5:12-21 ವಾಕ್ಯಭಾಗವು ಅದು ಏನು *ಕಲಿಸುತ್ತದೆ* ಮತ್ತು ಏನನ್ನು *ಕಲಿಸುವದಿಲ್ಲ* ಎಂಬ ವಿಚಾರದಲ್ಲಿ ಹೆಚ್ಚು ಖಚಿತವಾಗಿರಬಹುದಾದ ವಾಕ್ಯಭಾಗಗಳಲ್ಲೊಂದಾಗಿದೆ. ಕೆಲವರು ಅಂಥ ವಿಚಾರವನ್ನು ಕುಚೋದ್ಯಮಾಡುತ್ತಾರೆ. ಅವರು ಕೇಳುತ್ತಾರೆ, "ಅದು ಏನನ್ನು ಕಲಿಸುತ್ತದೆಂಬದೇ ನಿನಗೆ ಗೊತ್ತಿಲ್ಲದಿದ್ದರೆ ಅದು ಏನನ್ನೂ ಕಲಿಸುವದಿಲ್ಲ ಎಂಬದನ್ನು ನೀನು ಅಷ್ಟೊಂದು ಖಚಿತವಾಗಿ ತಿಳಿದಿರಲು ಹೇಗೆ ಸಾಧ್ಯ?" ಇದು ಹೇಗೆ ಸಾಧ್ಯವೆಂಬದಕ್ಕೆ ನಾನು ನಿಮಗೆ ದೃಷ್ಟಾಂತವನ್ನು ಕೊಡುತ್ತೇನೆ. ಇಬ್ಬರು ಪುರುಷರು ನಡೆದು ಹೋಗುತ್ತಿರುವ ವೇಳೆ, ಒಬ್ಬ ಸ್ತ್ರೀಯು ಅವರ ಮುಂದೆ ನಡೆದುಕೊಂಡು ಬರುತ್ತಾಳೆ. ಒಬ್ಬನು ಮತ್ತೊಬ್ಬನಿಗೆ ಹೇಳುತ್ತಾನೆ, "ಆ ಹೆಂಗಸು ಯಾರು? ಆಕೆ ನಿನ್ನ ಹೆಂಡತಿಯಾ?" ಎರಡನೆಯವನು ಉತ್ತರಿಸುತ್ತಾನೆ, "ಆಕೆಯು ಯಾರೆಂದು ನನಗೆ ಗೊತ್ತಿಲ್ಲ, ಆದರೆ ಆಕೆಯು ಯಾರಾಗಿರುವದಿಲ್ಲ ಎಂಬದನ್ನಂತೂ ನಾನು ನಿನಗೆ ಹೇಳಬಲ್ಲೆನು. ಆಕೆಯು ನನ್ನ ಹೆಂಡತಿ ಅಲ್ಲ." ನನಗೆ 5:12-21ರ ಪ್ರತಿಯೊಂದು ವಿವರಗಳೂ ಖಚಿತವಾಗಿ ತಿಳಿಯದಿರಬಹುದು, ಆದರೆ ಅದು ಕೆಲವೊಂದು

ಸಿದ್ಧಾಂತಗಳನ್ನು ಕಲಿಸುವದಿಲ್ಲವೆಂಬದಂತೂ ನನಗೆ ದೃಢವಾಗಿ ಗೊತ್ತಿದೆ.

1. ನಾವು ಆದಾಮನ ಪಾಪದ ಅಪರಾಧವನ್ನು ಅನುವಂಶಿಕವಾಗಿ ಪಡೆದಿದ್ದೇವೆಂಬದನ್ನು ಕಲಿಸುವದಿಲ್ಲ. ತಮ್ಮನ್ನು "ಕ್ರೈಸ್ತರು" ಎಂದು ಕರೆದುಕೊಳ್ಳುವವರ ಮಧ್ಯದಲ್ಲಿ ಒಂದು ವ್ಯಾಪಕವಾದ ನಂಬಿಕೆಯು ಇರುತ್ತದೇನೆಂದರೆ, ಯಾವದೋ ಒಂದು ರೀತಿಯಲ್ಲಿ ನಮಗೆ ಆದಾಮನ ಪಾಪದ ದೋಷವು ಅನುವಂಶಿಕವಾಗಿ ಬಂದಿರುತ್ತದೆಂಬದು. ಮೂರನೆಯ ಶತಮಾನದಲ್ಲಿ, ಪೌಲನ ನಂತರ ಹೆಚ್ಚುಕಡಿಮೆ ಎರಡುನೂರು ವರ್ಷಗಳ ಬಳಿಕ, ಅಲೆಗ್ಝಾಂಡ್ರಿಯಾದ ವೇದಾಂತಿ Origen ಉಪದೇಶಿಸಿದ್ದೇನೆಂದರೆ "ಹೊಸದಾಗಿ ಹುಟ್ಟಿದ ಕೂಸುಗಳು ಪಾಪದಿಂದ ಮುಕ್ತರಲ್ಲ" ಎಂಬದಾಗಿ.[70] ಐದನೆಯ ಶತಮಾನದಲ್ಲಿ, Augustine ಆ ವಿಚಾರವನ್ನು ವಿಸ್ತರಿಸಿ ಹೆಚ್ಚು ಪ್ರಖ್ಯಾತಿಗೊಳಿಸಿದನು. ಕ್ಯಾಥೋಲಿಕರು ಅದನ್ನು "ಮೂಲ ಪಾಪದ ಸಿದ್ಧಾಂತ" ಎಂದು ಕರೆದರು. ಅನಂತರದಲ್ಲಿ, ಪ್ರೊಟೆಸ್ಟೆಂಟರು ಆ ಪರಿಕಲ್ಪನೆಯನ್ನು ಅಳವಡಿಸಿಕೊಂಡರು, ಅದಕ್ಕೆ "ಅನುವಂಶಿಕವಾದ ಭ್ರಷ್ಟತೆ" ಅಥವಾ "ಸಂಪೂರ್ಣ ಅನುವಂಶಿಕ ಭ್ರಷ್ಟತೆ" ಎಂದು ಕರೆಯುವದಕ್ಕೆ ಇಷ್ಟಪಟ್ಟರು. ಅವರು "ಕೂಸುಗಳಲ್ಲಿ ಭ್ರಷ್ಟತೆ" ಇರುವ ಬಗ್ಗೆ ಮಾತಾಡುತ್ತಾ ಅದು ಆದಾಮನಿಂದ ಬಾಧ್ಯವಾಗಿ ಬಂದದ್ದು ಎಂದು ನಂಬಿದರು. John Calvin ವಾದಿಸಿದ್ದೇನೆಂದರೆ ಆದಾಮನು "ಭ್ರಷ್ಟನಾದನು, ಕೆಟ್ಟುಹೋದನು, ಪಾಪಿಷ್ಠನಾದನು ಮತ್ತು ನಮ್ಮ ಸ್ವಭಾವವನ್ನು ಹಾಳುಗೊಳಿಸಿದನು."[71]

"ಸಂಪೂರ್ಣ ಅನುವಂಶಿಕ ಭ್ರಷ್ಟತೆ" ಎಂಬುದೇ ಕೆಲವು ಸಾರಿ "Calvinistic theology" ಎಂದು ಕರೆಯಲ್ಪಡುವದರ ಮೂಲಭೂತ ತತ್ವವಾಗಿರುತ್ತದೆ. ಜನರು ರಕ್ಷಣೆ ಹೊಂದಲ್ಪಡುವ ಕುರಿತ Calvinistic ಪರಿಕಲ್ಪನೆಯಲ್ಲಿ ಈ "ಸಂಪೂರ್ಣ ಅನುವಂಶಿಕ ಭ್ರಷ್ಟತೆ" ಎಂಬ ವಿಚಾರವು ಹೇಗೆ ಸರಿಹೊಂದುತ್ತದೆಂಬದಕ್ಕೆ ಒಂದು ಮೇಲ್ನೋಟವು ಈ ಕೆಳಗಿನಂತಿರುತ್ತದೆ:

- ಜನರು ಆದಾಮನ ಪಾಪದಿಂದ ಹೊಲೆಗೊಂಡವರಾಗಿ ಹುಟ್ಟುತ್ತಾರೆ; ಆ ಕಾರಣದಿಂದ ಅವರು ತಮ್ಮನ್ನು ರಕ್ಷಿಸಿಕೊಳ್ಳುವದಕ್ಕೆ ಏನನ್ನೂ ಸಹ ಮಾಡುವದಕ್ಕೆ ಅಸಮರ್ಥರಾಗಿರುತ್ತಾರೆ ("ಸಂಪೂರ್ಣ ಅನುವಂಶಿಕ ಭ್ರಷ್ಟತೆ").
- ದೇವರು ಜನರನ್ನು ಪುನರುಜ್ಜೀವನಗೊಳಿಸುವದಕ್ಕೆ ಅವರ ಮೇಲೆ ಪವಿತ್ರಾತ್ಮನನ್ನು ಕಳುಹಿಸಿ ಅವರನ್ನು ರಕ್ಷಿಸುವನೆಂದು ಕ್ಯಾಲ್ವಿನ್ವಾದಿಗಳು ನಿರೀಕ್ಷಿಸುತ್ತಾರೆ ("ಪವಿತ್ರಾತ್ಮನ ನೇರವಾದ ಕಾರ್ಯಾಚಾರಣೆ").
- ಜನರು ರಕ್ಷಣೆ ಹೊಂದುವದಕ್ಕಾಗಿ ಏನನ್ನೂ ಮಾಡಲಾಗದು ಎಂದು ನಂಬುವ ಕ್ಯಾಲ್ವಿನ್ವಾದಿಗಳು ಹೇಳುವದೇನೆಂದರೆ ತಾವು ಕಳೆದು ಹೋಗುವದಕ್ಕೆ ಸಹ ಏನನ್ನೂ ಮಾಡಲಾಗದು ("ನಂಬಿಕೆ ಭ್ರಷ್ಟತೆಯ ಅಸಾಧ್ಯತೆ").

"ಮೂಲ ಪಾಪ" ಎಂಬ ಸಿದ್ಧಾಂತದಿಂದುಂಟಾದ ಇನ್ನೊಂದು ಸಂಗತಿಯೆಂದರೆ

ಕ್ಯಾಥೋಲಿಕರು ಆದಾಮನ ಪಾಪದಿಂದ (ಅವರು ನಂಬುವ ಪ್ರಕಾರ) ದೋಷಪೂರಿತರಾಗಿ ಸಾಯುವಂಥ ಕೂಸುಗಳ ಬಗ್ಗೆ ಚಿಂತಿಸಲಾರಂಭಿಸಿದರು. ಅವರು ಆ "ಮೂಲ ಪಾಪ" ವನ್ನು ರದ್ದುಗೊಳಿಸುವದಕ್ಕೋಸ್ಕರ ಕೂಸುಗಳಿಗೆ ದೀಕ್ಷಾಸ್ನಾನ ಮಾಡಿಸಲಾರಂಭಿಸಿದರು. ಅದರಿಂದ ದೀಕ್ಷಾಸ್ನಾನಗೊಳ್ಳದ ಮಕ್ಕಳ ಸಮಸ್ಯೆಯು ಹಾಗೇಯೇ ಉಳಿಯಿತು, ಆದ್ದರಿಂದ ಅವರು "ದೀಕ್ಷಾಸ್ನಾನವಾಗದ" ಕೂಸುಗಳಿಗಾಗಿ "Limbo" ಎಂಬ ಒಂದು ಮುಂದಿನ-ಲೋಕದ ಜಗತ್ತನ್ನು ಆವಿಷ್ಕರಿಸಿದರು.[72] ಒಂದು ಸುಳ್ಳು ಸಿದ್ಧಾಂತವು ಹೇಗೆ ಅಧಿಕಗೊಳ್ಳುತ್ತಾ ಸಾಗುತ್ತದೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ನಾವು ಪುನಃ "ಮೂಲ ಪಾಪದ ಸಿದ್ಧಾಂತ" ಕ್ಕೇ ಬರೋಣ: ಜನರು ಹೇಗೆ ಅಂತಹ ಒಂದು ಉಪಾಯವನ್ನು ಕಂಡುಹಿಡಿದರು? ಆ ಸಿದ್ಧಾಂತದ ಪ್ರತಿಪಾದಕರು ಪಾಪದ ದೀರ್ಘಕಾಲ ಉಳಿಯುವ ಮತ್ತು ವ್ಯಾಪಕವಾಗಿ ವಿಸ್ತರಿಸುವ ಕುರಿತು ಒತ್ತಿ ಹೇಳುವ ವಚನಗಳನ್ನು ಉಲ್ಲೇಖಿಸುತ್ತಾರೆ (ಉದಾ, ವಿಮೋಚನಕಾಂಡ 20:5) ಅಥವಾ ಮಾನವರ ಪಾಪವನ್ನು ಎತ್ತಿ ತೋರಿಸುವದಕ್ಕೆ ಅತಿಶಯೋಕ್ತಿಯನ್ನು ಉಪಯೋಗಿಸುವ ವಚನಗಳನ್ನು ಉಲ್ಲೇಖಿಸುತ್ತಾರೆ (ಉದಾ: ಕೀರ್ತನೆ 51:5[73]). ರೋಮಾ 5:12-21, ಸಹ ಅವರ ಪ್ರಾಥಮಿಕ ಸಾಕ್ಷ್ಯಾಧಾರದ ವಾಕ್ಯಭಾಗವಾಗಿರುತ್ತದೆ. Edward ಬರೆದದ್ದೇನೆಂದರೆ ಈ ವಾಕ್ಯಭಾಗದ 12ನೇ ವಚನವು "ಮೂಲ ಪಾಪದ ಸಿದ್ಧಾಂತಕ್ಕೆ ಉತ್ಪತ್ತಿಸ್ಥಾನವಾಗಿ ಇರುತ್ತದೆ."[74]

ಈಗಾಗಲೇ ತಿಳಿಸಿರುವ ಪ್ರಕಾರ, ಈ ಸಿದ್ಧಾಂತವು, ಒಂದಿಲ್ಲಾ ಒಂದು ರೂಪದಲ್ಲಿ ಕ್ರೈಸ್ತತ್ವದೊಳಗೆ ಬಹಳ ಜಾಗತಿಕವಾಗಿ ಅಂಗೀಕರಿಸಲ್ಪಟ್ಟಿರುವ ತತ್ವವಾಗಿರುತ್ತದೆ. ಹಾಗಿದ್ದರೂ, ಇದು ರೋಮಾ 5ನೇ ಅಧ್ಯಾಯದಲ್ಲಿ ಕಲಿಸಲ್ಪಟ್ಟಿರುವದಿಲ್ಲ ಎಂಬದನ್ನು ನಾನು ದೃಢವಿಶ್ವಾಸದಿಂದ ಹೇಳಬಲ್ಲೆನು. ಆರಂಭದಲ್ಲಿ ನೋಡುವದಾದರೆ, ಈ ವಾಕ್ಯಭಾಗದಲ್ಲಿ ಪೌಲನ ಗುರಿಯು ಪಾಪದ ಸ್ವಭಾವದ ಕುರಿತು ಒಂದು ಸವಿಸ್ತಾರವಾದ ಅಧ್ಯಯನವನ್ನು ಮುಂದಿಡುವದಾಗಿರಲಿಲ್ಲ. ಪೌಲನಿಗೆ ಅಂಥ ಯಾವದೇ ಉದ್ದೇಶವಿರಲಿಲ್ಲ ಎಂಬದನ್ನು ಬಹಪಾಲು ವ್ಯಾಖ್ಯಾನಕಾರರು ಒಪ್ಪಿಕೊಳ್ಳುತ್ತಾರೆ.

> Moo ಬರೆದದ್ದೇನೆಂದರೆ, "ರೋಮಾ 5:12-21ರ ವಾಕ್ಯಭಾಗವು 'ಮೂಲ ಪಾಪ'ವನ್ನು ಮುಖ್ಯ ಗಮನವಾಗಿಟ್ಟು ಕೊಂಡಿರುವದಿಲ್ಲ."[75]
>
> Edwards ಹೇಳಿದ್ದೇನೆಂದರೆ, "ವಾಸ್ತವದಲ್ಲಿ, 12ನೇ ವಚನವು ಪಾಪದ ಸಮಸ್ಯೆಯ ಕುರಿತು ಸೈದ್ಧಾಂತಿಕ ದೃಷ್ಟಿಕೋನದಿಂದ ಯಾವದೇ ಚರ್ಚೆಯನ್ನು ಮಾಡುವದಿಲ್ಲ . . . (ಪೌಲನ) ಉದ್ದೇಶವು ಇಲ್ಲಿ ಮೂಲ ಪಾಪದ ಸಿದ್ಧಾಂತವನ್ನು ಅಭಿವೃದ್ಧಿಪಡಿಸುವದಾಗಿರಲಿಲ್ಲ."[76]
>
> Morris ಮುಕ್ತಾಯಕ್ಕೆ ಬಂದಿದ್ದೇನೆಂದರೆ, "ಪೌಲನು ಭ್ರಷ್ಟ ಸ್ವಭಾವ ಅಥವಾ ಪಾಪದ ಪ್ರವೃತ್ತಿಯ ಕುರಿತು ಏನನ್ನೂ ಹೇಳುವದಿಲ್ಲ; ಅಂಥ ನಿಲುವುಗಳು ವಾಕ್ಯಭಾಗದಲ್ಲಿ ಏನನ್ನಾದರೂ ಹುಡುಕಿ ಓದುವಂತ ವುಗಳಾಗಿರುತ್ತವೆ."[77]

ಅಷ್ಟುಮಾತ್ರವಲ್ಲದೆ, 12 ರಿಂದ 21 ವಚನಗಳು "ಅನುವಂಶಿಕ ಭ್ರಷ್ಟತೆ" ಬಗ್ಗೆ

ಕಲಿಸುತ್ತವೆಂಬ ಹೇಳಿಕೆಯನ್ನು ನಾನು ತಿರಸ್ಕರಿಸುತ್ತೇನೆ ಯಾಕೆಂದರೆ ಅಂಥ ಮುಕ್ತಾಯಕ್ಕೆ ಬರುವದು, ಬೈಬಲ್ ವ್ಯಾಖ್ಯಾನದ ಮೂಲಭೂತ ನಿಯಮದ ಉಲ್ಲಂಘನೆ ಯಾಗುತ್ತದೆ. ಆ ನಿಯಮವನ್ನು ಹೀಗೆ ಬಣ್ಣಿಸಬಹುದು: "ಇನ್ನೊಂದೆಡೆಯಲ್ಲಿರುವ ಸರಳವಾದ ವಾಕ್ಯಭಾಗಕ್ಕೆ ವಿರುದ್ಧವಾಗುವ ರೀತಿಯಲ್ಲಿ ಅಸ್ಪಷ್ಟವಾಗಿರುವ ಒಂದು ವಾಕ್ಯಭಾಗವನ್ನು ವ್ಯಾಖ್ಯಾನಿಸಬಾರದು." ಹೆಚ್ಚುಕಡಿಮೆ ಎಲ್ಲರೂ ಒಪ್ಪಿಕೊಳ್ಳುವ ದೇನೆಂದರೆ, ಈ ವಚನಗಳು ಒಂದು ಭಾಗದಲ್ಲಿ ಅಥವಾ ಪೂರ್ತಿಯಾಗಿ ಅಸ್ಪಷ್ಟ ವಾಗಿರುತ್ತವೆ. ಸಮಸ್ಯೆಯು ಹಾಗಿರುವದರಿಂದ, ಈ ವಾಕ್ಯಭಾಗವನ್ನು ಈ ಕೆಳಗಿರುವ ಪ್ರಕಾರ ಸತ್ಯವೇದದ ಸರಳ ಉಪದೇಶಗಳಿಗೆ ತದ್ವಿರುದ್ಧವಾಗಿರದ ರೀತಿಯಲ್ಲಿ ವ್ಯಾಖ್ಯಾನಿಸತಕ್ಕದ್ದು:

> ಕೂಸುಗಳು ನಿರ್ಮಲರಾಗಿಯೂ ಶುದ್ಧರಾಗಿಯೂ, ಆದಾಮನ ಪಾಪದ ಯಾವದೇ ಭ್ರಷ್ಟತೆ ಅಥವಾ ದೋಷವಿಲ್ಲ ದವರಾಗಿಯೂ ಹುಟ್ಟುತ್ತಾರೆ (ನೋಡಿರಿ ಮತ್ತಾಯ 18:3; 19:14).
>
> ಪ್ರತಿಯೊಬ್ಬನು ಸಹ ತನ್ನ ಪಾಪಕ್ಕೆ ತಾನೇ ಜವಾಬ್ದಾರನಾಗಿದ್ದಾನೆ (ನೋಡಿರಿ ಎಫೆಸ 2:1; ಕೊಲೊಸ್ಸೆ 2:13), ಹೊರತು ತನ್ನ ತಂದೆಯ ಪಾಪಕ್ಕೆ (ಯೆಹೆಜ್ಕೇಲ 18:20) ಅಥವಾ ನಮ್ಮ ಪಿತೃವಾದ ಆದಾಮನ ಪಾಪಕ್ಕಾಗಲಿ ಜವಾಬ್ದಾರನಲ್ಲ.

ಆದಾಮನ ಪಾಪದಿಂದ ನಾವು ಜೀವಿಸುವ ಈ ಲೋಕದ ಮೇಲೆ ವಿನಾಶಕಾರಿ ಪರಿಣಾಮವುಂಟಾಗಲಿಲ್ಲವೆಂಬದು ನನ್ನ ಅಭಿಪ್ರಾಯವಾಗಿದೆಯೋ? ಇಲ್ಲವೇ ಇಲ್ಲ. ನಾವು ಆದಾಮನ ಪಾಪದ *ಅಪರಾಧವನ್ನು* ಬಾಧ್ಯವಾಗಿ ಹೊಂದುವದಿಲ್ಲವೆಂಬದು ನಿಜವೇ, ಆದರೂ ಆತನ ಪಾಪದ ಬಹುವ್ಯಾಪಕವಾದ *ದುಷ್ಪರಿಣಾಮವನ್ನಂತೂ* ಬಾಧ್ಯವಾಗಿ ಹೊಂದಿದ್ದೇವೆ. 17ನೇ ವಚನದಲ್ಲಿ JB ಯು ಹೀಗೆ ಹೇಳುತ್ತದೆ, "ಒಬ್ಬ ಮನುಷ್ಯನ ಬೀಳುವಿಕೆಯ *ಪರಿಣಾಮವಾಗಿ* ಮರಣವು ಪ್ರತಿಯೊಬ್ಬನ ಮೇಲೆಯೂ ಆಳ್ವಿಕೆ ಮಾಡುತ್ತಿತ್ತು" (ಒತ್ತಿ ಹೇಳಿದ್ದು ನನ್ನದು). "ಅಪರಾಧ" ಮತ್ತು "ಪರಿಣಾಮ" ನಡುವಿನ ವ್ಯತ್ಯಾಸವೇನು? ತಂದೆ ಕೊಲೆಯ ಅಪರಾಧಿಯಾಗಿದ್ದರೆ, ಆತನ ಅಪರಾಧವು ನನ್ನ ಮೇಲೆ ವರ್ಗಾಯಿಸಲ್ಪಡುವದಿಲ್ಲ; ಆ ಅಪರಾಧಕ್ಕಾಗಿ ನಾನು ನ್ಯಾಯವಿಚಾರಣೆಗೆ ಒಳಪಡುವದಿಲ್ಲ. ಹಾಗಿದ್ದರೂ, ಆತನ ಆ ಕೃತ್ಯದಿಂದಾಗಿ ನಾನು ಹಲವಾರು ಪರಿಣಾಮಗಳನ್ನು ಎದುರಿಸಬೇಕಾಗಬಹುದು-ಉದಾಹರಣೆಗೆ ಹೃದಯವೇದನೆ, ನೋವು ಮತ್ತು ಅವಮಾನ. ಪುನಃ, ನಾನು ಹೇಳುತ್ತೇನೆ, ಏನೆಂದರೆ ನಾವು ಆದಾಮನ ಅಪರಾಧವನ್ನು ಬಾಧ್ಯವಾಗಿ ಹೊಂದುವದಿಲ್ಲ, ಆದಾಗ್ಯೂ ಆತನ ಕೃತ್ಯದ ಪರಿಣಾಮವನ್ನು ಅನುದಿನವೂ ಅನುಭವಿಸುತ್ತೇವೆ.

ಯಾವ ಪರಿಣಾಮಗಳನ್ನು ಅನುಭವಿಸುತ್ತೇವೆ? 12ನೆ ವಚನವು ಹೇಳುವದೇನೆಂದರೆ, "ಒಬ್ಬ ಮನುಷ್ಯನಿಂದಲೇ ಪಾಪವು ಲೋಕದೊಳಗೆ ಸೇರಿತು." ಏದೆನ್ ತೋಟದಲ್ಲಿ, ದುಷ್ಟತನದ ಒಬ್ಬನೇ ಒಬ್ಬ ಪ್ರತಿನಿಧಿಯು ಇದ್ದದಕ್ಕೆ ಸಾಕ್ಷಿಯಿರುತ್ತದೆ. ಸರ್ಪವು

(ಆದಿಕಾಂಡ 3:1) ಸೈತಾನನ ಮರುವೇಷವಾಗಿದ್ದಿರಬೇಕು (ನೋಡಿರಿ ಪ್ರಕಟನೆ 12:9) ಅಥವಾ ಸೈತಾನನ ಒಬ್ಬ ಪ್ರತಿನಿಧಿಯಾಗಿದ್ದಿರಬಹುದಾಗಿದೆ. ಇಂದು, ನಮಗೆ ಹೇಳಲ್ಪಡುವದೇನೆಂದರೆ ನಾವು ". . . ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ಹೋರಾಡುವವರಾಗಿದ್ದೇವೆ" (ಎಫೆಸ 6:12). ಈ "ದುರಾತ್ಮಗಳ ಸೇನೆಯು" ಎಲ್ಲಿಂದ ಬಂದಿತು? ಒಂದು ರೀತಿಯಲ್ಲಿ, ಆದಾಮನ ಅವಿಧೇಯತೆಯು ದುಷ್ಟಶಕ್ತಿಗಳು ಲೋಕದೊಳಗೆ ನುಗ್ಗಿಬರುವಂತೆ "ಬಾಗಲನ್ನು ತೆರೆಯಿತೋ"? ನನಗೆ ತಿಳಿಯದು, ಆದರೆ ಭೂಮಿಯ ಮೇಲೆ ಕೆಟ್ಟತನವು ಹರಡಿಕೊಳ್ಳುವಂತೆ ಯಾವದೋ ಒಂದು ಕಾರಣವಾಗಿರುತ್ತದೆ.

ನಿರ್ದಿಷ್ಟವಾಗಿ, 12ನೇ ವಚನವು ಹೇಳುವದೇನೆಂದರೆ, "ಪಾಪದಿಂದ *ಮರಣವು* [ಲೋಕದೊಳಗೆ ಸೇರಿತು]" (ಒತ್ತು ಸೇರಿಸಲಾಗಿದೆ). ದೇವರು ಆದಾಮನಿಗೆ, "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ" ಎಂದು ಹೇಳಿದನು (ಆದಿಕಾಂಡ 2:17). ಈ ಎಚ್ಚರಿಕೆಯನ್ನು ಕೊಟ್ಟ ಮೇಲೆಯೂ, ಆತನು ಮತ್ತು ಹವ್ವಳು ಅದನ್ನು ತಿಂದರು (ಆದಿಕಾಂಡ 3:6). ತತ್ಪರಿಣಾಮವಾಗಿ, ಅವರು ತೋಟದಿಂದ ಹೊರಗೆ ಓಡಿಸಲ್ಪಟ್ಟರು ಮತ್ತು ಅವರಿಗೆ ಜೀವವೃಕ್ಷದ ಹಣ್ಣನ್ನು ತಿನ್ನುವದಕ್ಕಾಗಲಿಲ್ಲ (ಆದಿಕಾಂಡ 3:24). ಅದು ಸಂಭವಿಸಿದಾಗ, ಅವರ ದೇಹಗಳು ಕ್ಷೀಣಿಸಲಾರಂಭಿಸಿದವು; ಅವರು ಸಾಯಲಾರಂಭಿಸಿದರು. ಮರಣದ ಶಾಪವು ಲೋಕದೊಳಗೆ ಬಂದು ಬಿಟ್ಟಿತ್ತು. ಮರಣದ ನಂತರ ಉಂಟಾಗುವ ನೋವು ಮತ್ತು ಬಾಧೆಗಳ ಬಗ್ಗೆ ಯೋಚಿಸಿರಿ; ತೆರೆದ ಸಮಾಧಿಯ ಬಳಿಯಲ್ಲಿ ಸುರಿಸಲಾಗುವ ಕಣ್ಣೀರುಗಳ ಬಗ್ಗೆ ಯೋಚಿಸಿರಿ. ಪೌಲನು ಮರಣವನ್ನು ಒಂದು "ವೈರಿ" ಎಂದು ಕರೆದದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ (1 ಕೊರಿಂಥ 15:26). ಇದೆಲ್ಲವೂ ಆದಾಮನ ಪಾಪದ ಫಲವಾಗಿರುತ್ತದೆ.

ಸ್ವತಃ ಮರಣಕ್ಕಿಂತಲೂ ಹೆಚ್ಚು ಆಘಾತವೇನೆಂದರೆ ಯುಗಯುಗಗಳಿಂದಲೂ ಸೈತಾನನು ಮರಣವನ್ನು ಹೆದರಿಸಲು ಹಾಗೂ ವಂಚಿಸಲು ಉಪಯೋಗಿಸಿರುವ ರೀತಿ. ಯೇಸುವಿನ ಯಜ್ಞದ ಬಗ್ಗೆ ಮಾತಾಡುತ್ತಾ, ಇಬ್ರಿಯ ಪುಸ್ತಕದ ಲೇಖಕನು ಹೇಳಿದ್ದೇನೆಂದರೆ,

> ಇದಲ್ಲದೆ ಮಕ್ಕಳು [ಎಲ್ಲಾ ಮಾನವರು] ರಕ್ತಮಾಂಸಧಾರಿಗಳಾಗಿ ರುವದರಿಂದ ಆತನೂ [ಯೇಸು] ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿ ಬಿಡುವದಕ್ಕೂ ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತಮಾಂಸಧಾರಿ ಯಾದನು (ಇಬ್ರಿಯ 2:14, 15).

ಇಷ್ಟು ವರ್ಷಗಳಿಂದ, ಮರಣವು ಸೈತಾನನ "ದೊಡ್ಡ ಕೋಲು" ಆಗಿರುತ್ತದೆ, ತಾನು ಹೇಳಿದಂತೆ ಜನರನ್ನು ಒತ್ತಾಯಪಡಿಸುವ ಆಯುಧವಾಗಿರುತ್ತದೆ. ದೇವರಿಗೆ ಸ್ತೋತ್ರವಾಗಲಿ, ಯೇಸುವಿನ ಮರಣ ಹಾಗೂ ಪುನರುತ್ಥಾನಗಳ ಮೂಲಕ, ಕರ್ತನು ಸೈತಾನನ ಕೈಯೊಳಗಿಂದ "ದೊಡ್ಡ ಕೋಲ" ನ್ನು ಕಸಿದು ಕೊಂಡನು!

ಹೇಗೂ, ಒಂದನ್ನು ಅರ್ಥಮಾಡಿಕೊಳ್ಳಿರಿ, ಏನೆಂದರೆ, ಶಾರೀರಿಕ ಮರಣವು ಆದಾಮ ಮತ್ತು ಹವ್ವಳರು ಪಾಪ ಮಾಡಿದಾಗ ಹರಿದು ತೆಗೆಯಲಾದ ಸಮಸ್ಯೆಗಳ ಪೊಟ್ಟಣದ ಮೇಲೆ ಸುತ್ತಲ್ಪಟ್ಟಿದ್ದ ಒಂದು ಹೊದಿಕೆಯಾಗಿತ್ತಷ್ಟೆ. ದೇವರು ಹವ್ವಳಿಗೆ ಹೇಳಿದನು, “ನೀನು ಗರ್ಭಿಣಿಯಾಗುವ ಕಾಲದಲ್ಲಿ ಬಹು ಸಂಕಟಪಡಬೇಕೆಂದು ನಾನು ನೇಮಿಸಿದ್ದೇನೆ; ಕಷ್ಟದಿಂದಲೇ ಮಕ್ಕಳನ್ನು ಹೆರುವಿ” (ಆದಿಕಾಂಡ 3:16). ಆತನು ಆದಾಮನಿಗೆ ಹೇಳಿದ್ದೇನೆಂದರೆ,

> ತಿನ್ನಬಾರದೆಂದು ನಾನು ನಿನಗೆ
> ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು, . . . ಆ ಭೂಮಿಯಲ್ಲಿ ಮುಳ್ಳುಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು . . . ; ನೀನು ತಿರಿಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ;
> ಪುನಃ ಮಣ್ಣಿಗೆ ಸೇರತಕ್ಕವ ನಾಗಿದ್ದೀ (ಆದಿಕಾಂಡ 3:17-19).

ಆದಾಮನ ಪಾಪದಿಂದ ಎಲ್ಲಾ ಸೃಷ್ಟಿಯ ಮೇಲೆಯೂ ಪರಿಣಾಮವಾಗಿತ್ತು (ನೋಡಿರಿ 8:20-22). ಒಬ್ಬ ಸ್ತ್ರೀಯು ಪ್ರಸವವೇದನೆಯಿಂದ ಒದ್ದಾಡುವ ಪ್ರತಿ ಸಾರಿಯೂ, ಬೆವರು ಸುರಿಸುವ ರೈತನು ಇನ್ನೊಂದು ಕಳೆಯನ್ನು ಕಿತ್ತುವ ಪ್ರತಿ ಸಾರಿಯೂ, ಒಬ್ಬ ಉದ್ಯೋಗಿಯು ದಿನವೆಲ್ಲಾ ಪ್ರಯಾಸದಿಂದ ದುಡಿಯುವ ಪ್ರತಿ ಸಾರಿಯೂ, ಪ್ರತಿ ಸಾರಿ ಮತ್ತೊಂದು ಪ್ರಾಕೃತಿಕ ವಿಕೋಪ ಸಂಭವಿಸುವಾಗಲೆಲ್ಲಾ, ನಮಗೆ ಪಾಪವು ಎಷ್ಟು ದೂರದ ವರೆಗೂ ವ್ಯಾಪಿಸಬಲ್ಲದು ಎಂಬದಕ್ಕೆ ಮತ್ತೊಂದು ಸಾಕ್ಷ್ಯ ಸಿಕ್ಕುತ್ತದೆ. ನಾವು ಪಾಪದಿಂದ-ಮುತ್ತಿಕೊಂಡಿರುವ ಮತ್ತು ಪಾಪದಿಂದ-ಹಾಳುಬಿದ್ದ ಲೋಕದಲ್ಲಿ ಜೀವಿಸುತ್ತೇವೆ. ಆದಾಮನ ಪಾಪದ ದೋಷವು ಆತನ ಸಂತತಿಯವರ ಮೇಲೆ ವರ್ಗಾಯಿಸಲ್ಪಟ್ಟಿತೆಂದು ಬೈಬಲ್ ಕಲಿಸುವದಿಲ್ಲ, ಆದರೆ ಆತನ ಅವಿಧೇಯತೆಯ ದುಷ್ಪರಿಣಾಮಗಳನ್ನು ನಾವು ಅನುದಿನವೂ ಅನುಭವಿಸುತ್ತೇವೆ.

ಬಹುಪಾಲು ಆಧುನಿಕ ವ್ಯಾಖ್ಯಾನಕಾರರು ಈಗ ಕೂಸುಗಳು ಆದಾಮನ ಪಾಪದಿಂದ ತಮ್ಮ ಆತ್ಮಗಳನ್ನು ಕೆಡಿಸಿಕೊಂಡು ಹುಟ್ಟುತ್ತವೆಂಬದಾಗಿ ಉಪದೇಶಿಸುವದಿಲ್ಲ. “ಸಂಪೂರ್ಣ ಅನುವಂಶಿಕ ಭ್ರಷ್ಟತೆ” ಸಿದ್ಧಾಂತವನ್ನು ಆಧುನಿಕತೆಯ ರುಚಿಗೆ ತಕ್ಕಂತೆ ಸರಿಹೊಂದಿಸಲು ಅವರು ಅದನ್ನು ತಿಳಿಯಾಗಿ ಮಾಡಿದ್ದಾರೆ. ಅನೇಕರು ಈಗ ಹೀಗೆ ಉಪದೇಶಿಸಲು ಇಷ್ಟಪಡುತ್ತಾರೆ, ಏನೆಂದರೆ ಆದಾಮನ ಪಾಪವು ಎಲ್ಲಾ ವ್ಯಕ್ತಿಗಳಲ್ಲಿ “ಪಾಪ ಪ್ರವೃತ್ತಿಗಳನ್ನು,” ಪಾಪದ ಕಡೆಗೆ “ಒಲವು” ಅಥವಾ “ವಾಲುವಿಕೆ” ಯನ್ನು ಹೊಂದಿರುತ್ತದೆ-ಅಂದರೆ ನಾವು ಆದಾಮನಿಂದ “ಪಾಪಸ್ವಭಾವ” ವನ್ನು ಬಾಧ್ಯವಾಗಿ ಹೊಂದಿದ್ದೇವೆ. ಅನೇಕ ಲೇಖಕರು ದೃಢವಿಶ್ವಾಸದಿಂದ ಹೇಳುವದೇನೆಂದರೆ ನಾವು

ಪಾಪಮಾಡುವದಕ್ಕೆ "ಪಾಪಸ್ವಭಾವ" ವೇ *ಕಾರಣ.* ಕೆಲವರು ಹೀಗೆ ಸಹ ವಾದಿಸುತ್ತಾರೆ, ಏನಂದರೆ ನಾವೆಲ್ಲಾ ಪಾಪ ಮಾಡುವದು ಅನಿವಾರ್ಯ (ಅಂದರೆ ನಾವು ಪಾಪ ಮಾಡದಂತೆ ಇರುವದಕ್ಕಾಗುವದಿಲ್ಲ) ಯಾಕೆಂದರೆ ನಾವು ಈ "ಪಾಪ ಸ್ವಭಾವ" ವನ್ನು ಆದಾಮನಿಂದ ಬಾಧ್ಯವಾಗಿ ಪಡೆದಿದ್ದೇವೆ. ಕೆಲವು ತರ್ಜುಮೆಗಳು ಈ ದೈವಶಾಸ್ತ್ರವನ್ನು ಪ್ರತಿಬಿಂಭಿಸುತ್ತವೆ. ಉದಾಹರಣೆಗೆ, NIVಯು "ಶರೀರ" (σάρξ, *sarx*) ಎಂಬದಕ್ಕಿ ರುವ ಗ್ರೀಕ್ ಪದವನ್ನು ಸತತವಾಗಿ "ಪಾಪ ಸ್ವಭಾವ" ಎಂದು ಅನುವಾದಿಸುತ್ತದೆ (7:18; 8:4; 13:14). ಕೆಲವರು ಹೇಗೆ ದುಷ್ಟರಾಗುತ್ತಾರೆ ಮತ್ತು ಮಕ್ಕಳು ಸಹ ಹೇಗೆ ತಮ್ಮ ಹೆತ್ತವರಿಗೆ ಅವಿಧೇಯರಾಗುತ್ತಾರೆಂಬದು "ಪಾಪ ಸ್ವಭಾವ" ಹೊಂದಿರುವದನ್ನು ವಿವರಿಸುತ್ತದೆಂದು ನಮಗೆ ಹೇಳಲಾಗುತ್ತದೆ.

ಈ ಪರಿಷ್ಕೃತ "ಅನುವಂಶಿಕ ಭ್ರಷ್ಟತೆ" ಯ ಅಭಿಪ್ರಾಯದ ವಿಷಯದಲ್ಲಿ ನನಗೆ ಸಮಸ್ಯೆಯಿರುತ್ತದೆ. ಮೊದಲನೆಯದಾಗಿ, ಇದು ಈಗಲೂ ಈ ಮುಂಚೆ ತಿಳಿಸಿದ ಬೈಬಲ್.ನ ಸರಳವಾದ ವಾಕ್ಯಭಾಗಗಳಿಗೆ ತದ್ವಿರುದ್ಧವಾಗಿರುತ್ತದೆಂದು ನಂಬುತ್ತೇನೆ, ಜೊತೆಗೆ ಇದು ನಮ್ಮೊಬ್ಬೊಬ್ಬರಿಗೆ ದೇವರು ಕೊಡುವ ಸ್ವೇಚ್ಛಾ-ಚಿತ್ತಕ್ಕೆ ವಿರುದ್ಧವಾಗಿರುತ್ತದೆ. ಎರಡನೆಯದಾಗಿ, ಆದಾಮನು ಹೇಗೆ ತನ್ನ ಸಂತತಿಯವರಿಗೆಲ್ಲಾ "ಪಾಪ ಸ್ವಭಾವವನ್ನು" ವರ್ಗಾಯಿಸುವದಕ್ಕೆ ಸಾಧ್ಯವಾಯಿತೆಂಬದು ನನಗೆ ಕಾಣಿಸುವದಿಲ್ಲ. ಆದಾಮನು ತಾನು ಪಾಪ ಮಾಡುವ ಮುಂಚೆ ಹೊಂದಿದ್ದ ಸಂಗತಿಯೊಂದನ್ನು ವರ್ಗಾಯಿಸಿದನೋ? ಅಂದರೆ, ಆತನು ಸ್ವತಃ "ಪಾಪ ಸ್ವಭಾವ" ವನ್ನು ಹೊಂದಿದ್ದ ಕಾರಣದಿಂದ ಪಾಪ ಮಾಡಿದನೋ? ಹಾಗಿದ್ದಲ್ಲಿ, ಆದಾಮನನ್ನು ಉಂಟುಮಾಡಿದ ದೇವರು ಆತನೊಳಗೆ ಆ "ಪಾಪ ಸ್ವಭಾವ" ವನ್ನು ಇಟ್ಟಿರಬಹುದು ಎಂದಾಗುತ್ತದೆ. ಆದ್ದರಿಂದ ಆದಾಮನ ಪಾಪಕ್ಕೆ ದೇವರೇ ಜವಾಬ್ದಾರನು. ನಿಶ್ಚಯವಾಗಿಯೂ, ನಾವು ಆ ತೀರ್ಮಾನವನ್ನು ಒಪ್ಪಿಕೊಳ್ಳುವದಕ್ಕೆ ಸಾಧ್ಯವಿಲ್ಲ.

ಆದಾಮನು ಪಾಪ ಮಾಡುವದಕ್ಕೆ ಮುಂಚೆ "ಪಾಪ ಸ್ವಭಾವ" ಹೊಂದಿಲ್ಲವಾಗಿದ್ದರೆ, ಆತನ "ಪಾಪ ಸ್ವಭಾವವು" (ಈಗಿನ ಕಾಲದ ಆಯ್ಕೆಯ ಪದವನ್ನು ಉಪಯೋಗಿಸುವ ದಾದರೆ) ಅವನು ತನ್ನ ಸ್ವೇಚ್ಛಾ-ಚಿತ್ತವನ್ನು ಚಲಾಯಿಸಿದ್ದರ ಫಲವಾಗಿ ಪಡೆದುಕೊಂಡಿರ ಬಹುದಾಗಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನ "ಪಾಪ ಸ್ವಭಾವ" ವು ಸಂಪಾದಿಸಿಕೊಂಡ ಗುಣಸ್ವಭಾವವಾಗಿರುತ್ತದೆ. ಆದ್ದರಿಂದ, ಪುರಸ್ಕೃತ "ಅನುವಂಶಿಕ ಭ್ರಷ್ಟತೆ" ಯ ಸಿದ್ಧಾಂತದ ಪ್ರಕಾರವಾಗಿ, ಆದಾಮನು ಸಂಪಾದಿಸಿಕೊಂಡ ಗುಣಸ್ವಭಾವ ವನ್ನು ವರ್ಗಾಯಿಸಿದನೆಂದಾಗುತ್ತದೆ-ಇದು ಮತ್ತೊಂದು ಅರ್ಥವಿಲ್ಲದ ಹಾಗೂ ಅಂಗೀಕರಿಸಿ ಕೊಳ್ಳಲಾಗದ ತೀರ್ಮಾನವಾಗಿರುತ್ತದೆ. ನಾನೊಂದು ಅಪಘಾತಕ್ಕೊಳಗಾಗಿ ನನ್ನ ಒಂದು ತೋಳು ಮುರಿದು ಹೋದರೆ (ಒಂದು ಸಂಪಾದಿಸಿಕೊಂಡ ಗುಣಸ್ವಭಾವ), ನನಗೆ ಹುಟ್ಟುವ ಮಕ್ಕಳು ಒಂದು ತೋಳು ಇಲ್ಲದೆ ಹುಟ್ಟುವರೆಂದು ಅರ್ಥವಾಗುವದಿಲ್ಲ.

ಆದಾಮನು ಪಾಪ ಸ್ವಭಾವದಿಂದ ಉಂಟುಮಾಡಲ್ಪಟ್ಟಿದ್ದರಿಂದ ಪಾಪ ಮಾಡಲಿಲ್ಲ, ಮತ್ತು ನಾವು ಒಂದು "ಪಾಪ ಸ್ವಭಾವ" ದಿಂದ ಹುಟ್ಟಿದ್ದಕ್ಕಾಗಿ ಪಾಪ ಮಾಡುವದಿಲ್ಲ. ಹಾಗಾದರೆ, ಏಕೆ ಆತನು ಪಾಪ ಮಾಡಿದನು? ನಾವು ಏಕೆ ಪಾಪ ಮಾಡುತ್ತೇವೆ? ಮಾನವ

ನಡವಳಿಕೆಯ ಎಲ್ಲಾ ರಹಸ್ಯಗಳೂ ಗೊತ್ತಿವೆಯೆಂದು ಹೇಳಿಕೊಳ್ಳದೆ, ಆದಾಮ ಮತ್ತು ನಮ್ಮ ವಿಷಯವಾದ ಕೆಲವು ಮೂಲಭೂತವಾದ ಬೈಬಲ್.ನ ಸತ್ಯಗಳನ್ನು ವಿಮರ್ಶಿಸುತ್ತೇನೆ:

- ಆದಾಮನ ಆತ್ಮವು ದೇವರಿಂದ ನಿರ್ಮಲ ಹಾಗೂ ಶುದ್ಧವಾಗಿ ನಿರ್ಮಿಸಲ್ಪಟ್ಟಿತ್ತು. ಅದೇ ರೀತಿಯಲ್ಲಿ ನಮ್ಮ ಆತ್ಮಗಳು ನಿರ್ಮಲ ಹಾಗೂ ಶುದ್ಧವಾಗಿರುತ್ತವೆ, ಯಾಕೆಂದರೆ ಅವುಗಳು ದೇವರಿಂದ ಬಂದವುಗಳು (ನೋಡಿರಿ ಪ್ರಸಂಗಿ 12:7; ಜೆಕರ್ಯ 12:1).
- ಆದಾಮನು ಸ್ವೇಚ್ಛಾ-ಚಿತ್ತದೊಂದಿಗೆ ಉಂಟುಮಾಡಲ್ಪಟ್ಟನು; ಆತನು ದೇವರಿಗೆ ವಿಧೇಯನಾಗಬಹುದಿತ್ತು ಅಥವಾ ಅವಿಧೇಯನಾಗಬಹುದಿತ್ತು (ನೋಡಿರಿ ಧರ್ಮೋಪದೇಶಕಾಂಡ 30:15-20).
- ಆದಾಮನು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟ ಜೀವಿಸುವ ಆತ್ಮವಾಗಿದ್ದನು, ಆದರೆ ಆತನಿಗೆ ಒಂದು ಮಾಂಸದ ದೇಹವೂ ಇತ್ತು. ಶೋಧಕನು ಆದಾಮ ಮತ್ತು ಹವ್ವಳ ಮೇಲೆ ದಾಳಿ ಮಾಡಲು ಉಪಯೋಗಿಸಿದ ದಾರಿಯು ಅವರ ಮಾಂಸಿಕ ಹಸಿವೆಗಳ ಮೂಲಕವಾಗಿಯೇ ಆಗಿತ್ತು (ಆದಿಕಾಂಡ 3:6). ಪ್ರತಿಯೊಬ್ಬ ಜವಾಬ್ದಾರಿಯುತ ವ್ಯಕ್ತಿಯು ಆತ್ಮ ಹಾಗೂ ಶರೀರದ ನಡುವೆ ಕಾದಾಟವನ್ನು ಅನುಭವಿಸುತ್ತಾನೆ (ಮತ್ತಾಯ 26:41; ನೋಡಿರಿ ರೋಮಾ 7:18, 19; 1 ಯೋಹಾನ 2:16).
- ಪರದೈಸಿಯಲ್ಲಿ ಸಹ (ಏದೆನ್ ತೋಟದಲ್ಲಿ), ಶೋಧನೆಯು ಇತ್ತು. ಈ ಪಾಪ-ಪೀಡಿತ ಲೋಕದಲ್ಲಿ, ನಾವು ನಿರಂತರವಾಗಿ ಶೋಧನೆಗಳ ಸುರಿಮಳೆಯನ್ನು ಎದುರಿಸುತ್ತೇವೆ (ನೋಡಿರಿ ಇಬ್ರಿಯ 2:18; 4:15).
- ಆಯ್ಕೆಗಳನ್ನು ಮಾಡುವ ಸ್ವಾತಂತ್ರವಿರುವವನು ಯಾವಾಗಲೂ ಸರಿಯಾದ ಆಯ್ಕೆಗಳನ್ನೇ ಮಾಡುವದಿಲ್ಲ. ಒಬ್ಬನು ಶೋಧನೆಗೊಳಗಾಗಿ ತಪ್ಪು ಆಯ್ಕೆಯನ್ನು ಮಾಡುತ್ತಾನೋ, ಅದೇ ಪಾಪ. ಆದಾಮನು ತಪ್ಪು ಆಯ್ಕೆಯನ್ನು ಮಾಡಿದನು-ಮತ್ತು ನಾವು ಸಹ ಅದನ್ನೇ ಮಾಡುತ್ತೇವೆ (3:23).
- ಆದಾಮನು ದೇವರಿಗೆ ಒಂದು ಸ್ವೇಚ್ಛಾ-ಚಿತ್ತದ ಕೃತ್ಯವಾಗಿ ಅವಿಧೇಯನಾದನು. ಆತನು ಅಪರಾಧಿಯೆಂದು ನಿರ್ಣಯಿಸ ಲ್ಪಟ್ಟನು ಯಾಕೆಂದರೆ ಆತನು ಪಾಪ ಮಾಡಿದ್ದನು. ಅದೇ ರೀತಿಯೇ, ನಾವು ಸ್ವತಂತ್ರ ನೈತಿಕ ವ್ಯಕ್ತಿಗಳಾಗಿ ಪಾಪವನ್ನು ಮಾಡುತ್ತೇವೆ ಮತ್ತು ನಮ್ಮ ಪಾಪಗಳಿಗೆ ನಾವೇ ಜವಾಬ್ದಾರರು, ಹೊರತು ಬೇರೆಯವರ ಪಾಪಗಳಿಗಲ್ಲ.

ಆತ್ಮೀಕವಾಗಿ, ನಾವೊಬ್ಬೊಬ್ಬರು ಆದಾಮನಂತೆಯೇ ಅದೇ ಮೂಲಭೂತ ಸ್ಥಾನದಲ್ಲಿಯೇ ಜೀವಿತವನ್ನು ಆರಂಭಿಸು ತ್ತೇವೆ. ನಮ್ಮ ಹಾಗೆಯೇ ಆತನು ಸಹ ಮನುಷ್ಯನಾಗಿದ್ದನು. ಆತನು ತಪ್ಪುಮಾಡಬಹುದಾಗಿತ್ತು, ಮತ್ತು ನಾವು ಸಹ ತಪ್ಪು ಮಾಡುವ ಸ್ವಭಾವದವರು. ಬೇಗನೆ ಅಥವಾ ತಡವಾಗಿ, ನಮ್ಮಲ್ಲಿ ಪ್ರತಿಯೊಬ್ಬರು ಸಹ ಆತನು ಮಾಡಿದ ಅದೇ ಮೂಲಭೂತ ತಪ್ಪನ್ನು ಮಾಡುತ್ತೇವೆ: ನಾವು ದೇವರಿಗೆ ಅವಿಧೇಯರಾಗುತ್ತೇವೆ. ನಾವು ಅವಿಧೇಯರಾದಾಗ, ನಮ್ಮ ಕೃತ್ಯಕ್ಕೆ ನಾವೇ ಜವಾಬ್ದಾರರೆಂದು ಎಣಿಸಲ್ಪಡುತ್ತೇವೆ, ಹೊರತು ಆದಾಮನು ಮಾಡಿದ ಕೃತ್ಯಕ್ಕಾಗಿ ಅಲ್ಲ. Deason ಇದನ್ನು ಈ ರೀತಿಯಲ್ಲಿ ಹೇಳಿದನು: "ಪಾಪಿಗಳು ಪಾಪದ ಸಮಾಜಗಳಿಂದ ಪಾಪಿಗಳಾಗುತ್ತಾರೆ ಹೊರತು ಪಾಪಭರಿತ ವಂಶವಾಹಿಗಳಿಂದಲ್ಲ! ಜನರು ತಮ್ಮ ಆಯ್ಕೆಯಿಂದ ಮತ್ತು ಆಚರಣೆಯಿಂದ ಪಾಪಿಗಳಾಗುತ್ತಾರೆ."[78] ಪುನಃ, ನಾನು ಒತ್ತಿ ಹೇಳುವದೇನೆಂದರೆ ಆದಾಮನ ಪಾಪದ ಅಪರಾಧವನ್ನು ನಾವು ಬಾಧ್ಯವಾಗಿ ಹೊಂದಿರುವದಿಲ್ಲ.

2. ಈ ವಾಕ್ಯಭಾಗವು ಸಾರ್ವತ್ರೀಕ ರಕ್ಷಣೆ ಬಗ್ಗೆ ಉಪದೇಶ *ಮಾಡುವದಿಲ್ಲ.* ರೋಮಾ 5:12-21ನ್ನು ಸಹ *ಪ್ರತಿಯೊಬ್ಬರೂ* ರಕ್ಷಿಸಲ್ಪಡುವರೆಂದು ಪ್ರತಿಪಾದಿಸುವವರಿಂದ ಸಾಕ್ಷ್ಯಾಧಾರದ ವಾಕ್ಯಭಾಗವಾಗಿ ಉಪಯೋಗಿಸಲ್ಪಡುತ್ತದೆ. ಅವರ ನಿಲುವು ಕೆಲವು ಸಾರಿ "ಸರ್ವರ ರಕ್ಷಣೆ ಸಿದ್ಧಾಂತ" ಎಂದು ಕರೆಯಲ್ಪಡುತ್ತದೆ.

ಈ ವಾದವು 18ನೇ ವಚನದ ಸುತ್ತ ಕೇಂದ್ರಿಕೃತವಾಗಿರುತ್ತದೆ: "ಹೀಗಿರಲಾಗಿ ಒಂದೇ ಅಪರಾಧದ [ತೋಟದಲ್ಲಿ ಆದಾಮನ ಪಾಪ] ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ [ಶಿಲುಬೆಯ ಮೇಲೆ ಕ್ರಿಸ್ತನ ಮರಣ] ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯ ಉಂಟಾಗಿ ಜೀವವನ್ನು ಫಲಿಸುತ್ತದೆ." ಇಲ್ಲಿ ನಂಬಿಕೆಯೇನೆಂದರೆ ಆದಾಮನ ಪಾಪವು ಎಲ್ಲರನ್ನು ಮರಣ ತೀರ್ಪಿಗೆ ಗುರಿಮಾಡಿತು, ಆದರೆ ಎಲ್ಲರೂ ರಕ್ಷಿಸಲ್ಪಡುವ ಹಾಗೆ ಕ್ರಿಸ್ತನ ಮರಣವು ಆದಾಮನ ಪಾಪದ ಪ್ರಭಾವವನ್ನು ರದ್ದುಗೊಳಿಸಿತು. ಪುನಃ, ನಾವು ಇಲ್ಲಿ ಒಂದು ಅಸ್ಪಷ್ಟವಾದ ವಾಕ್ಯಭಾಗದ ಮೇಲೆ ಒಂದು ಮುಖ್ಯ ಸಿದ್ಧಾಂತ ಆಧಾರಮಾಡುವದನ್ನು ನೋಡುತ್ತೇವೆ, ವಾಕ್ಯಗಳನ್ನು ವ್ಯಾಖ್ಯಾನಿಸುವದು ಮತ್ತು ಅನ್ವಯಿಸುವದರಲ್ಲಿ ಇದೊಂದು ದೊಡ್ಡ ತಪ್ಪು ಆಗಿರುತ್ತದೆ.

ಎಲ್ಲರೂ ರಕ್ಷಿಸಲ್ಪಡುವದಿಲ್ಲ ಎಂದು ಬೈಬಲ್ ಸ್ಪಷ್ಟವಾಗಿ ಕಲಿಸುತ್ತದೆ. ಅನೇಕ ವಾಕ್ಯಭಾಗಗಳನ್ನು ಉದಾಹರಣೆಯಾಗಿ ಕೊಡಬಹುದು (ನೋಡಿರಿ ಮತ್ತಾಯ 25:34, 41, 46), ಆದರೆ ನಮಗೆ ರೋಮಾಪುರ ಪತ್ರಿಕೆಯಲ್ಲಿ ಪೌಲನು ಹೇಳಿದ ಮಾತುಗಳನ್ನು ನೋಡಿದರೆ ಸಾಕಾಗಿರುತ್ತದೆ. ಅಧ್ಯಾಯ 2ರಲ್ಲಿ, ಆತನು "ದೇವರ ಕೋಪದ ದಿನ ಮತ್ತು ನ್ಯಾಯವಾದ ತೀರ್ಪು" ಕುರಿತು ಮಾತಾಡಿದನು (5:5), "ಸತ್ಯವನ್ನು ಅನುಸರಿಸದೆ ಅನ್ಯಾಯವನ್ನೇ ಅನುಸರಿಸುವವರು" "ಕೋಪ ಮತ್ತು ರೌದ್ರ" ಗಳನ್ನು ಎದುರಿಸುವರು ಎಂದು ಹೇಳುತ್ತಾನೆ (5:8) ಅಧ್ಯಾಯ 12 ರಲ್ಲಿ, ಆತನು ಪುನಃ "ದೇವರ ಕೋಪ" ದ ಬಗ್ಗೆ ಮಾತಾಡಿದನು ಮತ್ತು ಹಳೆ ಒಡಂಬಡಿಕೆಯಿಂದ ಉಲ್ಲೇಖಿಸಿದನು: "ಮುಯ್ಯಿಗೆ ಮುಯ್ಯಿ

ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು" (12:19).

ಕೆಲವರು ನಮ್ಮ ವಾಕ್ಯಭಾಗದಲ್ಲಿರುವ "ಅನೇಕರು" ಮತ್ತು "ಎಲ್ಲರೂ" ಎಂಬ ಪದಗಳನ್ನು ಹಿಡಿದುಕೊಂಡು, ಈ ವಾಕ್ಯಭಾಗವು ಸರ್ವಮೋಕ್ಷದ ಬಗ್ಗೆ ಕಲಿಸುವದಿದ್ದಾಗ್ಯೂ ಇನ್ನೂ ಅಧಿಕವಾದವರು ಕಳೆದುಹೋಗುವರೆಂದು ಹೇಳದೆ ರಕ್ಷಿಸಲ್ಪಡುವರೆಂದಂತೂ ಹೇಳುತ್ತದೆ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಅದು ನಿಜವಾಗಿದ್ದರೆ ಚೆನ್ನಾಗಿರುತ್ತದೆಂದು ನಾವೆಲ್ಲರೂ ಇಚ್ಚಿಸುತ್ತೇವೆ-ಆದರೆ ರಕ್ಷಿಸಲ್ಪಡುವವರಿಗಿಂತಲೂ ಕಳೆದು ಹೋಗುವವರೇ ಹೆಚ್ಚಾಗಿರುತ್ತಾರೆಂದು ಹೇಳಿದ ಯೇಸುವಿನ ಸರಳವಾದ ಉಪದೇಶವನ್ನು ನಾವು ಸ್ವೀಕರಿಸತಕ್ಕದ್ದು (ಮತ್ತಾಯ 7:13, 14).

*ಈ ವಾಕ್ಯಭಾಗವು ಏನು ಕಲಿಸುತ್ತದೆ.*

ಒಂದು ಪ್ರಶ್ನೆಯನ್ನು ಪರಿಗಣಿಸಬೇಕು. ನಾವು ರೋಮಾ 5:12-21 ವಚನಗಳು ಏನನ್ನು ಕಲಿಸುವದಿಲ್ಲ ಎಂಬದನ್ನು ಒತ್ತಿ ಹೇಳಿದ್ದೇವೆ, ಆದರೆ ಅದು ಏನು ಕಲಿಸುತ್ತದೆಂಬದನ್ನು ನಾವು ಇನ್ನೂ ನಿರ್ಧರಿಸಬೇಕಿದೆ. ಈ ವಾಕ್ಯಭಾಗವನ್ನು ವ್ಯಾಖ್ಯಾನಿಸುವದರ ಮೇಲೆ ಹೆಚ್ಚು ಪರಿಣಾಮ ಬೀರುವಂಥ ಒಂದು ಪ್ರಶ್ನೆಯೇನೆಂದರೆ 12ನೇ ವಚನದಲ್ಲಿರುವ "ಮರಣ" ಎಂಬುದು ಶಾರೀರಿಕ ಮರಣವೋ, ಆತ್ಮೀಕ ಮರಣವೋ, ಅಥವಾ ಎರಡೂ ಮಿಶ್ರಣವಾದದ್ದೋ ಎಂಬುದು. ಈ ಪ್ರಶ್ನೆಗೆ ಯಾವ ಸರಳವಾದ ಉತ್ತರವು ಇರುವದಿಲ್ಲ.

12ನೇ ವಚನವು ಹೀಗೆ ಸಾಗುತ್ತದೆ: "ಈ ವಿಷಯವು ಹೇಗಂದರೆ-ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ *ಮರಣವೂ* ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ *ಮರಣವು* ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ಒತ್ತಿ ಹೇಳಿದ್ದು ನನ್ನದು). ಈ ಸನ್ನಿವೇಶದಲ್ಲಿ ಸಂಶಯವಿಲ್ಲದೆ ಈ "ಮರಣ" ಎಂಬುದು ಶಾರೀರಿಕ *ಮರಣ*ವನ್ನು ಸೂಚಿಸುತ್ತದೆಂದು ಹೇಳುವವರ ತರ್ಕವನ್ನು ನಾವು ಅಭ್ಯಾಸಿಸಿದ್ದೇವೆ. ಆ ನಿಲುವಿನಲ್ಲಿರುವ ಕೆಲವು ಸಾಧಕವಾದ ಅಂಶಗಳನ್ನು ನೋಡೋಣ.

12ನೇ ವಚನದ ಮೊದಲ ಭಾಗವು ಆದಿಕಾಂಡ 2 ಮತ್ತು 3 ಅಧ್ಯಾಯಗಳಲ್ಲಿ ಆದಾಮನು ಪಾಪ ಮಾಡಿದ ಕಥೆಯ ಮೇಲೆ ಆಧಾರವಾಗಿರುತ್ತದೆ, ಅಲ್ಲಿ ದೇವರು "ನೀನು ಸತ್ತೇ ಹೋಗುವಿ" ಎಂದು ಹೇಳಿದನು (ಆದಿಕಾಂಡ 2:17; ನೋಡಿರಿ 3:3). ನಮಗೆ ಪಾಪದ ಪರಿಣಾಮದ ಕುರಿತಾಗಿ ನಾಲ್ಕು ಸಾವಿರಕ್ಕೂ ಹೆಚ್ಚು ವರ್ಷಗಳ ಕಾಲದಿಂದ ಬೈಬಲ್ ಮಾಡುತ್ತಾ ಬಂದಿರುವ ಉಪದೇಶದ ಲಾಭವಿರುತ್ತದೆ, ಆದ್ದರಿಂದ ಆದಾಮನ ಪಾಪವು ಶಾರೀರಿಕ ಹಾಗೂ ಆತ್ಮೀಕ ಮರಣಗಳನ್ನು ಫಲಿಸಿತೆಂದು ನಾವು ಅರ್ಥಮಾಡಿಕೊಂಡಿದ್ದೇವೆ. ಹೇಗೂ, ಆದಾಮನು ದೇವರ ಮಾತುಗಳನ್ನು *ಶಾರೀರಿಕ* ಮರಣವೆಂಬದಾಗಿ ಅರ್ಥೈಸಿಕೊಂಡಿರಬಹುದಾಗಿದೆ. ಆತನು ತಿನ್ನಬಾರದೆಂದು ಹೇಳಿದ ಫಲವನ್ನು ತಿಂದದ್ದರಿಂದ, ಮುಂದೆ ಜೀವವೃಕ್ಷದ ಹಣ್ಣನ್ನು ತಿನ್ನಲಾರದವನಾದನು (2:9; 3:24). ಆತನ ಮಾಂಸವು ಕ್ಷೀಣಿಸತೊಡಗಿತು, ನಮಗೂ ಅದೇ ರೀತಿಯಲ್ಲಿರುತ್ತದೆ.[79]

ಪೌಲನು ಆದಾಮ ಮತ್ತು ಕ್ರಿಸ್ತನ ಹೋಲಿಕೆಯನ್ನು ಮುಂಚಿನ ಪತ್ರಿಕೆಯೊಂದರಲ್ಲಿ ಸಹ ಉಪಯೋಗಿಸಿದ್ದನು (ನೋಡಿರಿ 1 ಕೊರಿಂಥ 15:21, 22, 45-49). ರೋಮಾ 5:12-21

ವಚನಗಳು 1 ಕೊರಿಂಥ 15:22ರ ಮಾತುಗಳನ್ನು ಪ್ರತಿಧ್ವನಿಸುವಂತೆ ತೋರುತ್ತವೆ: "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು." 1 ಕೊರಿಂಥ 15ನೇ ಅಧ್ಯಾಯವು *ದೇಹದ* ಪುನರುತ್ಥಾನದ ಮೇಲೆ ಹೆಚ್ಚು ಮಹತ್ವವನ್ನು ಕೊಟ್ಟಿರುತ್ತದೆ, ಆದ್ದರಿಂದ *ದೇಹದ ಮೇಲೆ* ಪಾಪದ ಪರಿಣಾಮದ ಬಗ್ಗೆ ರೋಮಾ 5ನೇ ಅಧ್ಯಾಯವು ಹೆಚ್ಚು ಒತ್ತು ನೀಡಿರುತ್ತದೆಂದು ಹೇಳಿದರೆ ಸೂಕ್ತವೇನಿಸುತ್ತದೆ.

ಒಬ್ಬ ಮನುಷ್ಯನ ಪಾಪವು ಎಲ್ಲಾ ಮಾನವರ ಮೇಲೆ ಪರಿಣಾಮ ಬೀರಿತೆಂದು ಈ ವಾಕ್ಯ ಭಾಗವು ಸ್ಪಷ್ಟವಾಗಿ ಕಲಿಸುತ್ತದೆ. ನಾವು ಕ್ಯಾಲ್ವಿನರ ವಾದವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವದಿಲ್ಲವಾದರೆ, ಆದಾಮನ ಪಾಪವು ಹೇಗೆ, ಪಾಪ ಮಾಡದ ಕೂಸುಗಳೂ ಸೇರಿದಂತೆ ಎಲ್ಲಾ ಮಾನವರ ಮೇಲೆ ಪರಿಣಾಮ ಬೀರಿತು? ಪಾಪದ ಫಲವಾಗಿ ನಾವೆಲ್ಲರೂ *ಶಾರೀರಿಕವಾಗಿ* ಸಾಯುತ್ತೇವೆ.

ಅಲ್ಲದೆ ಈ ವಾಕ್ಯಭಾಗದಲ್ಲಿ "ಮರಣ" ಎಂಬುದು ನಿಸ್ಸಂದೇಹವಾಗಿ *ಆತ್ಮೀಕ* ಮರಣದ ಬಗ್ಗೆ ಮಾತಾಡುತ್ತದೆಂದು ಹೇಳುವವರ ತರ್ಕದ ಬಗ್ಗೆ ಸಹ ಆಲೋಚಿಸಿದ್ದೇನೆ. ಈ ವ್ಯಾಖ್ಯಾನದಲ್ಲಿ ಎರಡು ಸಾಧಕವಾದ ಅಂಶಗಳಿರುತ್ತವೆ:

1. ಈ ವಾಕ್ಯಭಾಗವು "ಹೀಗಿರಲಾಗಿ" ಎಂದು ಆರಂಭಗೊಳ್ಳುತ್ತದೆ, ಅದು ಈ ಮುಂಚೆ ಪೌಲನು ಹೇಳಿದ ಮಾತುಗಳೊಂದಿಗೆ ಅದನ್ನು ಜೋಡಿಸುವದಾಗಿದೆ. ಆ ವಚನದ ಹಿಂದಿನ ಸನ್ನಿವೇಶವನ್ನು ಗಮನಿಸುವದಾದರೆ ಅಲ್ಲಿ ಶಾರೀರಿಕ ಚಿಂತನೆಗಳಿಗಿಂತಲೂ ಆತ್ಮೀಕ ಚಿಂತನೆಗಳೆ ಹೆಚ್ಚು ಸೂಕ್ತವಾಗಿ ಸರಿಹೊಂದುತ್ತವೆ.

2. ಈ ನಿಲುವು "ಎಲ್ಲರೂ ಪಾಪ ಮಾಡಿದ್ದರಿಂದ" (5:12) ಎಂಬುದು 3:23ರಲ್ಲಿನ ಅರ್ಥವನ್ನೇ ಸೂಚಿಸುತ್ತದೆಂದು ಹೇಳುತ್ತದೆ, ಮತ್ತು "ನೀತಿನಿರ್ಣಯ" (5:18) ಎಂಬಂತಹ ಪದಗಳನ್ನು ಮುಂಚಿನ ನಾಲ್ಕೂವರೆ ಅಧ್ಯಾಯಗಳಲ್ಲಿರುವಂತೆಯೇ ಉಪಯೋಗಿಸಲ್ಪಡಬೇಕೆಂದು ಈ ನಿಲುವು ಅಭಿಪ್ರಾಯಪಡುತ್ತದೆ. (ಪೌಲನು ರೋಮಾಪುರದವರಿಗೆ ಬರೆದ ತನ್ನ ಈ ಪತ್ರಿಕೆಯಲ್ಲಿ ವಿವಿಧ ಸನ್ನಿವೇಶದಲ್ಲಿ ವಿವಿಧ ಅರ್ಥವನ್ನು ಸೂಚಿಸುವದಕ್ಕಾಗಿ ಕೆಲವು ಮುಖ್ಯ ಪದಗಳನ್ನು ಉಪಯೋಗಿಸಿದನು; ಆದರೆ ನಿಯಮದಂತೆ, ಹೆಚ್ಚು ಸಾಮಾನ್ಯ ಅರ್ಥವನ್ನೇ ಆರಿಸಿಕೊಳ್ಳತಕ್ಕದ್ದು.)

ಕೇವಲ ಶಾರೀರಿಕ ಮರಣ ಮತ್ತು ಆತ್ಮೀಕ ಮರಣಗಳ ನಡುವೆ ಮಾತ್ರವೇ ಆಯ್ಕೆ ಮಾಡಿಕೊಳ್ಳುವದು ತಪ್ಪಾಗಿರುತ್ತದೆ, ಪೌಲನು ಮನಸ್ಸಿನಲ್ಲಿ ಆದಾಮನ ಪಾಪದಿಂದಾಗುವ ಯಾವದೇ ಮತ್ತು ಪ್ರತಿಯೊಂದು ದಂಡನೆಯನ್ನು ಇಟ್ಟುಕೊಂಡು ಆ ಮಾತುಗಳನ್ನು ಹೇಳಿದನೆಂದು ವಾದಿಸುವವರ ಹೇಳಿಕೆಗಳನ್ನು ಸಹ ನಾನು ಓದಿದ್ದೇನೆ. Dunn ಬರೆದದ್ದೇನೆಂದರೆ, "ಯೆಹೂದಿ ಆಲೋಚನೆಯ ಒಂದು ವಿಶಾಲಕೋನದಲ್ಲಿರುವ ಹಾಗೆ . . . 'ಆತ್ಮೀಕ' ಮತ್ತು 'ಶಾರೀರಿಕ' ಮರಣಗಳ ನಡುವೆ ಯಾವದೇ ಭಿನ್ನತೆಯ ಸಲಹೆ ಇರುವದಿಲ್ಲ . . . ಸೃಷ್ಟಿ ಕರ್ತನಿಂದ ಜೀವಿಗಳು ಬೇರ್ಪಡುವ ಗುಣಲಕ್ಷಣವನ್ನು ಅವರು ನಿರೂಪಿಸುತ್ತಾರೆ."[80] Morris ಹೇಳಿದ್ದೇನೆಂದರೆ, "ಬಹುಶಃ ಎರಡೂ ವಾಕ್ಯಭಾಗಗಳನ್ನು [5:17, 21] ಅರ್ಥಮಾಡಿಕೊಳ್ಳಬಹುದಾದ ಉತ್ತಮ ದಾರಿಯೆಂದರೆ ಎರಡೂ ರೀತಿಯ

ಮರಣದ ಬಗ್ಗೆ ಸೂಚಿಸುವಿಕೆಯನ್ನು ನೋಡುವುದಾಗಿದೆ. ಮನಸ್ಸಿನಲ್ಲಿನ ಶಾರೀರಿಕ ಮರಣ, ಆದರೆ ಅದು ಸ್ವತಃ ಶಾರೀರಿಕ ಮರಣವಲ್ಲ; ಅದು ಆತ್ಮೀಕ ಮರಣಕ್ಕೆ ಗುರುತು ಮತ್ತು ಸಾಂಕೇತಿಕವಾದ ಶಾರೀರಿಕ ಮರಣವಾಗಿರುತ್ತದೆ."[81]

Rogers ಗಮನಕ್ಕೆ ತರುವದೇನೆಂದರೆ, ರೋಮಾಪುರಕ್ಕೆ ಪತ್ರಿಕೆಯನ್ನು ಕಳುಹಿಸಿದಾಗ, ಅದನ್ನು ಪಡೆದುಕೊಂಡವರ ಮುಂದೆ ಅದನ್ನು ಓದಿ ಹೇಳಲಾಗುತ್ತಿತ್ತು.[82] ಈ 5:12-21 ವಚನಗಳನ್ನು ಗಟ್ಟಿಯಾದ ಶಬ್ಧದಲ್ಲಿ ಕೆಲವು ನಿಮಿಷಗಳಲ್ಲಿ ಓದಬಹುದಾಗಿದದ್ದರಿಂದ, ಆಲಿಸಿದವರು ಕೇವಲ ಆ ವಾಕ್ಯಭಾಗದ ಮುಖ್ಯ ತಿರುಳನ್ನು ಮಾತ್ರವೇ ನೆನಪಿನಲ್ಲಿಟ್ಟುಕೊಳ್ಳಲು ಶಕ್ತರಾಗಿದ್ದರು: ಆದಾಮನು ಮಾನವ ಜನಾಂಗದೊಳಕ್ಕೆ ಪರಿಚಯಿಸಿದ ಯಾವದೇ ಸಮಸ್ಯೆಗಳನ್ನು-ಮತ್ತು ಅಧಿಕವಾದದ್ದನ್ನು- ಕ್ರಿಸ್ತನು ಪರಿಹರಿಸಿದ್ದಾನೆ. Edwards ಇದೇ ರೀತಿ ಅಂಶವನ್ನು ಹೇಳಿದನು. ಆತನು ಗಮನಕ್ಕೆ ತಂದದ್ದೇನೆಂದರೆ "ಮುದ್ರಣಕಲೆ" ಯ ಬಲವು ಒಟ್ಟಾರೆ ಚಿತ್ರಣದಲ್ಲಿರುತ್ತದೆಯೇ ಹೊರತು ವಿವರಗಳಲ್ಲಿ ಅಲ್ಲ. ವಿವರಗಳ ಮೇಲೆ ಮುಖ್ಯ ಗಮನ ಕೊಡುವದರಿಂದ ಪ್ರತಿರೂಪ/ನಿಜರೂಪ ಹೋಲಿಕೆಯ ಕುರಿತ ಅಂಶವನ್ನು ಕಳೆದುಕೊಳ್ಳುತ್ತೇವೆ ಎಂದು ಆತನು ಸಲಹೆಮಾಡುತ್ತಾನೆ.[83]

ವಚನ 12 ರಲ್ಲಿನ "ಮರಣ" ಎಂಬದರ ಕುರಿತ ಈ ಎಲ್ಲಾ ನಿಲುವುಗಳಿಂದ ನಾನು ಪ್ರಭಾವಿತನಾಗಿದ್ದೇನೆ. ಈ ನಿಲುವುಗಳನ್ನು ಪ್ರತಿಪಾದಿಸುವವರು ಬೈಬಲ್.ನ ಇತರ ಕಡೆಯಲ್ಲಿರುವ ಸರಳ ವಾಕ್ಯಭಾಗಗಳನ್ನು ಉಲ್ಲಂಘಿಸುವ ರೀತಿಯ ವಿಚಾರಗಳನ್ನು ಬೋಧಿಸುವದಿಲ್ಲವೋ, ಅಲ್ಲಿಯ ವರೆಗೆ ಅವುಗಳಲ್ಲಿ ಯಾವದಾದರೂ ತಪ್ಪು ಎಂದು ಖಚಿತವಾಗಿ ನನ್ನಿಂದ ಹೇಳುವದಕ್ಕಾಗುವದಿಲ್ಲ. ಪ್ರತಿಯೊಬ್ಬರು ಅನುಸರಿಸುವ ವಿಧಾನದಲ್ಲಿ ಸಾಧಕಗಳು ಮತ್ತು ಬಾಧಕಗಳು ಕಂಡು ಬರಬಹುದಾಗಿದೆ. ಒಬ್ಬನು ಯಾವ ನಿಲುವು ತೆಗೆದುಕೊಂಡರೂ, ಜಯಿಸಬೇಕಾಗಿರುವ ಸಮಸ್ಯೆಗಳಿರುತ್ತವೆ.

ವಾಕ್ಯಭಾಗವು ಪರೀಕ್ಷಿಸಲ್ಪಟ್ಟಿದೆ. ಪೌಲನು ಬಹುಶಃ ಈ ವಿಚಾರವು ನೇರವಾದದ್ದೆಂದು ಭಾವಿಸಿದನು: ನಾವು ಆದಾಮನಲ್ಲಿ ಕಳೆದುಕೊಂಡದ್ದನ್ನು ಪುನಃ ಕ್ರಿಸ್ತನಲ್ಲಿ ಅಧಿಕವಾಗಿ ಗಳಿಸಿಕೊಂಡಿದ್ದೇವೆ. ಇದೊಂದು ಪ್ರಾಮುಖ್ಯವಾದ ವಿಚಾರ, ಒಂದು ಸವಿಸ್ತಾರವೂ ಹೌದು, ಆದರೆ ಹಾಗಿದ್ದರೂ ನೇರನುಡಿಯಾಗಿರುತ್ತದೆ. ಆತನು ತನ್ನ ಮಾತುಗಳು ಅಷ್ಟೊಂದು ಸೂಕ್ಷ್ಮವಾದ ಪರಿಶೀಲನೆಗೊಳಪಟ್ಟಿದ್ದಕ್ಕೆ ಆಶ್ಚರ್ಯಪಡುತ್ತಾ ನೆಂಬದರಲ್ಲಿ ಸಂಶಯವಿಲ್ಲ. ಹಾಗಿದ್ದರೂ, ಈ ವಾಕ್ಯಭಾಗವನ್ನು ಪರೀಕ್ಷಿಸಬೇಕಾದ ಕಡ್ಡಾಯವು ನಮಗಿರುತ್ತದೆ. ನಾವು 87-104 ಪುಟಗಳಲ್ಲಿ ನಮಗೆ ಸಾಧ್ಯವಾದಷ್ಟು ಉತ್ತಮ ಪ್ರಯತ್ನ ಮಾಡಿದೆವು.

*ಮುಕ್ತಾಯ.* ಒಂದು ತರಗತಿಯಲ್ಲಿ ಆದಾಮನ ಪಾಪದಿಂದಾದ ಪರಿಣಾಮಗಳ ಬಗ್ಗೆ ಚರ್ಚಿಸುವಾಗ, ಅನೇಕ ವೇಳೆ ಈ ಪ್ರಶ್ನೆಯು ಕೇಳಲ್ಪಡುತ್ತದೆ: "ಆದಾಮನು ಪಾಪವನ್ನು ಮಾಡದೇ ಇದ್ದರೆ ಏನಾಗುತ್ತಿತ್ತು?" ಆ ಪ್ರಶ್ನೆಯ ಒಂದು ಆಯಾಮವೇನೆಂದರೆ ತಾನು ಪಾಪ ಮಾಡದಿದ್ದರೆ *ಆದಾಮನಿಗೆ* ಏನು ಸಂಭವಿಸಿರುತ್ತಿತ್ತು ಎಂಬದು. ಆ ದೃಶ್ಯಾವಳಿಯನ್ನು ಶತಮಾನಗಳಿಂದ ವಾಗ್ವಾದ ಮಾಡಿರುತ್ತಾರೆ. ಒಂದು ಪ್ರಸಿದ್ಧ ಅಭಿಪ್ರಾಯ ಯಾವದೆಂದರೆ ಆದಾಮನು ಮರಣಿಸದೆಯೇ ಹನೋಕ ಮತ್ತು ಎಲೀಯನ

ಹಾಗೆ ಪರಲೋಕಕ್ಕೆ ಕರೆದೊಯ್ಯಲ್ಪಡುತ್ತಿದ್ದನು. ಹೇಗೂ, ಬಹಳ ಜನರು ಆ ಪ್ರಶ್ನೆಯ ಇತರ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ: "ಆದಾಮನು ಪಾಪ ಮಾಡಿರದಿದ್ದರೆ *ಲೋಕವು* ಇಂದಿನ ಪರಿಸ್ಥಿತಿಯಲ್ಲಿ ಇರುತ್ತಿತ್ತೋ?" "ಹೀಗಾಗಿದ್ದರೆ ಹೇಗಿರುತ್ತಿತ್ತು" ಎಂಬ ಸಾಮಾನ್ಯವಾದ ಪ್ರಶ್ನೆಗಳಂತೆ ಇದಕ್ಕೆ ಉತ್ತರಿಸಲು ಅಸಾಧ್ಯವಾಗಿರುತ್ತದೆ ಯಾಕೆಂದರೆ ಆದಾಮನು ಪಾಪವನ್ನು *ಮಾಡಿದ್ದು ನಿಜ.* ನಾನು ಯಾವಾಗಲೂ ಭಾವಿಸಿಕೊಂಡಿರುವದೇನೆಂದರೆ, ಆದಾಮನು ಪಾಪ ಮಾಡಿ ಲೋಕವನ್ನು ದುರವಸ್ಥೆಗೆ ಗುರಿ ಪಡಿಸದೆ ಇದ್ದಿದ್ದರೆ . . . ಮತ್ತು ಆತನ ಮಕ್ಕಳಾಗಲಿ . . . ಆತನ ಮೊಮ್ಮಕ್ಕಳಾಗಲಿ ಮಾಡದೆ ಇದ್ದಿದ್ದರೆ . . . ಅಂತಿಮವಾಗಿ ನನ್ನ ಸರದಿ ಬಂದಾಗ . . . ನಾನು ಪಾಪ ಮಾಡುವ ಸಾಧ್ಯತೆಯಿತ್ತು—ಮತ್ತು ಅಂತ್ಯದಲ್ಲಿ ಫಲವು ಅದೇ ರೀತಿಯಾಗಿರಬಹುದಿತ್ತು.

ನನ್ನ ಉದ್ದೇಶವು ಆದಾಮನ ಕಡೆಗೆ ಬೆರಳುತೋರಿಸಿ "ಪಾಪ ಮಾಡಿದ್ದಕ್ಕೆ ಮತ್ತು ಲೋಕದೊಳಗೆ ಎಲ್ಲಾ ರೀತಿಯ ಸಮಸ್ಯೆಗಳನ್ನು ತಂದಿಟ್ಟಿದ್ದಕ್ಕಾಗಿ ನಿನಗೆ ನಾಚಿಕೆಯಾಗಬೇಕು" ಎಂದು ಹೇಳುವದಲ್ಲ. ಸತ್ಯವೇನೆಂದರೆ ನಾವೆಲ್ಲರೂ ಆದಾಮನ ಹೆಜ್ಜೆಜಾಡುಗಳಲ್ಲಿ ನಡೆದಿದ್ದೇವೆ. ನಾವೆಲ್ಲರೂ ಪಾಪ ಮಾಡಿ ದೇವರ ಮಹಿಮೆಗೆ ಕೊರತೆಯಾಗಿ ಕಂಡಿರುತ್ತೇವೆ (3:23). ಫಲವು ಶಾರೀರಿಕ ಮರಣಕ್ಕಿಂತಲೂ ಎಷ್ಟೋ ಹೆಚ್ಚು ಘೋರವಾಗಿರುತ್ತದೆ: ನಾವು ಆತ್ಮೀಕವಾಗಿ ಸಾಯುತ್ತೇವೆ (6:23) ಮತ್ತು ನಮ್ಮ ಆತ್ಮಗಳನ್ನು "ಎರಡನೆಯ ಮರಣ, ಅಗ್ನಿಯ ಕೆರೆಗೆ" ಗುರಿಯಾಗಿಸುವ ಅಪಾಯಕ್ಕೆ ತರುತ್ತೇವೆ (ಪ್ರಕಟನೆ 20:14). ಇದು ನಮ್ಮನ್ನು ನಮಗಿರುವ ಏಕೈಕ ನಿರೀಕ್ಷೆಯಾದ ಯೇಸು ಕ್ರಿಸ್ತನೆಡೆಗೆ ನಡಿಸುತ್ತದೆ. "ಒಬ್ಬ ಮನುಷ್ಯನಿಂದಲೇ [ಆದಾಮ] ಪಾಪವೂ ಲೋಕದೊಳಗೆ ಸೇರಿತು" (5:12), ಆದರೆ ಮತ್ತೊಬ್ಬ ಮನುಷ್ಯನ ಮೂಲಕ (ಯೇಸು) ಕೃಪೆಯು ಈ ಲೋಕದೊಳಗೆ ಬಂದಿತು. ನೀವು ಆದಾಮನ ಮಾದರಿಯನ್ನು ಅನುಸರಿಸುವದನ್ನು ಮುಂದುವರೆಸಬಹುದು ಅಥವಾ ಈ ಹೊತ್ತು ಯೇಸುವನ್ನು ಹಿಂಬಾಲಿಸುವದಕ್ಕೆ ತೀರ್ಮಾನಿಸಬಹುದು. ನೀವು ಯಾವದನ್ನು ಆಯ್ಕೆಮಾಡಿಕೊಳ್ಳುವಿರಿ?

## ವಾಕ್ಯಭಾಗವನ್ನು ಅರ್ಥೈಸುವ ವವಿಧ ವಿಧಾನಗಳು (5:12-21)

ಒಂದು ಪಾಠದಲ್ಲಿ 5:12–21 ವಚನಗಳನ್ನು ವಿವರಿಸುವದಕ್ಕೆ ಅನೇಕ ದಾರಿಗಳಿರುತ್ತವೆ. Charles R. Swindoll "ಇಬ್ಬರು ಮನುಷ್ಯರ ಕಥೆ" ಎಂಬ ಉಪಾಯವನ್ನು ಉಪಯೋಗಿಸಿದನು, Charles Dickens ಬರೆದ *A Tale of Two Cities* ಎಂಬ ಪುಸ್ತಕದಿಂದ ಈ ದೃಷ್ಟಾಂತಗಳನ್ನು ತೆಗದುಕೊಂಡಿರುತ್ತಾನೆ.[84] William Barclay ನಮ್ಮ ಈ ವಾಕ್ಯಭಾಗದ ಅಧ್ಯಯನಕ್ಕೆ "ನಾಶಗೊಳಿಸು ಮತ್ತು ರಕ್ಷಿಸು" ಎಂಬ ಬಿರುದು ಕೊಟ್ಟಿರುತ್ತಾನೆ, ನಾವು "ಪಾಪದಿಂದ ನಾಶಗೊಂಡಿದ್ದೆವು" ಆದರೆ "ಕ್ರಿಸ್ತನಿಂದ ರಕ್ಷಿಸಲ್ಪಟ್ಟೆವು" ಎಂಬದನ್ನು ಒತ್ತಿ ಹೇಳುತ್ತಾನೆ.[85] ಹಲವಾರು ಲೇಖಕರು John Miltonರ ಶ್ರೇಷ್ಠ ಕೃತಿಯಿಂದ ಆಯ್ದುಕೊಂಡಿದ್ದು ಆ ಪಾಠವನ್ನು "ಪರದೈಸನ್ನು ಕಳಕೊಂಡಿದ್ದು-ಮತ್ತು ಪುನಃ ಗಳಿಸಿಕೊಂಡಿದ್ದು" ಎಂದು ಕರೆದಿರುತ್ತಾರೆ. ನಮ್ಮ ವಾಕ್ಯಭಾಗದಲ್ಲಿ ಹಲವಾರು ಸಾರಿ "ಆಳ್ವಿಕೆಯು ನಡೆಯುತ್ತಿತ್ತು" ಮತ್ತು "ಆಳುವದು" ಎಂಬ ಪದಗಳು

ಉಪಯೋಗಿಸಲ್ಪಟ್ಟಿರುವದರಿಂದ (5:14, 17, 21), D. Stuart Briscoe ತನ್ನ ವ್ಯಾಖ್ಯಾನಗಳಿಗೆ "ನಾಲ್ಕು ಪ್ರಭುಗಳು" ಎಂದು ಬಿರುದು ಕೊಟ್ಟಿರುತ್ತಾನೆ.[86] *ನೀವು* ವಾಕ್ಯಭಾಗದಲ್ಲಿರುವ "ಮತ್ತೂ" ನಿಶ್ಚಯವಲ್ಲವೇ ಎಂಬ ಪದಗಳ ಮೇಲೆ ಸಹ ಹೇಳಿಕೆಗಳನ್ನು ಕೇಂದ್ರಿಕರಿಸಬಹುದು (5:15, 17; ನೋಡಿರಿ 5:20).[87]

## ಸ್ಪಷ್ಟವಾಗಿ ಕಾಣುವ ಸತ್ಯಗಳು (5:12-21)

ರೋಮಾ 5:12-21 ವಚನಗಳನ್ನು ಜಾಗ್ರತೆಯಿಂದ ಅಭ್ಯಾಸ ಮಾಡಿದ ಬಳಿಕವೂ, ಅದರ ಅನೇಕ ವಿವರಗಳ ಕುರಿತು ನಮ್ಮಲ್ಲಿ ಪ್ರಶ್ನೆಗಳು ಸುಳಿದಾಡುತ್ತಿರಬಹುದಾಗಿದೆ. ಹಾಗಿದ್ದರೂ, ಈ ವಾಕ್ಯಭಾಗದಲ್ಲಿ ಹಲವಾರು ಸತ್ಯಗಳು ತಿಳಿಸಲ್ಪಟ್ಟಿವೆ-ಹೇಳಲ್ಪಟ್ಟಿರುವ ಅಥವಾ ಭಾವಾರ್ಥವಿರುವ-ಅವುಗಳನ್ನು ನಾವು ತಪ್ಪಿಸಿಕೊಳ್ಳಬಾರದೆಂಬದು ದೇವರ ಇಚ್ಛೆಯಾಗಿದೆ. ಇವುಗಳಲ್ಲಿ ಕೆಲವೊಂದನ್ನು ನೋಡೋಣ.

*"ಒಬ್ಬನು" ಪ್ರಾಮುಖ್ಯವಾದವನು.* ವ್ಯಕ್ತಿಗಳಾಗಿ, ಕೆಲವು ಸಾರಿ ನಾವು "ಒಬ್ಬರೇ ಒಬ್ಬರು" ಆಗಿದ್ದೇವೆ, ಆದಕಾರಣ ನಾವು ಪ್ರಾಮುಖ್ಯರಲ್ಲ ಎಂಬದಾಗಿ ಭಾವಿಸಿಕೊಳ್ಳುತ್ತೇವೆ. ಈ ವಾಕ್ಯಭಾಗವನ್ನು ವಿಮರ್ಶಿಸುವದರಿಂದ "ಒಬ್ಬನು" ಎಂಬದರ ಮಹತ್ವವೇನೆಂಬದು ತಿಳಿದುಬರುತ್ತದೆ. *ಒಬ್ಬನೇ* ಮನುಷ್ಯನ ಮೂಲಕ ಲೋಕಕ್ಕೆ ನಾಶನ ಉಂಟಾಯಿತು; ನಂತರ *ಒಬ್ಬನೇ* ಮನುಷ್ಯನು ಲೋಕವನ್ನು ರಕ್ಷಿಸುವದಕ್ಕೆ ಬಂದನು. ನಾವು ಒಂದೇ ಜೀವಿತದ, ವಿಶೇಷವಾಗಿ ಕರ್ತನಿಗೋಸ್ಕರ ಸಮರ್ಪಿಸ ಲ್ಪಟ್ಟಿರುವ ಒಂದು ಜೀವಿತದ ಬಲವನ್ನು ಹಗುರವಾಗಿ ಪರಿಗಣಿಸಬಾರದು. Edward Everett Hale ಒಮ್ಮೆ ಹೀಗೆ ಬರೆದನು,

> ನಾನು ಒಬ್ಬನೇ ಒಬ್ಬನು, ಆದರೆ ನಾನೂ ಒಬ್ಬನು.
> ನಾನು ಎಲ್ಲವನ್ನೂ ಮಾಡಲಾರೆನು,
> ಆದರೆ ನಾನು ಏನನ್ನಾದರೂ ಮಾಡಬಲ್ಲೆನು.
> ನಾನು ಏನು ಮಾಡಬಲ್ಲೆನೋ ಅದನ್ನು ಮಾಡಲೇ ಬೇಕು,
> ಮತ್ತು ನಾನು ಏನು ಮಾಡಲೇ ಬೇಕೋ ಅದನ್ನು
> ದೇವರ ಕೃಪೆಯಿಂದ ಮಾಡುವೆನು.[88]

*ಪಾಪವು ಭಯಂಕರ.* ಸಮಾಜದ ಅನೇಕ ವಿಭಾಗಗಳಲ್ಲಿ ಪಾಪದ ಪರಿಕಲ್ಪನೆಯನ್ನು ಬಹಳ ನಿರ್ಲಕ್ಷಮಾಡಲಾಗಿರುತ್ತದೆ. ಕೆಲವರಂತೂ ಪಾಪವು ಇದೆಯೆಂಬದನ್ನೇ ನಿರಾಕರಿಸುತ್ತಾರೆ, ಇನ್ನು ಕೆಲವರು ಬೈಬಲ್ ಯಾವದನ್ನು "ಪಾಪ" ಎನ್ನುತ್ತದೋ ಅದು ಅಷ್ಟೇನೂ ಕೆಟ್ಟದ್ದಾಗಿರುವದಿಲ್ಲ ಎಂದು ವಾದಿಸುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ, ನಾವು ಆದಾಮನ ಪಾಪವನ್ನು ಮತ್ತು ಅದರ ದುಷ್ಪರಿಣಾಮವನ್ನು ನೋಡುವದಾದರೆ, ಪಾಪವು ನಿಜವಾದದ್ದು, ಅದು ಭಯಂಕರವಾದದ್ದು, ಮತ್ತು ಅದರ ಫಲವು ಆಘಾತಕಾರಿಯಾದದ್ದು ಎಂಬದನ್ನು ತಿಳಿಯುತ್ತೇವೆ. ಆದಾಮನು ಪಾಪ ಮಾಡಿ ಮರಣವು ಲೋಕದೊಳಗೆ ಬಂದ ಕ್ಷಣದಲ್ಲಿ "ಇತಿಹಾಸದಲ್ಲಿಯೇ ಅತ್ಯಂಥ ದೀರ್ಘವಾದ ಮತ್ತು ಅತ್ಯಂಥ ಕಾರ್ಗತ್ತಲಿನಿಂದ

ಕೂಡಿದ ಛಾಯೆಯು ಲೋಕವನ್ನೆಲ್ಲಾ ಆವರಿಸಿಕೊಂಡಿತು"[89]!

*ಕೃಪೆಯು ಆಶ್ಚರ್ಯವಾದದ್ದು.* ಮಾನವರಿಗೆ ಸಹಾಯ ಮಾಡಬೇಕೆಂಬ ಯಾವ ನಿರ್ಬಂಧವೂ ದೇವರಿಗೆ ಇರಲಿಲ್ಲ, ಆದರೆ ತನ್ನ ಮಹಾಪ್ರೀತಿಯ ಕಾರಣದಿಂದಾಗಿ ಆತನು ನಮ್ಮ ಮೇಲೆ ಕೃಪೆಯನ್ನು ತೋರಿಸಿದನು (ಯೋಹಾನ 3:16). ಪೌಲನು ಬರೆದದ್ದೇನೆಂದರೆ, "ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು" (5:20). John Bunyan (1628-1688), *Pilgrim's Progress* (*ಯಾತ್ರಿಕನ ಪ್ರಯಾಣ*) *ಎಂಬ ಪುಸ್ತಕದ ಲೇಖಕನು ತನ್ನ ಆತ್ಮ ಚರಿತ್ರೆಯ ಬಿರುದನ್ನು ರೋಮಾ* 5:20*ರ ಮೇಲೆ ಆಧಾರಪಡಿಸಿದನು: ಕೃಪೆಯು ಎಷ್ಟೋ ಪ್ರಬಲವಾಗುವದು.*[90]

*ಶಿಲುಬೆಯು ಅನಿವಾರ್ಯ.* ಆದಾಮನು ಮಾಡಿದ್ದನ್ನು ರದ್ದುಗೊಳಿಸಲು ಕ್ರಿಸ್ತನು ಬಂದಿರದೆ ಹೋಗಿದ್ದರೆ-ಅದು ಎಷ್ಟೊಂದು ದುರಂತಮಯ ಆಗಿರುತ್ತಿತ್ತೆಂಬದನ್ನು ವಿವರಿಸಲು ಪದಗಳೇ ಇರುವದಿಲ್ಲ. ಸತ್ಯವೇನೆಂದರೆ, ಆತನು ಬಂದದ್ದು ನಿಜ, ಮತ್ತು ನಮಗಾಗಿ ಶಿಲುಬೆಯ ಮೇಲೆ ಸತ್ತದ್ದು ನಿಜ! ಎರಡನೆಯ ವಿಶ್ವಯುದ್ಧದ ಮುಕ್ತಾಯದ ವೇಳೆ, Winston Churchill ರಾಯಲ್ ವಾಯುದಳಕ್ಕೆ ತನ್ನ ಗೌರವವಂದನೆಗಳನ್ನು ಸಲ್ಲಿಸುತ್ತಾ ಈ ಮರೆಯಲಾಗದ ಮಾತುಗಳನ್ನು ಹೇಳಿದನು: "ಅತಿ ಸ್ವಲ್ಪ ಜನರಿಗೆ ಇಷ್ಟೊಂದು ಹೆಚ್ಚು ಜನರು ಋಣಸ್ಥರಾಗಿದ್ದದ್ದು ಹಿಂದೆಂದೂ ನಡೆದಿಲ್ಲ." ನಾವು ಶಿಲುಬೆಯ ಮೇಲಿನ ಕ್ರಿಸ್ತನನ್ನು ನೆನಪಿಸಿಕೊಳ್ಳುವ ವೇಳೆ, "ಹಿಂದೆಂದೂ ಕೇವಲ ಒಬ್ಬನೇ ಒಬ್ಬನಿಗೆ ಇಷ್ಟೊಂದು ಜನರು ಋಣಸ್ಥರಾಗಿದ್ದದ್ದು ಸಂಭವಿಸಿರಲಿಲ್ಲ" ಎಂದು ನಾವು ಘೋಷಿಸತಕ್ಕದ್ದು![91]

*ಮರಣವು ತಪ್ಪಿಸಿಕೊಳ್ಳಲಾಗದ್ದು.* ಆದಾಮನ ಪಾಪದ ಫಲಿತವಾಗಿ "ಮರಣವು ಎಲ್ಲರಲ್ಲಿಯೂ ವ್ಯಾಪಿಸಿತು" (5:12). "ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ನೇಮಕವಾಗಿದೆ" (ಇಬ್ರಿಯ 9:27). ನಮ್ಮಲ್ಲಿ ಅನೇಕರು ಮರಣದ ಬಗ್ಗೆ ಯೋಚಿಸುವದಕ್ಕೆ ಬಯಸುವದಿಲ್ಲ, ಆದರೆ ಅದನ್ನು ತಪ್ಪಿಸಿಕೊಳ್ಳಲಾಗದು-ಮತ್ತು ಆದಾದ ಮೇಲೆ ಬರಲಿರುವ ನ್ಯಾಯತೀರ್ಪು ಖಚಿತವಾದದ್ದು. ಬುದ್ಧಿವಂತರು ಜೀವನಕ್ಕಾಗಿ ಮಾತ್ರವಲ್ಲ, ಆದರೆ ಮರಣಕ್ಕಾಗಿ ಸಹ ಸಿದ್ಧತೆ ಮಾಡಿಕೊಂಡಿರುತ್ತಾರೆ.

*ಪುನರುತ್ಥಾನವು ಖಚಿತ.* ಕ್ರಿಸ್ತನು ಆದಾಮನ ಪಾಪದ ಪರಿಣಾಮಗಳನ್ನು ರದ್ದುಗೊಳಿಸಲು ಬಂದನು. ಆದಾಮನ ಪಾಪದ ಕಾರಣದಿಂದ ಪ್ರತಿಯೊಬ್ಬನಿಗೂ ಶಾರೀರಿಕ ಮರಣವು ಉಂಟಾಗುತ್ತದೆ; ಆದರೆ, ಕ್ರಿಸ್ತನ ಮೂಲಕ, ಒಂದು ದಿನ ನಾವೆಲ್ಲರೂ ಎಬ್ಬಿಸಲ್ಪಡುವೆವು. ಯೇಸು ತಿರಿಗಿ ಬರುವಾಗ, "ಸಮಾಧಿಗಳಲ್ಲಿರುವವ ರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28, 29).

*ಜವಾಬ್ದಾರಿಕೆಯು ವೈಯಕ್ತಿಕವಾದದ್ದು.* ನಮ್ಮಲ್ಲಿ ಪ್ರತಿಯೊಬ್ಬನೂ ನಮ್ಮನಮ್ಮ ಸ್ಥಿತಿಗೆ ಜವಾಬ್ದಾರರಾಗಿದ್ದೇವೆ. ಆದಾಮನ ಪಾಪದ ಕಾರಣದಿಂದ ನಾವು ಮರಣಿಸುತ್ತೇವೆ; ಮತ್ತು ದೇವರ ಕೃಪೆಯ ಕಾರಣದಿಂದ, ನಾವು ಒಂದು ದಿನ ಶಾರೀರಿಕವಾಗಿ ಬದುಕುವೆವು.

ಹೇಗೂ, ನಮ್ಮ ಸ್ವಂತ ಪಾಪಗಳ ಕಾರಣದಿಂದಲೇ ನಾವು ಆತ್ಮೀಕವಾಗಿ ಸಾಯುವವರಾಗಿದ್ದೇವೆ, ಮತ್ತು ಕ್ರಿಸ್ತನ ಯಜ್ಞದಲ್ಲಿ ನಂಬಿಕೆಯಿಡುವ ಮೂಲಕ ಮಾತ್ರವೇ ನಾವು ನಿತ್ಯವಾಗಿ ಜೀವಿಸುವದಕ್ಕೆ ಸಾಧ್ಯವಿರುತ್ತದೆ.[92] ನಮಗೆ ನಮ್ಮ ಶಾರೀರಿಕತೆಯ ಬಗ್ಗೆ ಯಾವದೇ ಆಯ್ಕೆಯಿರಲಿಲ್ಲ, ಆದರೆ ನಮ್ಮ ನಂಬಿಕೆಯ ವಿಷಯದಲ್ಲಿ ನಮಗೊಂದು ಆಯ್ಕೆಯಿರುತ್ತದೆ. ಒಮ್ಮೆ ಒಬ್ಬ ವೃದ್ಧನಾದ ಬೋಧಕನಿಗೆ, ರಕ್ಷಣೆಯು ಎಲ್ಲರಿಗಾಗಿಯೂ ಇರುವದಾದರೆ ಏಕೆ ಪ್ರತಿಯೊಬ್ಬರೂ ರಕ್ಷಿಸಲ್ಪಟ್ಟಿಲ್ಲ ಎಂದು ಪ್ರಶ್ನಿಸಲಾಯಿತು. ಆ ವೃದ್ಧನು ಹೀಗೆ ಉತ್ತರಿಸಿದನು, "ಹಿಮದಿಂದ ಕೂಡಿದ ಪರ್ವತಗಳಿಂದ ಸ್ಫಟಿಕದಷ್ಟು ತಿಳಿಯಾದ ನೀರು ಸಾವಿರಾರು ವರ್ಷಗಳಿಂದಲೂ ಹರಿಯುತ್ತಲೇ ಇದ್ದಾಗ್ಯೂ, ಏಕೆ ಇನ್ನು ಕೊಳಕಾಗಿರುವ ಜನರು ಇದ್ದಾರೆ?"[93] ಸತ್ಯವೇನೆಂದರೆ ಕೆಲವರು ತೊಳೆದುಕೊಳ್ಳುವದಕ್ಕೆ ನಿರಾಕರಿಸುತ್ತಾರೆ. ಹಾಗೆಯೇ, ಕೆಲವರು ದೇವರಿಂದ ಕೊಡಲ್ಪಟ್ಟಿರುವ ಯೇಸುವಿನ ವರದಾನವನ್ನು ಸ್ವೀಕರಿಸಿಕೊಳ್ಳಲು ನಿರಾಕರಿಸುತ್ತಾರೆ.

*ಒಂದು ತೀರ್ಮಾನವು ಅನಿವಾರ್ಯ.* Edwards ಬರೆದದ್ದೇನೆಂದರೆ, "ಮಾನವರಾಗಿರುವದೆಂದರೆ ಆಯ್ಕೆಗಳ ಅಡ್ಡರಸ್ತೆಗಳಲ್ಲಿ ನಿಂತುಕೊಳ್ಳುವದಾಗಿದೆ."[94] ನಾವು ನಮ್ಮ ಪಾಪದಲ್ಲಿಯೇ ಉಳಿದು ಆ ಪಾಪದ ಜಜ್ಜಲ್ಪಡುವಂಥ ದುಷ್ಪರಿಣಾಮಗಳನ್ನು ಅನುಭವಿಸುವದಕ್ಕೆ ಆಯ್ಕೆ ಮಾಡಿಕೊಳ್ಳಬಹುದು, ಅಥವಾ ನಾವು ಯೇಸುವಿನಲ್ಲಿ ನಂಬಿಕೆಯಿಡಲು ತೀರ್ಮಾನಿಸಬಹುದು ಮತ್ತು ಆತನನ್ನು ನಮ್ಮ ಜೀವಿತಗಳ ಅರಸನನ್ನಾಗಿ ಮಾಡಿಕೊಳ್ಳಬಹುದು. ಕ್ರಿಸ್ತನಿಗೆ ವಿಧೇಯರಾಗುವದೆಂದರೆ ನಮ್ಮ ಪಾಪಗಳಿಗೆ ಕ್ಷಮೆಯನ್ನು ಹೊಂದಿ ನಮಗಾಗಿ ದೇವರು ಸಿದ್ಧಪಡಿಸಿರುವ ಆಶೀರ್ವಾದಗಳನ್ನು ಪಡೆದುಕೊಳ್ಳುವದಾಗಿದೆ. ತಾವು ತೀರ್ಮಾನಮಾಡುವದಕ್ಕೆ ನಿರಾಕರಿಸಬಹುದೆಂದು, ಅಥವಾ ಕನಿಷ್ಠ ಅದನ್ನು ಮುಂದೂಡಬಹುದೆಂದು ಕೆಲವರು ಯೋಚಿಸುತ್ತಾರೆ; ಆದರೆ ಅವರು ಕ್ರಿಸ್ತನಿಗಾಗಿ ಒಂದು ತೀರ್ಮಾನವನ್ನು ಮಾಡುವದಕ್ಕೆ ವಿಫಲರಾಗುವ ಪ್ರತಿಸಾರಿಯೂ ಆತನ ವಿರುದ್ಧವಾಗಿ ಒಂದು ತೀರ್ಮಾನವನ್ನು ಮಾಡಿದವರಾಗುತ್ತಾರೆ (ನೋಡಿರಿ ಲೂಕ 11:23). ಬಹಳ ವರ್ಷಗಳ ಹಿಂದೆ ಯೆಹೋಶುವನು ಈ ಸವಾಲನ್ನು ನೀಡಿದನು: "ಯೆಹೋವನನ್ನು ಸೇವಿಸುವದು ನಿಮಗೆ ಸರಿಕಾಣದಿದ್ದರೆ ಯಾರನ್ನು ಸೇವಿಸಿಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ . . . ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು" (ಯೆಹೋಶುವ 24:15).

*ಮುಕ್ತಾಯ.* ರೋಮಾ 5:12-21 ನಮಗೆ ಕಲಿಸುವದೇನೆಂದರೆ, ಮಾನವ ಜನಾಂಗದೊಳಗೆ ಆದಾಮನು ತೆಗೆದುಕೊಂಡು ಬಂದ ಎಲ್ಲಾ ಸಮಸ್ಯೆಗಳನ್ನೂ-ಮತ್ತು ಅಧಿಕವಾದದ್ದನ್ನು-ಕ್ರಿಸ್ತನು ಸರಿಪಡಿಸಿದ್ದಾನೆ. ಇದೊಂದು ಕೇವಲ ದೈವಶಾಸ್ತ್ರೀಕ ಹೇಳಿಕೆಯೋ? ಇಲ್ಲ, ಇದೊಂದು ಪ್ರಾಯೋಗಿಕವಾದ ಹಾಗೂ ವೈಯಕ್ತಿಕವಾದ ಸತ್ಯ. ನಾವು ಈ ವಾಕ್ಯಭಾಗವನ್ನು ಕೇವಲ ಆದಾಮ ಮತ್ತು ಕ್ರಿಸ್ತನ ಕಥೆಯೆಂಬದಾಗಿ ಮಾತ್ರವೇ ಯೋಚಿಸಬಾರದು; ಅದು ನಮ್ಮ ಕಥೆ ಸಹ ಆಗಿರುತ್ತದೆ.

ಪವಿತ್ರಾತ್ಮನು ಈ ವಾಕ್ಯಭಾಗವನ್ನು ಬಗೇಹರಿಸಬೇಕಾದ ಒಗಟು ಆಗಿರಬೇಕೇಂದು ಸೇರ್ಪಡೆಗೊಳಿಸಲಿಲ್ಲ, ಆದರೆ ಸ್ವಂತವಾಗಿಸಿಕೊಳ್ಳಬೇಕಾದ ಸತ್ಯಗಳನ್ನು ನಮಗೆ

ತಿಳಿಯಪಡಿಸಬೇಕೆಂದು ಸೇರಿಸಿದನು. ಒಂದು ಸತ್ಯವೇನೆಂದರೆ ನಾವು ಅನುದಿನವೂ ಆದಾಮನ ಪಾಪದ ಕಾರಣದಿಂದ ಬಾಧೆಪಡುತ್ತೇವೆ, ಮತ್ತು ಆ ಪಾಪದ ಕಾರಣದಿಂದಾಗಿ ಒಂದು ದಿನ ಮರಣವನ್ನು ಎದುರಿಸುತ್ತೇವೆ. ಇನ್ನೊಂದು ಸತ್ಯವೇನೆಂದರೆ, ವೈಯಕ್ತಿಕ ಪಾಪದ ಕಾರಣದಿಂದ ನಾವು ಈ ಲೋಕದಲ್ಲಿ ಮತ್ತು ನಿತ್ಯನಿತ್ಯಕ್ಕೂ ದೇವರಿಂದ ಬೇರ್ಪಡಬಲ್ಲೆವು. ಅತ್ಯಂಥ ಹರ್ಷಭರಿತವಾದ ಸತ್ಯವೇನೆಂದರೆ ಯೇಸು ಆದಾಮನ ಹಾಗೂ ನಮ್ಮ ಪಾಪದ ದಂಡನೆಗಳನ್ನು ರದ್ದುಗೊಳಿಸಲು ಬಂದನು. ಆತನು ನಮ್ಮೊಬ್ಬೊಬ್ಬರಿಗೋಸ್ಕರ ಮರಣಿಸಿದನು, ಮತ್ತು ಆತನಲ್ಲಿ ನಾವು ನಂಬಿಕೆ ಯಿಡಬೇಕು ಮತ್ತು ಆತನ ಚಿತ್ತಕ್ಕೆ ವಿಧೇಯರಾಗಬೇಕೆಂದು ಹಂಬಲಿಸುತ್ತಾನೆ (6:3-6). ರೋಮಾಪುರ ಪತ್ರಿಕೆಯ ಈ ವಿಭಾಗವು ನಮ್ಮ ಮನಸ್ಸುಗಳನ್ನು ಯೋಚನೆಯಲ್ಲಿ ತೊಡಗಿಸಿರಬಹುದು ಆದರೆ ಈಗ ಅದು ನಮ್ಮ ಹೃದಯಗಳನ್ನು ಸ್ಪರ್ಶಿಸಲಿ ಮತ್ತು ನಮ್ಮ ಚಿತ್ತವನ್ನು ಪ್ರೇರೇಪಿಸಲಿ!

---

**ಅಡಿ ಟಿಪ್ಪಣಿಗಳು**

[1]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 72. [2]R. C. Bell, *Studies in Romans* (Austin, Tex.: Firm Foundation Publishing House, 1957), 43. [3]Larry Deason, *"The Righteousness of God": An In-depth Study of Romans*, rev. ed. (Clifton Park, N.Y.: Life Communications, 1989), 134. [4]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 875. [5]Ibid., 876. [6]Leon Morris, *The Epistle of the Romans* (Grand Rapids, Mich.: Wm. B. Eerdmans Publishing Co., 1988), 219. [7]John Newton, "Amazing Grace," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [8]William Barclay, *New Testament Words* (Philadelphia: Westminster Press, 1974), 76. [9]Bauer, 457. [10]Ibid.

[11]Barclay, *Romans*, 73. [12]Ibid. [13]Morris, 220, n. 11. [14]Adapted from Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 37. [15]James D. G. Dunn, *Romans 1—8*, Word Biblical Commentary, vol. 38A (Dallas: Word Books, 1986), 253. [16]ವಾಕ್ಯಭಾಗವು ನೀತಿನಿರ್ಣಯದ ಆಶೀರ್ವಾದಗಳ ಕುರಿತು ಮಾತಾಡುವಾಗ, ಅದು ಇಡೀ ದೈವತ್ವದ ಕೆಲಸವನ್ನು ಉಲ್ಲೇಖಿಸುತ್ತದೆ: ತಂದೆ, ಮಗ ಮತ್ತು ಪವಿತ್ರಾತ್ಮನು. [17]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 331. [18]James Burton Coffman, *Commentary on Romans* (Austin, Tex.: Firm Foundation Publishing House, 1973), 197. [19]James R. Edwards, *Romans*, New International Biblical Commentary (Peabody, Mass.: Hendrickson Publishers, 1992), 139. [20]Richard Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 67–68.

[21]ಮೂಲ ನಾಣ್ಣುಡಿ "ತಮಗೆ ತಾವು ಸಹಾಯಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುತ್ತಾನೆ" ಎಂಬದು ಬಹಳ ವರ್ಷ ಹಿಂದಕ್ಕೆ ಸಾಗಿ *Poor Richard's Almanac* ನಲ್ಲಿ ಬರೆಯಲ್ಪಟ್ಟಿರುತ್ತದೆ (June

1736). (John Bartlett, *Familiar Quotations*, 15th ed., rev. and enl., ed. Emily Morison Beck [Boston: Little, Brown and Co., 1980], 347.) [22]G. Delling, "*kairós*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 389. Another word for "time" (χρόνος, *chronos*, used in words like "chronology"), has to do with a period of time. [23]See the discussion of these points in Jimmy Allen, *Survey of Romans*, 7th ed. (Searcy, Ark.: By the author, 1994), 63. [24]Morris, 222. [25]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 144. [26]Morris, 225. [27]C. S. Lewis, *The Problem of Pain* (Oxford: N.p., 1940; reprint, New York: Macmillan Publishing Co., 1962), 91. Lewis was an Oxford University agnostic who became a believer in God. [28]Morris, 224. [29]Stott, 144. [30]Bauer, 521.

[31]J. D. Thomas, *Romans*, The Living Word (Austin, Tex.: R. B. Sweet Co., 1965), 38. [32]For background on these verses, see pages 111-23. [33]Ibid., 40. [34]Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 162. [35]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 83. [36]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 181. [37]ಇದನ್ನು NASB ಯಲ್ಲಿ ಕಾಣಬಹುದು, ಅಲ್ಲಿ ಇಟಾಲಿಕನಲ್ಲಿರುವ ಪದಗಳು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿವೆ. 16 ನೇ ವಚನದಲ್ಲಿ, ವಚನಕ್ಕೆ ಅರ್ಥವನ್ನು ತರುವದಕ್ಕಾಗಿ ಈ ಕೆಳಗಿನ ಮಾತುಗಳು ಸೇರಿಸಲ್ಪಟ್ಟಿವೆ: "ಬಂದಂಥ ಅದು," "ಉದ್ಭವವಾಯಿತು," "ಅಪರಾಧ" ಮತ್ತು "ಉದ್ಭವವಾಯಿತು." [38]Stott, 149. [39]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 178. [40]Deason, 142.

[41]Chrysostom *Homilies on Romans* 10. [42]ಇಂದಿನ ಕೆಲವು ಸಂದೇಹವಾದಿಗಳಂತಲ್ಲದೆ, ಪೌಲನು ಆದಿಕಾಂಡದಲ್ಲಿರುವ ಆದಾಮ ಮತ್ತು ಬೀಳುವಿಕೆಯ ಕಥೆಯನ್ನು ಐತಿಹಾಸಿಕವಾಗಿ ನಿಖರವಾದದ್ದೆಂದು ನಂಬಿದನು. [43]ನಮ್ಮ ವಾಕ್ಯಭಾಗದಲ್ಲಿರುವ "ಮರಣ" ಎಂಬುದು *ಕೇವಲ* ಶಾರೀರಿಕ ಮರಣವನ್ನು ಸೂಚಿಸುತ್ತದೆಂದು ನಂಬುವವರು ಗಮನಕ್ಕೆ ತರುವದೇನೆಂದರೆ *ಒಂದು* ಪಾಪ (ಆದಾಮನ ಪಾಪ) ಲೋಕದ ಮೇಲೆ ಬೀರಿದ ಪರಿಣಾಮದ ಮೇಲೆ ಪೌಲನು ಒತ್ತುಕೊಟ್ಟು ಹೇಳುತ್ತಿದ್ದಾನೆ. ಅವರು ಸಲಹೆ ಮಾಡುವದೇನೆಂದರೆ, ಆದಾಮನು ಪಾಪ ಮಾಡಿದಾಗ, ಅದು ಆತನ ಸಂತತಿಯವರೆಲ್ಲರೂ *ಪಾಪ ಮಾಡಿದಂತಾಗಿತ್ತು*. ಪ್ರೇರಿತ ಲೇಖಕರು ಕೆಲವು ಸಾರಿ ಈ ರೀತಿ ತರ್ಕವನ್ನು ಉಪಯೋಗಿಸಿರುತ್ತಾರೆ. (ನೋಡಿರಿ ಇಬ್ರಿಯ 7:9, 10, ಅಲ್ಲಿ ಲೇಖಕನು ಹೇಳಿದ್ದೇನೆಂದರೆ ಲೇವಿಯನು ತಾನು ಹುಟ್ಟುವದಕ್ಕೆ ಬಹಳ ಕಾಲದ ಹಿಂದೆಯೇ ಮೆಲ್ಕಿಚೇದಕನಿಗೆ ದಶಮಾಂಶವನ್ನು ಕೊಟ್ಟನು-ಯಾಕೆಂದರೆ ಲೇವಿಯ ಮುತ್ತಜ್ಜನಾದ ಅಬ್ರಹಾಮನು ಮೇಲ್ಕಿಚೇದಕನಿಗೆ ದಶಮಾಂಶವನ್ನು ಕೊಟ್ಟಿದ್ದನು.) [44]ರೋಮಾ 3:23 ರಲ್ಲಿರುವ ಪ್ರಕಾರವೇ, ಪೌಲನು ಮನಸ್ಸಿನಲ್ಲಿ *ಜವಾಬ್ದಾರಿಯುತ* ವ್ಯಕ್ತಿಗಳ ವಿಷಯವನ್ನಿಟ್ಟುಕೊಂಡು ಆ ಮಾತುಗಳನ್ನು ಬರೆದಿದ್ದಾನೆಂದು ತಿಳಿಯಲಾಗುತ್ತದೆ. [45]"ಮರಣ" ಎಂಬದನ್ನು ನಮ್ಮ ವಾಕ್ಯಭಾಗದುದ್ದಕ್ಕೂ ಶಾರೀರಿಕ ಎಂದು ತೆಗೆದುಕೊಳ್ಳುವದಾದರೆ, ವಚನ 13 ರಲ್ಲಿ ಪೌಲನ ತಾತ್ಪರ್ಯವು ಹೀಗಿರಬಹುದಾಗಿದೆ: ಶಾರೀರಿಕ ಮರಣವು *ವೈಯಕ್ತಿಕ* ಪಾಪಕ್ಕೆ ದಂಡನೆಯಾಗಿದ್ದಲ್ಲಿ, ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಮುಂಚೆ ಯಾರೊಬ್ಬರೂ ಸಾಯುತ್ತಿರಲಿಲ್ಲ. [46]"ಪಾಪ (ಮೀರುವಿಕೆ)" ಎಂಬುದು παράβασις (*parabasis*) ಎಂಬದರಿಂದ ಬಂದದ್ದಾಗಿದೆ. 4:15 ಮೇಲಿನ ವ್ಯಾಖ್ಯಾನವನ್ನು ನೋಡಿರಿ. [47]ನರಹತ್ಯೆ ಮಾಡುವವರು ಮರಣದಂಡನೆಗೆ ಗುರಿಪಡಿಸಲ್ಪಡಬೇಕು ಎಂದು ದೇವರು ಕಟ್ಟಪ್ಪಣೆಯನ್ನು ಹೊರಡಿಸಿದ್ದನು (ಆದಿಕಾಂಡ 9:6), "ಆದರೆ ಮರಣ ದಂಡನೆಯಲ್ಲಿರುವದನ್ನು ಒಳಗೊಂಡಿರುವ ಯಾವದೇ ಸಾಮಾನ್ಯ ಧರ್ಮಶಾಸ್ತ್ರ (ವಿಧಿಗಳು) ಇರಲಿಲ್ಲ" (McGarvey and Pendleton, 335). [48]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co.,

1985), 124. [49]Bauer, 1019. [50]Ibid., 770.

[51]McGarvey and Pendleton, 336. [52]"ವರದಾನ" δώρημα (*dōrēma*) ಎಭ ಪದವು ವಚನ 15ರಲ್ಲಿರುವ *dōrea* ಎಂಬದರೊಂದಿಗೆ ಸಂಬಂಧ ಹೊಂದಿದೆ. ಈ ಪದವು ದೇವರ "ವರದಾನ"ವನ್ನು ತಿಳಿಸುವದಕ್ಕೆ ಪೌಲನು ಬಳಿಸಿದ ಪದಗಳ ಪಟ್ಟಿಗೆ ಸೇರ್ಪಡೆಗೊಳ್ಳುತ್ತದೆ. [53]"ಶಾರೀರಿಕ ಮರಣ ಮಾತ್ರವೇ?" ಎಂಬ ನಿಲುವಿನಲ್ಲಿ, "ಸಾಯಬೇಕೆಂಬ ನಿರ್ಣಯ"ವು ಕೇವಲ ಶಾರೀರಿಕವಾಗಿ ಮರಣದ ದಂಡನೆಯನ್ನು ಸೂಚಿಸುತ್ತದೆ. [54]ಈ ಮುಂಚೆ ಹೇಳಲ್ಪಟ್ಟ ಹಾಗೆ, ಹೊರತಾಗಿದ್ದದ್ದೆಂದರೆ ಹನೋಕನು (ಆದಿಕಾಂಡ 5:24). ಮತ್ತೊವಬ್ಬನು ಎಲೀಯ (2 ಅರಸು 2:11). ಅಲ್ಲದೆ ಕ್ರಿಸ್ತನು ತಿರುಗಿ ಬರುವಾಗ ಜೀವದಿಂದಿರುವವರೆಲ್ಲರು ಸಹ ಶಾರೀರಿಕವಾಗಿ ಸಾಯುವದಿಲ್ಲ. [55]Lard, 167. [56]ಕೆಲವು "ಶಾರೀರಿಕ-ಮರಣ-ಮಾತ್ರವೇ" ಪ್ರತಿವಾದಿಗಳು ಇಲ್ಲಿ "ನೀತಿನಿರ್ಣಯ" ಎಂಬುದು ಶಾರೀರಿಕ ಮರಣದ ತೀರ್ಪನ್ನು ರದ್ದುಗೊಳಿಸುತ್ತದೆಂದು ವಾದಿಸುತ್ತಾರೆ. [57]McGarvey and Pendleton, 338. [58]"ಶಾರೀರಿಕ-ಮರಣ-ಮಾತ್ರವೇ" ದಾರಿಯನ್ನು ಅನುಸರಿಸು ವವರು "ಸಾಯಬೇಕೆಂಬ ನಿರ್ಣಯ" ವು ಆದಾಮನ ಪಾಪದ ಮೂಲಕ ಶಾರೀರಿಕ ಮರಣ ದಂಡನೆಯಾಗಿ ಎಲ್ಲಾ ಮನುಷ್ಯರಿಗೆ ವ್ಯಾಪಿಸಲ್ಪಟ್ಟಿತೆಂದು ವ್ಯಾಖ್ಯಾನಿಸುವರು. "ಜೀವವುಂಟು ಮಾಡುವ ನೀತಿನಿರ್ಣಯವು" ಪ್ರಾಥಮಿಕವಾಗಿ ಯೇಸು ಎಲ್ಲರನ್ನೂ ಸತ್ತವರೊಳಗಿಂದ ಎಬ್ಬಿಸುವ ಮೂಲಕ ದಂಡನೆಯ ತೀರ್ಪನ್ನು ರದ್ದುಗೊಳಿಸುವದನ್ನು ಸೂಚಿಸುತ್ತದೆ (ಯೋಹಾನ 5:28, 29). [59]Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), 110. [60]J. D. Thomas, Class Notes, *Romans*, Abilene Christian College (1955).

[61]ಗ್ರೀಕ್ ಪ್ರತಿಯಲ್ಲಿ "ಧರ್ಮಶಾಸ್ತ್ರ" (νόμος, *nomos*) ಎಂಬುದರ ಮುಂಚೆ ಯಾವದೇ ನಿರ್ದಿಷ್ಟ ಲೇಖನ ("ದಿ") ಎಂಬುದು ಕಾಣಿಸಿಕೊಂಡಿಲ್ಲ. ಹಾಗಿದ್ದರೂ, ಪೌಲನು ಮೋಶೆಯ ಧರ್ಮಶಾಶ್ತ್ರದ ಬಗ್ಗೆ ಮಾತಾಡುತ್ತಿದ್ದಾನೆಂದು ಸನ್ನಿವೇಶವು ಸೂಚಿಸುತ್ತದೆ. [62]Morris, 241. [63]Bruce, 121. [64]Stott, 139. [65]Adapted from Paul Lee Tan, *Encyclopedia of 7,700 Illustrations* (Rockville, Md.: Assurance Publishers, 1979), 1508. [66]Mary Ann Bird, "A Genius for Loving," *Guideposts* (January 1985): 29. [67]David Mowday, devotional talk presented at Eastside church of Christ, Midwest City, Oklahoma, 7 December 2003. [68]Charles H. Spurgeon, quoted in Joseph S. Excell, *The Biblical Illustrator* (Grand Rapids, Mich.: Baker Book House, 1973), 364. [69]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 95. [70]Deason, 156.

[71]Quoted in Morris, 231. [72]ಕ್ಯಾಥೋಲಿಕ್ ಸಿದ್ಧಾಂತದ ಪ್ರಕಾರ, "ಲಿಂಬೋ" ಎಂಬ ಸ್ಥಳದಲ್ಲಿ ಕ್ರಿಸ್ತನು ಶಿಲಯಬೆಯ ಮೇಲೆ ಯಜ್ಞವಾಗುವ ಮುಂಚೆ ಸತ್ತ ನೀತಿವಂತರು ಇರುವಂಥ ಸ್ಥಳ ಸಹ ಆಗಿರುತ್ತದೆ. (Charles G. Herbermann, et. al., eds., "Limbo," in *The Catholic Encyclopedia* [New York: Encyclopedia Press, 1913], 9:256–59.) [73]ಕೀರ್ತನೆ 73 ಸೂಚಿಸುವದೇನೆಂದರೆ ದುಷ್ಟರು ತಾಯಿಗರ್ಭದಿಂದಲೇ ಸುಳ್ಳುಗಾರರು ಎಂಬದಾಗಿ, ಅದನ್ನು ಅಕ್ಷರಶಃ ತೆಗೆದುಕೊಂಡರೆ ಅಸಾಧ್ಯವಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ಕೀರ್ತನೆ 51:5 ರ ಅಂಶವನ್ನು ತದ್ವಿರುದ್ಧಗೊಳಿಸಲು ಕೀರ್ತನೆ 22:9, 10 ವಚನಗಳು ಅತಿಶಯೋಕ್ತಿಗಳನ್ನು ಉಪಯೋಗಿಸುತ್ತದೆ. ಎರಡೂ ಕೀರ್ತನೆಗಳನ್ನು ದಾವೀದನು ಬರೆದಿದ್ದಾನೆಂದು ಹೇಳಲಾಗುತ್ತದೆ. [74]Edwards, 147. [75]Moo, 189. [76]Edwards, 148. [77]Morris, 231. [78]Deason, 151. [79]ಆದಾಮನು ಪಾಪ ಮಾಡುವ ಮುಂಚೆ ಶಾರೀರಿಕ ಮರಣವೇ ಇರಲಿಲ್ಲವೆಂದು ಕೆಲವರು ನಂಬುತ್ತಾರೆ. ಮಾನವರಿಗೂ ಪ್ರಾಣಿಗಳಿಗೂ ತಿನ್ನಲು ಸಸ್ಯಗಳನ್ನು ಕೊಡಲಾಗಿತ್ತು (ಆದಿಕಾಂಡ 1:29, 30). ಆದಾಮನು ಪಾಪ ಮಾಡಿದ ನಂತರ ಪ್ರಥಮವಾಗಿ ಶಾರೀರಿಕ ಮರಣ ಸಂಭವಿಸಿತು, ಆಗ ಆದಾಮ ಮತ್ತು ಹವ್ವಳಿಗೆ ಉಡುಪು ತಯಾರಿಸುವದಕ್ಕೆ ಪ್ರಾಣಿಗಳು ಕೊಲ್ಲಲ್ಪಟ್ಟವು ಎಂದು ಹೇಳಲಾಗುತ್ತದೆ (ಆದಿಕಾಂಡ 3:21). [80]Dunn, 273.

[81]Morris, 230. [82]Rogers, 84. [83]Edwards, 146. [84]Charles R. Swindoll, *Coming to Terms with Sin: A Study of Romans 1—5* (Anaheim, Calif.: Insight for Living, 1999), 87–88. Swindoll called the two men "Man of Guilt" and "Man of Grace." [85]Barclay, *Romans*, 77, 82. [86]D. Stuart Briscoe, *Romans*, The Communicator's Commentary (Waco, Tex.: Word Books, 1982), 119. [87]See Coffman, 208. [88]Edward Everett Hale, "Lend a

Hand," quoted in 742 *Heart-Warming Poems*, comp. and ed. John R. Rice (Murfreesboro, Tenn.: Sword of the Lord Publishers, 1964), no. 314. [89]Jim Hylton, *Just Dying to Live* (Kalamazoo, Mich.: Master's Press, 1976), 46. [90]Edwards, 154.

[91]Adapted from Burgess, 176. [92]McGuiggan, 170. [93]Adapted from Coffman, 210. [94]Edwards, 151.